12 July 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಬ್ಬರನ್ನು ಚುಚ್ಚಿ ಮಾತನಾಡುವದರಿಂದ
ಸಂಬಂಧ ಹಾಳಾಗುತ್ತವೆ ಹೊರತು
ಮತ್ತೇನು ಸಾಧಿಸಲು ಸಾಧ್ಯವಿಲ್ಲ !

-ಸ್ನೇಹಾ ಆನಂದ್

info.varthaman@gmail.com



ರಾಜ್ಯಸರ್ಕಾರದಿಂದ ಭದ್ರತೆಗೆ ಅಪಾಯ: ಬಿ.ವೈ. ವಿಜಯೇಂದ್ರ ಹೇಳಿಕೆ — ಪುಟ ಸಂ. 2



ದಸರೆ: ಕಂಬಳಕ್ಕೆ ಯಾಕೆ ಖ್ಯಾತೆ: ಬಿಜೆಪಿಗರಿಂದ ಸಾಮೂಹಿಕ ವಿರೋಧ — ಪುಟ ಸಂ. 2



ಅಂಗನವಾಡಿ ನೌಕರರು, ಬಿಸಿಯೂಟದ ಕಾರ್ಯಕರ್ತರ ಪ್ರತಿಭಟನೆ — ಪುಟ ಸಂ. 3

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 223 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ನವೆಂಬರ್‌ಗೆ 'ಪಂಚಾಯ್ತಿ ಫೈಟ್'

## ಬಹುತೇಕ ಸ್ಥಳೀಯ ಸಂಸ್ಥೆಗಳ ಅವಧಿ ಮುಕ್ತಾಯ: ಸಚಿವ ಈಶ್ವರ್ ಖಂಡ್ರೆ


**ಬೆಂಗಳೂರು:** ರಾಜ್ಯದಲ್ಲಿ ಬಹುತೇಕ ಪಂಚಾಯಿತಿಗಳ ಆಡಳಿತಾವಧಿ ಮುಗಿದಿದೆ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಚುನಾವಣೆ ನಡೆಯಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ವಿಕಾಸಸೌಧದ ಕಚೇರಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ಪಂಚಾಯತಿಗಳ ಮೇಲ್ದರ್ಜೆಯಿಂದಾಗಿ ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕಾಗಿದೆ. ಈ ತಿಂಗಳ ಅಂತ್ಯ ಅಥವಾ ಮುಂದಿನ ತಿಂಗಳಲ್ಲಿ ಈ ಪ್ರಕ್ರಿಯೆ ಮುಗಿಯಲಿದೆ. ಮೀಸಲಾತಿ ನಿರ್ಧರಿಸಿ ರಾಜ್ಯ ಚುನಾವಣೆ ಆಯೋಗಕ್ಕೆ ಸಲ್ಲಿಸಲಾಗುವುದು. ಆಯೋಗ 45 ದಿನಗಳಲ್ಲಿ ಚುನಾವಣೆ ನಡೆಸುತ್ತದೆ ಎಂದು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಎಸ್.ಐ.ಆರ್. ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಸಿಬ್ಬಂದಿ ಆ ಕಾರ್ಯದಲ್ಲಿ ನಿರತರಾಗಿದ್ದಾರೆ. ಹೀಗಾಗಿ ಕಾಲಾವಕಾಶ ಕೇಳಲಾಗಿದೆ ಎಂದು ತಿಳಿಸಿದರು.

ಮಹಾತ್ಮ ಗಾಂಧಿ ಅವರು ಗ್ರಾಮ ಸ್ವರಾಜ್ಯದ ಕಲ್ಪನೆ ಹುಟ್ಟುಹಾಕಿದ್ದರು. ಕರ್ನಾಟಕದಲ್ಲಿ 1980ರಲ್ಲಿ ನಜೀರ್ ಸಾಬ್ ಅವರು ಅಧಿಕಾರ ವಿಕೇಂದ್ರೀಕರಣಕ್ಕೆ ನಾಂದಿ ಹಾಡಿದರು ಎಂದು ತಿಳಿಸಿದರು.

ರಾಜ್ಯದ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರು ಪೂರೈಕೆ ಮಾಡಲು ಹಣಕಾಸಿನ ಕೊರತೆ ಇಲ್ಲ. ಈಗಾಗಲೇ 117 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1 ಕೋಟಿ ರೂ. ನೀಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಹೀಗಾಗಿ ಬರ ಪರಿಸ್ಥಿತಿಯ ನಡುವೆಯೂ ನೀರು ಪೂರೈಕೆಗೆ ಆರ್ಥಿಕ ಸಮಸ್ಯೆ ಎದುರಾಗುವುದಿಲ್ಲ ಎಂದರು.





### 2186 ಕೋಟಿ ಕೇಂದ್ರದ ತಡೆ

ಕರ್ನಾಟಕದ ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರದಿಂದ 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಬರಬೇಕಾದ 2186.20 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿಲ್ಲ ಎಂದು ಸಚಿವ ಈಶ್ವರ ಖಂಡ್ರೆ ಟೀಕಿಸಿದರು. ತಂತ್ರಾಂಶದ ತಾಂತ್ರಿಕ ಸಮಸ್ಯೆಯನ್ನು ಮುಂದಿಟ್ಟುಕೊಂಡು ಹಣ ಬಿಡುಗಡೆ ಮಾಡುವುದಿಲ್ಲ ಎನ್ನುವುದು ಸರಿಯಲ್ಲ. ರಾಜ್ಯದ ಸಂಸತ್ ಸದಸ್ಯರು ಒಕ್ಕೊರಲಿನಿಂದ ಈ ಬಗ್ಗೆ ಧ್ವನಿ ಎತ್ತಬೇಕು ಎಂದು ಹೇಳಿದರು. 2029ರ ವೇಳೆಗೆ ಒಂದು ದೇಶ ಒಂದು ಚುನಾವಣೆ ನಡೆಸುತ್ತೇವೆ ಎಂಬ ಸಲಹಾ ಸಮಿತಿ ಅಧ್ಯಕ್ಷರ ಹೇಳಿಕೆಗೆ ಪ್ರತಿಕ್ರಿಯಿಸಿದ ಈಶ್ವರ ಖಂಡ್ರೆ, ಕೇಂದ್ರ ಸರ್ಕಾರ ಸರ್ವಾಧಿಕಾರ ಧೋರಣೆ ಹೊಂದಿದೆ. ದೇಶವೇ ತಮ್ಮ ಕೈಗೊಂಬೆ ಆಗಿರಬೇಕು ಎಂದು ಬಯಸುತ್ತಾರೆ. ಈ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ತನ್ನ ನಿಲುವನ್ನು ತಿಳಿಸಿದೆ. ಪಕ್ಷದ ನಿಲುವೇ ನನ್ನ ನಿಲುವು ಎಂದು ಹೇಳಿದರು.

### ಮನೆ ಮನೆಗೆ ಇ–ಸ್ವತ್ತು

ಇ–ಸ್ವತ್ತಿಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶದಲ್ಲಿ ಸಮಸ್ಯೆಗಳಿವೆ. ಸಾಕಷ್ಟು ದೂರುಗಳು ಬರುತ್ತಿವೆ. ಈ ನಿಟ್ಟಿನಲ್ಲಿ ಎಸ್.ಐ.ಆರ್. ಪ್ರಕ್ರಿಯೆ ಮುಗಿದ ನಂತರ ವ್ಯವಸ್ಥೆಯನ್ನು ಮತ್ತಷ್ಟು ಸರಳೀಕರಿಸಲಾಗುವುದು. ಎಲ್ಲ ಗ್ರಾಮೀಣ ಪ್ರದೇಶದ ಆಸ್ತಿ ಮಾಲಿಕರಿಗೆ ಯಾವುದೇ ತೊಡಕಾಗದಂತೆ ಮನೆ ಬಾಗಿಲಿಗೇ ಇ–ಸ್ವತ್ತು ನೀಡಲು ಕ್ರಮ ವಹಿಸಲಾಗುವುದು ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದರು. ಬಿ ಖರಾಬು ಜಮೀನು ಬಳಸಿಕೊಂಡು ಲೇಔಟ್ ನಿರ್ಮಿಸಿದ್ದರೆ ಅಲ್ಲಿ ಇ–ಸ್ವತ್ತು ನೀಡಲಾಗುವುದಿಲ್ಲ. ಇದಕ್ಕೆ ಕಂದಾಯ ಸಚಿವರೊಂದಿಗೆ ಸಭೆ ನಡೆಸಬೇಕಾಗುತ್ತದೆ ಎಂದು ಹೇಳಿದರು.

ನೀರು ಜೀವಜಲವಾಗಿದ್ದು, ನೀರಿನ ಸಮಸ್ಯೆ ಇರುವ ಪ್ರಸಕ್ತ ಸಂದರ್ಭದಲ್ಲಿ ಜನರು ನೀರು ಪೋಲು ಮಾಡದೆ ಹಿತಮಿತವಾಗಿ ಬಳಸಬೇಕು ಎಂದು ಈಶ್ವರ ಖಂಡ್ರೆ ಮನವಿ ಮಾಡಿದರು.

ಮನರೇಗಾದ ಬದಲಾದ ರೂಪ ವಿಬಿ ರಾಮ್ ಜೀ ಯನ್ನು ರಾಜ್ಯ ಸರ್ಕಾರ ಆರ್ಥಿಕ ಹೊರೆಯ ನಡುವೆಯೂ ಬಡವರು, ದಲಿತರು, ವಂಚಿತರು, ಗ್ರಾಮೀಣ ಬಡವರ ಹಿತದೃಷ್ಟಿಯಿಂದ ಜಾರಿಗೆ ತಂದಿದೆ. ಗ್ರಾಮೀಣ ಜನರಿಗೆ ಉದ್ಯೋಗದ ಖಾತ್ರಿ ನೀಡಲಾಗಿದೆ. ಹೀಗಾಗಿ ಯಾರೂ ಗುಳೆ ಹೋಗುವ ಅಗತ್ಯವಿಲ್ಲ ಎಂದು ಹೇಳಿದರು.

# ಗಾನಕೋಗಿಲೆ ಜಾನಕಿ ವಿಧಿವಶ

ಮೈಸೂರು: ದಕ್ಷಿಣ ಭಾರತದ ಖ್ಯಾತ ಹಿನ್ನೆಲೆ ಗಾಯಕಿ, ಗಾನಕೋಗಿಲೆ ಎಸ್.ಜಾನಕಿ ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ರಾತ್ರಿ ವಯೋಸಹಜ ಅನಾರೋಗ್ಯದಿಂದ ವಿಧಿವಶರಾದರು. ಅವರಿಗೆ 88 ವರ್ಷ ವಯಸ್ಸಾಗಿತ್ತು.



ತೀವ್ರ ಉಸಿರಾಟದ ತೊಂದರೆಯಿಂದ ಅವರನ್ನು ನಗರದ ಅಪೋಲೋ ಆಸ್ಪತ್ರೆಗೆ ಗುರುವಾರ ದಾಖಲು ಮಾಡಲಾಗಿತ್ತು. ಹೃದಯಾಘಾತದಿಂದ ಶನಿವಾರ ರಾತ್ರಿ ನಿಧನರಾದರು. ಜಾನಕಿ ಅವರು ಸುಮಾರು ವರ್ಷಗಳಿಂದ ತಮ್ಮ ಸಾಕುಮಗ ನವೀನ್ ಅವರೊಂದಿಗೆ ಮೈಸೂರಿನಲ್ಲಿ ನೆಲೆಸಿದ್ದರು.

ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿದ್ದರು. ಅವರಿಗೆ ಕರ್ನಾಟಕ ಸರ್ಕಾರದಿಂದ ಡಾ.ರಾಜ್‌ಕುಮಾರ್ ಪ್ರಶಸ್ತಿ, ಆರ್ಯಭಟ, ಅತ್ತಿಮಬ್ಬೆ ಪ್ರಶಸ್ತಿ ನೀಡಲಾಗಿತ್ತು. ತಮಿಳುನಾಡು ಸರ್ಕಾರ ಕಲೈಮಾಮಣಿ ಪ್ರಶಸ್ತಿ ನೀಡಿತ್ತು. ಫಿಲಂಫೇರ್ ಜೀವಮಾನ ಸಾಧನೆ, 4 ಬಾರಿ ರಾಷ್ಟ್ರಪ್ರಶಸ್ತಿ, ಪದ್ಮಭೂಷಣ ಸೇರಿದಂತೆ ನೂರಾರು ಪ್ರಶಸ್ತಿಗಳಿಗೆ ಜಾನಕಿ ಭಾಜನರಾಗಿದ್ದರು.

ಕನ್ನಡದಲ್ಲಿಯೇ 10 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಕನ್ನಡ, ತಮಿಳು, ತೆಲುಗು, ಮಳೆಯಾಲಂ, ಬಂಗಾಳಿ, ಒರಿಸ್ಸಾ, ತುಳು, ಇಂಗ್ಲಿಷ್, ಹಿಂದಿ, ಜಾಪನೀಸ್, ಜರ್ಮನ್ ಫ್ರಂಚ್ ಸೇರಿದಂತೆ ಹಲವು ಭಾಷೆಗಳಲ್ಲಿ 50 ಸಾವಿರಕ್ಕೂ ಹೆಚ್ಚಿನ ಹಾಡುಗಳನ್ನು ಹಾಡಿದ್ದರು.

ತಮ್ಮ 19ನೇ ವಯಸ್ಸಿನಲ್ಲಿ ವೃತ್ತಿ ಜೀವನ ಆರಂಭಿಸಿದ ಅವರು, 60 ವರ್ಷಗಳ ಸುದೀರ್ಘವಾಗಿ ಗಾಯನ ನೀಡಿದ್ದರು. ಸಾಂಸ್ಕೃತಿಕ ನಗರಿ ಮೈಸೂರಿನ ಸಂಗೀತ ಪುಟ 2ಕ್ಕೆ

## ಅಪೋಲೊ ಆಸ್ಪತ್ರೆಯಲ್ಲಿ ಕೊನೆಯುಸಿರು

ಎಸ್. ಜಾನಕಿ ಜುಲೈ 11ರ ಮಧ್ಯಾಹ್ನ 12.49ಕ್ಕೆ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಗೆ ದಾಖಲಿಸಿದಾಗ ಅವರ ಸ್ಥಿತಿ ಗಂಭೀರವಾಗಿತ್ತು. ಅವರನ್ನು ತಕ್ಷಣವೇ ಮೌಲ್ಯಮಾಪನ ಮಾಡಿ ಹೆಚ್ಚಿನ ನಿರ್ವಹಣೆಗಾಗಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ಸ್ಥಳಾಂತರಿಸಲಾಯಿತು. ತೀವ್ರ ವೈದ್ಯಕೀಯ ಆರೈಕೆ ಮತ್ತು ಬಹುಶಿಸ್ತೀಯ ತಂಡದ ನಿರಂತರ ಮೇಲ್ವಿಚಾರಣೆಯ ಹೊರತಾಗಿಯೂ, ಚಿಕಿತ್ಸೆಯ ಸಮಯದಲ್ಲಿ ಅವರಿಗೆ ಹೃದಯ ಸ್ತಂಭನ ಉಂಟಾಯಿತು. ಪ್ರಮಾಣಿತ ವೈದ್ಯಕೀಯ ಪ್ರೋಟೋಕಾಲ್‌ಗಳಿಗೆ ಅನುಗುಣವಾಗಿ ಸುಧಾರಿತ ಹೃದಯ ಶ್ವಾಸಕೋಶ ಪುಟ 4ಕ್ಕೆ

### ಕಾಲು ಜಾರಿ ಬಿದ್ದಿದ್ದ ಎಸ್.ಜಾನಕಿ

ಬಹುಮುಖ ಪ್ರತಿಭೆಯ ಗಾಯಕಿಯಾಗಿ ವ್ಯಾಪಕವಾಗಿ ಅವರು ಮೆಚ್ಚುಗೆ ಪಡೆದಿದ್ದ ಎಸ್.ಜಾನಕಿ, ಎಸ್.ಪಿ. ಬಾಲಸುಬ್ರಹ್ಮಣ್ಯಂ ಮತ್ತು ಸಂಗೀತ ನಿರ್ದೇಶಕ ಇಳಯರಾಜ ಅವರೊಂದಿಗೆ ಆತ್ಮೀಯ ಒಡನಾಟ ಇರಿಸಿಕೊಂಡಿದ್ದರು. 1960, 1970 ಮತ್ತು 1980 ರ ದಶಕಗಳಲ್ಲಿ ಪಿ.ಬಿ. ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ ಮತ್ತು ಡಾ. ರಾಜ್‌ಕುಮಾರ್ ಜೊತೆಗೆ ಆಪ್ತ ಒಡನಾಟ ಹೊಂದಿದ್ದರು. ಹೆಚ್ಚೂಕಡಿಮೆ ಡಾ.ರಾಜ್‌ಕುಮಾರ್ ಅವರ ಎಲ್ಲಾ ಚಿತ್ರಗಳಲ್ಲೂ ಎಸ್.ಜಾನಕಿ ಅವರ ದನಿ ಇರುತ್ತಿತ್ತು. 2019ರ ಮೇ ನಲ್ಲಿ ಕಾಲು ಜಾರಿ ಜಾರಿ ಬಿದ್ದು ಗಾಯಗೊಂಡು ಎಸ್. ಜಾನಕಿ ವೀಲ್‌ಚೇರ್‌ನಲ್ಲಿ ಓಡಾಡುತ್ತಿದ್ದರು.

### ಪುತ್ರ ಶೋಕದಲ್ಲಿದ್ದ ಎಸ್.ಜಾನಕಿ

ಈ ವರ್ಷದ ಜನವರಿಯಲ್ಲಿ ಅವರ ಪುತ್ರ ಮುರಳಿ ಕೃಷ್ಣ ಅವರ ನಿಧನದಿಂದ ಜಾನಕಿ ಅವರು ತೀವ್ರ ಪುತ್ರಶೋಕ ಎದುರಿಸುತ್ತಿದ್ದರು. ಜಾನಕಿ ಅವರಿಗೆ 88 ವರ್ಷ ವಯಸ್ಸಾಗಿತ್ತು. ಈ ವರ್ಷ ಜನವರಿಯಲ್ಲಿ ಅವರ ಪುತ್ರ ಮುರಳಿ ಕೃಷ್ಣ ನಿಧನ ಹೊಂದಿದ್ದರು. ಆ ಬಳಿಕ ಪುತ್ರ ಶೋಕ ಅತಿಯಾಗಿ ಕಾಡಿತ್ತು. ಇದರಿಂದ ಅವರ ಆರೋಗ್ಯ ಹದಗೆಟ್ಟಿತ್ತು. ಈಗ ಅವರು ಮೈಸೂರಿನಲ್ಲಿ ಕೊನೆಯುಸಿರುಎಳೆದಿದ್ದಾರೆ.

### ಪದ್ಮಶ್ರೀ ನಿರಾಕರಣೆ

2013 ರಲ್ಲಿ ಕೇಂದ್ರ ಸರ್ಕಾರ ಘೋಷಿಸಿದ್ದ ದೇಶದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮಭೂಷಣ'ವನ್ನು ಜಾನಕಿ ಅಮ್ಮ ನಯವಾಗಿ ತಿರಸ್ಕರಿಸಿದ್ದರು. ಕಲೆಯ ಮೌಲ್ಯ ಮತ್ತು ದಕ್ಷಿಣ ಭಾರತದ ಕಲಾವಿದರನ್ನು ಗುರುತಿಸುವಲ್ಲಿ ಆಗುತ್ತಿರುವ ತಾರತಮ್ಯವನ್ನು ಪ್ರಶ್ನಿಸಿದ್ದ ಅವರು, "ಆರು ದಶಕಗಳ ನನ್ನ ಸಂಗೀತ ಸೇವೆಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ಸಿಗಬೇಕೇ ಹೊರತು ಪದ್ಮ ಪ್ರಶಸ್ತಿಗಳಲ್ಲ" ಎಂದು ಸಾರಿದ್ದರು.

## ಲೋಕಾಯುಕ್ತ ಎಸ್ಪಿ ದಿಢೀರ್ ಎತ್ತಂಗಡಿ

**ಮಾಜಿ ಸಚಿವ ಜಮೀರ್ ವಿರುದ್ಧ ಕ್ರಮಕ್ಕೆ ಮುಂದಾಗಿದ್ದ ಐಪಿಎಸ್ ಅಧಿಕಾರಿ**

**ಬೆಂಗಳೂರು:** ಮಾಜಿ ಸಚಿವ ಜಮೀರ್ ಅಹ್ಮದ್ ವಿರುದ್ಧ ಕ್ರಮಕ್ಕೆ ಮುಂದಾಗಿದ್ದ ಐಪಿಎಸ್ ಅಧಿಕಾರಿ ಶಿವಪ್ರಕಾಶ್ ದೇವರಾಜು ಅವರನ್ನು ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಅಧೀಕ್ಷಕ (ಎಸ್‌ಪಿ–1) ಹುದ್ದೆಯಿಂದ ಸರ್ಕಾರ ವರ್ಗಾವಣೆ ಮಾಡಿದೆ.

ಮಾಜಿ ಸಚಿವ ಜಮೀರ್ ಅಹ್ಮದ್ ವಿರುದ್ಧ ಸುಮಾರು 20 ಕೋಟಿ ರೂಪಾಯಿ ಮೌಲ್ಯದ ಆದಾಯ ಮೀರಿ ಆಸ್ತಿ ಗಳಿಗೆ ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಸಲು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ಪತ್ರ ಬರೆದ ಮರುದಿನವೇ ಅವರಿಗೆ ಗೇಟ್ ಪಾಸ್ ನೀಡಿ ಮೂಲ ಇಲಾಖೆಗೆ ಮತ್ತೆ ಕಳುಹಿಸಿದೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿದೆ.

2022ರಲ್ಲಿ ಜಾರಿ ನಿರ್ದೇಶನಾಲಯ ಜಮೀರ್ ಅಹ್ಮದ್ ನಿವಾಸದ ಮೇಲೆ ನಡೆಸಿದ್ದ ದಾಳಿಯಲ್ಲಿ ದೊರೆತ ಮಾಹಿತಿ ಆಧಾರದ ಮೇಲೆ ದಾಖಲಾದ ಪ್ರಕರಣದ ತನಿಖೆಯನ್ನು ಶಿವಪ್ರಕಾಶ್ ನೇತೃತ್ವದ ತಂಡ ಪೂರ್ಣಗೊಳಿಸಿತ್ತು. ಬಳಿಕ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ರಾಜ್ಯಪಾಲರಿಗೆ ಪತ್ರ ಬರೆದಿದ್ದರು. ರಾಜ್ಯಪಾಲರು ಅನುಮತಿ ನೀಡಿದ್ದರು.



ಲೋಕಾಯುಕ್ತದಲ್ಲಿ ಒಂದು ವರ್ಷಕ್ಕೂ ಕಡಿಮೆ ಅವಧಿ ಸೇವೆ ಸಲ್ಲಿಸಿದ್ದ ಶಿವಪ್ರಕಾಶ್ ಅವರು ಕಚೇರಿಗೆ ಆಗಮಿಸಿದ ವೇಳೆ ದಿಢೀರ್ ವರ್ಗಾವಣೆ ಆದೇಶವನ್ನು ನೀಡಲಾಗಿದೆ. ಇದು ಸಾರ್ವಜನಿಕರ ಅನುಮಾನಕ್ಕೆ ಪುಟ 2ಕ್ಕೆ

## ಎಚ್‌ಡಿಕೆ ಸವಾಲು ಸ್ವೀಕರಿಸಿದ ಖಂಡ್ರೆ

**ಎಚ್‌ಎಂಟಿ ಭೂಮಿ ಅರಣ್ಯ ಇಲಾಖೆ ಸ್ವತ್ತು: ಈಶ್ವರ್ ಖಂಡ್ರೆ ತಿರುಗೇಟು**

**ಬೆಂಗಳೂರು:** ಅರಣ್ಯೇತರ ಉದ್ದೇಶಕ್ಕೆ ಭೂಪರಿವರ್ತನೆ ಆಗದ ಎಚ್‌ಎಂಟಿ ಭೂಮಿ ಅರಣ್ಯ ಇಲಾಖೆಗೆ ಸೇರಿದೆ. ಇದರ ಮೇಲೆ ರಾಜ್ಯ ಸರ್ಕಾರಕ್ಕೆ ಹಕ್ಕಿದೆಯೇ ಹೊರತು ಎಚ್‌ಎಂಟಿಗಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಅವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಅಭಿವೃದ್ಧಿಯಲ್ಲಿ ರಾಜಕೀಯ ಮಾಡಲ್ಲ. ಕುಮಾರಸ್ವಾಮಿ ಮೇಲೆ ನನಗೆ ವೈಯಕ್ತಿಕ ದ್ವೇಷವೂ ಇಲ್ಲ. ಆದರೆ, ಎಚ್‌ಎಂಟಿ ಅರಣ್ಯ ಭೂಮಿಯನ್ನು ರಾಜ್ಯ ಸರ್ಕಾರ ಮರಳಿ ಪಡೆದು ಅಲ್ಲಿ ಲಾಲ್ ಬಾಗ್, ಕಬ್ಬನ್ ಪಾರ್ಕ್‌ಗಿಂತ ದೊಡ್ಡ ಉದ್ಯಾನ ನಿರ್ಮಿಸಿ ಉತ್ತರ ಬೆಂಗಳೂರಿಗೆ ಅತ್ಯಗತ್ಯವಾದ ಶ್ವಾಸತಾಣ ಉಳಿಸಲು ನಿರ್ಧರಿಸಿದ್ದೆ. ಹೀಗಾಗಿ ಕುಮಾರಸ್ವಾಮಿ ಆರೋಪಕ್ಕೆ ಉತ್ತರ ಕೊಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ಕುಮಾರಸ್ವಾಮಿ ಮಾತನಾಡಿ, ಯಾವ ಖಂಡ್ರೆ, ಎಚ್‌ಎಂಟಿ ಆದಾಗ ನಾನು ಹುಟ್ಟೇ ಇರಲಿಲ್ಲ ಎಂದಿದ್ದಾರೆ. ನಾನೂ ಕೂಡ ಯಾವ ಕುಮಾರಸ್ವಾಮಿ ಎನ್ನಬಹುದು. ಅವರೂ ಕೂಡ ಎಚ್.ಎಂ.ಟಿ. ಹುಟ್ಟಿದಾಗ ಹಸುಗೂಸೇ ಎನ್ನಬಹುದು. ಆದರೆ ನಾನು ಆ ಮಟ್ಟಕ್ಕೆ ಪುಟ 2ಕ್ಕೆ



### ನೀವೂ ಈ ರಾಜ್ಯದವರು ಎಂಬುದ ಮರೆಯಬೇಡಿ!

ನೀವು ಕೇಂದ್ರ ಸಚಿವರಾಗಿದ್ದೀರಿ, ಆದರೂ ಕರ್ನಾಟಕದವರು ಎಂಬುದನ್ನು ಮರೆಯಬೇಡಿ. ಕರ್ನಾಟಕದ ಜಲ, ನೆಲ, ಅರಣ್ಯ ಕಾಪಾಡಿ. ಶ್ವಾಸತಾಣ ಉಳಿಸಿ. ಬಿಡದಿ ಪರಿಸರದ ಬಗ್ಗೆ ಇರುವ ಕಾಳಜಿಯನ್ನೇ ಎಚ್‌ಎಂಟಿ ಭೂಮಿ ಮತ್ತು ದೇವದಾರಿ ಭೂಮಿಗೂ ತೋರಿಸಿ ಎಂದು ಕಿಡಿಕಾರಿದರು.

### ಪೋಕ್ಸೋ ಆರೋಪಿಯಿಂದ ಸಂತ್ರಸ್ತೆ ಸೇರಿ 6 ಮಂದಿ ಕೊಲೆ

**ತೆಲಂಗಾಣ:** ಪೋಕ್ಸೋ ಪ್ರಕರಣದ ಆರೋಪಿ ತನ್ನ ಪತ್ನಿ, ಇಬ್ಬರು ಮಕ್ಕಳು ಹಾಗೂ ಸಂತ್ರಸ್ತೆ ಸೇರಿದಂತೆ 6 ಮಂದಿಯನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ಶನಿವಾರ ರಂಗಾರೆಡ್ಡಿ ಜಿಲ್ಲೆಯಯಲ್ಲಿ ನಡೆದಿದೆ.

ರಾಜ್‌ಕು ಮಾರ್ (28) ಎಂಬಾತ 6 ಮಂದಿಯನ್ನು ಹತ್ಯೆ ಮಾಡಿರುವ ವ್ಯಕ್ತಿ.




ಪೋಕ್ಸೋ ಪ್ರಕರಣದಲ್ಲಿ ಜಾಮೀನಿನ ಮೇಲೆ ಹೊರ ಬಂದಿದ್ದ ಆರೋಪಿ ತನ್ನ ವಿರುದ್ಧ ದೂರು ನೀಡಿದ್ದ 17 ವರ್ಷದ ಸಂತ್ರಸ್ತೆ, ಆಕೆ ತಾಯಿ ಮತ್ತು ಅಜ್ಜಿಯನ್ನು ಆರೋಪಿ ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ನಂತರ ಅವನು ತನ್ನ ಮನೆಗೆ ಹಿಂತಿರುಗಿ ತನ್ನ ಪತ್ನಿ ಸರಿತಾ ಮತ್ತು ಇಬ್ಬರು ಮಕ್ಕಳಾದ ಪರೀಕ್ಷಿತ್ (3) ಮತ್ತು ಧೃವಿಕ್ಷಿತ್ (2) ಅವರನ್ನು ಹರಿತವಾದ ಆಯುಧದಿಂದ ಕೊಂದಿದ್ದಾನೆ. ಹತ್ಯೆಗಳ ನಂತರ, ಅವನು ತನ್ನ ಪೋಷಕರಿಗೆ ಕರೆ ಮಾಡಿ ತನ್ನ ಕುಟುಂಬವನ್ನು ಕೊಂದಿರುವುದಾಗಿ ತಿಳಿಸಿ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

### ಜಲಾಶಯಗಳ ನೀರಿನ ಮಟ್ಟ

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 90.50 ಅಡಿ |
| ಒಳಹರಿವು | 13815 ಕ್ಯುಸೆಕ್ |
| ಹೊರ ಹರಿವು | 807 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2268.93 ಅಡಿ |
| ಒಳಹರಿವು | 9153 ಕ್ಯುಸೆಕ್ |
| ಹೊರ ಹರಿವು | 500 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2843.66 ಅಡಿ |
| ಒಳಹರಿವು | 2751 ಕ್ಯುಸೆಕ್ |
| ಹೊರ ಹರಿವು | 180 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2902.86 ಅಡಿ |
| ಒಳಹರಿವು | 6580 ಕ್ಯುಸೆಕ್ |
| ಹೊರಹರಿವು | 300 ಕ್ಯುಸೆಕ್ |

### ನನಗೆ ಬಿಟ್ಟರೆ ಕೆಎಟಿ, ಕೆಪಿಎಸ್ಸಿ ರದ್ದು: ಪ್ರಿಯಾಂಕ್

**ಬೆಂಗಳೂರು:** ನನಗೆ ಬಿಟ್ಟರೆ ರಾಜ್ಯದ ಕೆಎಟಿ ಮತ್ತು ಕೆಪಿಎಸ್ಸಿಯನ್ನು ರದ್ದು ಮಾಡುತ್ತೇನೆ ಅಂತ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಕೆಪಿಎಸ್ಸಿ ಅಧ್ಯಕ್ಷರು ಮತ್ತು ಪುತ್ರಿಯ ಮೇಲೆ ಕೇಸು ದಾಖಲು ವಿಚಾರಕ್ಕೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ನಕಲಿ ಆದಾಯ ಪ್ರಮಾಣ ಪತ್ರ ನೀಡಿರುವ ಪುಟ 2ಕ್ಕೆ

## ಪೊಲೀಸ್ ಅಧಿಕಾರಿಗಳು 'ಡೀಲ್ ಬಿಡಿ'

**ಅಪರಾಧ ಕೃತ್ಯದಲ್ಲಿ ಭಾಗಿಯಾದರೆ ನಿರ್ದಾಕ್ಷಿಣ್ಯ ಕ್ರಮ | ಸಿಎಂ ಡಿಕೆಶಿ ಎಚ್ಚರಿಕೆ**

**ಬೆಂಗಳೂರು:** ರಾಜ್ಯದ ಯಾವುದೇ ಪೊಲೀಸ್ ಅಧಿಕಾರಿಗಳು ಡೀಲ್ ಹಾಗೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವುದನ್ನು ಬಿಡಿ. ಇಂತಹ ವಿಚಾರದಲ್ಲಿ ಭಾಗಿಯಾದ ಅಧಿಕಾರಿ ವಿರುದ್ಧ ನಿರ್ದಾಕ್ಷಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದರು.

ವಿಧಾನಸೌಧದ ಆವರಣದಲ್ಲಿ ಶನಿವಾರ ನಡೆದ ರಾಜ್ಯದ ಜಿಲ್ಲಾ ಘಟಕಗಳಿಗೆ 32 ಅತ್ಯಾಧುನಿಕ ಮೊಬೈಲ್ ಫೊರೆನ್ಸಿಕ್ ವ್ಯಾನ್ ಹಾಗೂ 75 ಬೊಲೆರೋ ವಾಹನಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಪೊಲೀಸ್ ಇಲಾಖೆಗೆ ಶಕ್ತಿ ತುಂಬಲಾ ಗುತ್ತಿದೆ. ಗಡಿಯಲ್ಲಿ ಸೈನಿಕ, ಗಡಿಯೊಳಗೆ ಆರಕ್ಷಕ. ಈ ಇಬ್ಬರಿಂದ ನಮ್ಮ ರಾಜ್ಯ ಹಾಗೂ ದೇಶ ನೆಮ್ಮದಿಯಾಗಿ ಬದುಕಲು ಸಾಧ್ಯ. ನಮ್ಮ ಪೊಲೀಸರು ಒಂದು ವರ್ಷದಲ್ಲಿ 375 ಕೋಟಿ ಪುಟ 2ಕ್ಕೆ





## ಡಿ.ಕೆ.ಶಿವಕುಮಾರ್ ಟೆಂಡರ್ ಮುಖ್ಯಮಂತ್ರಿ

**3–4 ಸಾವಿರ ಕೋಟಿ ನೀಡಿ ಸಿಎಂ ಸ್ಥಾನ: ಆರ್.ಅಶೋಕ್ ಆರೋಪ**

**ಮೈಸೂರು:** ರಾಜ್ಯದಲ್ಲಿರುವುದು ಟೆಂಡರ್ ಸರ್ಕಾರ. ಡಿ.ಕೆ. ಶಿವಕುಮಾರ್ ಟೆಂಡರ್ ಮುಖ್ಯಮಂತ್ರಿ. ಮುಖ್ಯಮಂತ್ರಿ ಗಾದಿಯನ್ನು ರಾಹುಲ್ ಗಾಂಧಿ ಅವರಿಂದ ಟೆಂಡರ್ ಮೂಲಕ ಪಡೆದುಕೊಂಡಿದ್ದಾರೆ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದರು.

ನಗರದ ಜೆ.ಕೆ. ಮೈದಾನದಲ್ಲಿ ಕಾಯಕ ಸಮುದಾಯಗಳ ಒಕ್ಕೂಟ ಶನಿವಾರ ಆಯೋಜಿಸಿದ್ದ ವಿಧಾನಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ ಅವರಿಗೆ ಅಭಿನಂದನೆ ಸಮಾರಂಭದಲ್ಲಿ ಅವರು ಮಾತನಾಡಿ, ಡಿಕೆಶಿ 3 ಸಾವಿರ ಕೋಟಿಯಿಂದ 4 ಸಾವಿರ ಕೋಟಿ ಕೊಡುವುದಾಗಿ ರಾಹುಲ್ ಗಾಂಧಿಗೆ ಹೇಳಿದ್ದಾರೆಂದು ಆಪಾದಿಸಿದರು.


ಡಿಕೆಶಿ ಎಂದರೆ ಟೆಂಡರ್. ಕುರ್ಚಿಯನ್ನೂ ಟೆಂಡರ್‌ನಲ್ಲೇ ಖರೀದಿಸಿದ್ದಾರೆ. ಈಗ ಎಲ್ಲದಕ್ಕೂ ಟೆಂಡರ್ ಕರೆಯಲಾಗುತ್ತಿದೆ. ನನಗಿರುವ ಮಾಹಿತಿ ಪ್ರಕಾರ, ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಈವರೆಗೆ 60 ಸಾವಿರ ಎಕರೆ ಭೂಸ್ವಾಧೀನಕ್ಕೆ ಅಧಿಸೂಚನೆ ಮಾಡಲಾಗಿದೆ. ಮುಂದಿನ ಯಾವ ಮುಖ್ಯಮಂತ್ರಿಯೂ ಯಾವ ಟೆಂಡರ್ ಕೂಡ ಕರೆಯಲಾಗುವುದಿಲ್ಲ. ಅಷ್ಟೊಂದನ್ನು ಈಗಾಗಲೇ ಕರೆಯಲಾಗಿದೆ ಎಂದು ವಾಗ್ದಾಳಿ ನಡೆಸಿದರು.



ಡಿಕೆಶಿ ಮುಖವಾಡದ ಸಿಎಂ ಎಂದು ದೂರಿದ ಅವರು, ವಿಭೂತಿ, ನಾಮ ಹಾಕುತ್ತಾರೆ. ರಾಜ್ಯಕ್ಕೆ ನಾಮ ಹಾಕುತ್ತಿರುವ ವ್ಯಕ್ತಿ ಅವರು. ಹೃದಯದ

# ಪೂಜೆ ಮಾಡದೆ ಮಗ ಆಹಾರ ಮುಟ್ಟಲ್ಲ!

**ಇಂತಹ ನಂಬಿಕೆ ಹುಟ್ಟುಹಾಕಿದ್ದು ಮನುವಾದಿಗಳು: ಸಿದ್ದರಾಮಯ್ಯ ಟೀಕೆ**



**ಬೆಂಗಳೂರು:** ಪ್ರತಿ ದಿನ ಬೆಳಗ್ಗೆ ಪೂಜೆ ಮಾಡದೆ ನನ್ನ ಮಗ ಆಹಾರ ಮುಟ್ಟುವುದಿಲ್ಲ. ನೀರನ್ನೂ ಸಹ ಕುಡಿಯುವುದಿಲ್ಲ. ಇಂತಹ ನಂಬಿಕೆಗಳನ್ನು ಹುಟ್ಟುಹಾಕಿರುವುದು ಮನುವಾದಿಗಳು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರ 'ಮೆಮೊರಬಲ್ ಟ್ರಯಲ್ಸ್' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಸಿದ್ದರಾಮಯ್ಯ, ವೈದ್ಯರು, ಎಂಜಿನಿಯರ್‌ಗಳು, ಪ್ರಾಧ್ಯಾಪಕರು, ವಿಜ್ಞಾನಿಗಳು, ತಂತ್ರಜ್ಞರು ಕೂಡ ಮೂಢನಂಬಿಕೆಗಳನ್ನು ಅನುಸರಿಸುತ್ತಿದ್ದಾರೆ. ನನ್ನ ಮಗ ಸಚಿವ ಯತೀಂದ್ರ ವೈದ್ಯರಾಗಿದ್ದರೂ ಪ್ರತಿದಿನ ಪೂಜೆ ಮಾಡುತ್ತಾನೆ. ನಾನು ಮಾಡುವುದಿಲ್ಲ. ಏನು ಮಾಡುವುದು? ಪೂಜೆ ಮಾಡದೆ ಊಟ ಮಾಡುವುದಿಲ್ಲ, ನೀರು ಕುಡಿಯುವುದಿಲ್ಲ. ಅದು ಅವರ ನಂಬಿಕೆ. ಆದರೆ ಇಂತಹ ನಂಬಿಕೆಗಳನ್ನು ಸೃಷ್ಟಿಸಿದ್ದು ಮನುವಾದಿಗಳು ಎಂದು ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾರತದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರೊಂದಿಗೆ ಹೋಲಿಸುವ ಪ್ರವೃತ್ತಿಯನ್ನು ಟೀಕಿಸಿದ ಸಿದ್ದರಾಮಯ್ಯ, ನೆಹರೂ ಮತ್ತು ಮೋದಿ ಅವರನ್ನು ಹೇಗೆ ಹೋಲಿಸಬಹುದು? ಇಬ್ಬರೂ ಹೋಲಿಕೆಗೆ ಮೀರಿದವರು. ನೆಹರೂ 17 ವರ್ಷ ಪ್ರಧಾನಿಯಾಗಿದ್ದರು. ಮೋದಿ 12 ವರ್ಷ ಪೂರ್ಣಗೊಳಿಸಿದ್ದಾರೆ. ಮೋದಿ ನೆಹರೂ ದಾಖಲೆ ಮುರಿದಿದ್ದಾರೆ ಎಂದು ಹೇಳುತ್ತಾರೆ. ಇಂತಹ ವಿಷಯಗಳ ಬಗ್ಗೆ ಚರ್ಚೆಯಾಗದಿದ್ದರೆ ಸತ್ಯ ಹೇಗೆ ಹೊರಬರುತ್ತದೆ ಎಂದು ಪ್ರಶ್ನಿಸಿದರು.

ಸಂವಿಧಾನ ಜಾರಿಯಾಗಿ 76 ವರ್ಷಗಳಾದರೂ ಅದರ ಆದರ್ಶಗಳು ಸಂಪೂರ್ಣವಾಗಿ ಸಾಕಾರವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಕೆಲವು ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದರು. ಶಿಕ್ಷಣದ ಹಕ್ಕು, ಆಹಾರದ ಹಕ್ಕು, ಮಾಹಿತಿ ಪುಟ 2ಕ್ಕೆ

## ಮೊದಲ ಪುಟದಿಂದ

### ಪೊಲೀಸ್ ಅಧಿಕಾರಿಗಳು 'ಡೀಲ್ ಬಿಡಿ'

ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಪೊಲೀಸ್ ಇಲಾಖೆ ಅಧಿಕಾರಿಗಳು 1500 ಡ್ರಗ್ ಪೆಡ್ಲರ್ ಗಳನ್ನು ಬಂಧಿಸಿದ್ದಾರೆ ಎಂದು ಹೇಳಿದರು. ನಮ್ಮ ಪೊಲೀಸ್ ಇಲಾಖೆಗೆ ದೇಶದಲ್ಲೇ ದಕ್ಷ ಇಲಾಖೆ ಎಂದು ಹೆಸರು ಪಡೆದಿದೆ. ಪೊಲೀಸ್ ಸಿಬ್ಬಂದಿ ಪರಿಶ್ರಮ, ನಿಷ್ಠೆ, ಕಾರ್ಯಕ್ಷಮತೆಯಿಂದ ಈ ಹೆಸರು ಬಂದಿದೆ. ಅಪರಾಧಗಳಲ್ಲಿ ವಿವಿಧ ರೂಪಗಳಿವೆ. ತಂತ್ರಜ್ಞಾನ, ಎಐ ಬಂದ ಬಳಿಕ ಅಪರಾಧ ಪತ್ತೆಹಚ್ಚಲು ಅನೇಕ ಕ್ರಮ ಕೈಗೊಳ್ಳಲಾಗಿದೆ. ಗೂಂಡಾಗಿರಿ ತಡೆಗಟ್ಟಲು, ಎಲ್ಲಾ ಠಾಣೆಗಳಲ್ಲಿ ಪಡೆ ರಚಿಸಲು ನಿರ್ದೇಶನ ನೀಡಿದ್ದೇನೆ ಎಂದರು.

ರಾಮಮಂದಿರದಲ್ಲಿ ಯಾವ ರೀತಿ ಕಳ್ಳತನವಾಗಿದೆ ಎಂದು ಗಮನಿಸಿದ್ದೀರಿ. ನಮ್ಮ ರಾಜ್ಯದಲ್ಲಿ ಮುಂಜಾಗ್ರತೆಯಿಂದ ಮುಜರಾಯಿ ಇಲಾಖೆಯ ಎಲ್ಲಾ ದೇವಾಲಯಗಳಲ್ಲಿ ಸ್ಥಳೀಯ ಮುಖಂಡರು, ಪೊಲೀಸ್ ಅಧಿಕಾರಿಗಳು ಸೇರಿ ಹುಂಡಿ ತೆಗೆಯುವುದರಿಂದ, ಹಣ ಎಣಿಕೆ ಮಾಡುವುದು ಸೇರಿ ಅವುಗಳನ್ನು ಬ್ಯಾಂಕಿಗೆ ಸಲ್ಲಿಸುವವರೆಗೂ ಎಲ್ಲವನ್ನು ವಿಡಿಯೋ ದಾಖಲಾತಿ ಮಾಡಬೇಕು. ಈ ಬಗ್ಗೆ ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು. ನಮ್ಮ ರಾಜ್ಯದಲ್ಲಿ ಇಂತಹ ಘಟನೆ ನಡೆಯದಂತೆ ನೋಡಿಕೊಳ್ಳಬೇಕಾಗಿರುವುದು ಮುಖ್ಯ ಎಂದು ಸಿಎಂ ತಿಳಿಸಿದರು.

### ನನಗೆ ಬಿಟ್ಟರೆ ಕೆಎಟಿ, ಕೆಪಿಎಸ್ಸಿ ರದ್ದು

ಹಿನ್ನೆಲೆಯಲ್ಲಿ ದೂರು ಆಗಿದೆ. ನಿನ್ನೆ ರಾತ್ರಿ ಎಫ್ಐಆರ್ ದಾಖಲಾಗಿದೆ. ಕೆಪಿಎಸ್‌ಸಿ ಸಾಂವಿಧಾನಿಕ ಸಂಸ್ಥೆ. ಬೇಲಿನೇ ಎದ್ದು ಹೊಲ ಮೇಯ್ದರೆ ಏನು ಮಾಡೋದು. ನಮ್ಮ ಕೈಯಲ್ಲಿ ಇಲ್ಲ ಇದು. ನನಗೆ ಇದನ್ನ ಬಿಟ್ಟರೆ ಎರಡನ್ನೂ ರದ್ದು ಮಾಡ್ತೀನಿ ಎಂದು ತಿಳಿಸಿದರು. ಇದನ್ನ ಸಂವಿಧಾನಾತ್ಮಕವಾಗಿಯೇ ಮಾಡಬೇಕಾಗುತ್ತದೆ. ಹೊಸ ಕಾನೂನು ತರಬೇಕಾಗುತ್ತದೆ. ಕೆಲವರು ಮಾಡೋಕೆ ಆಗಲ್ಲ ಅಂತಾರೆ. ಕಾನೂನು ಮಾಡೋದು ನಾವು. ಶಾಸನ ಮಾಡೋದು ನಾವು. ನಾವೆ ಲ್ಲರೂ ಸೇರಿ ತೀರ್ಮಾನ ಮಾಡಿದರೆ ಶುದ್ಧೀಕರಣ ಮಾಡಬಹುದು. ಯುವಕರ ಭವಿಷ್ಯದ ಜೊತೆ ಚೆಲ್ಲಾಟ ಆಡುವುದು ಸರಿಯಲ್ಲ ಅಂತ ತಿಳಿಸಿದರು.

### ಎಸ್ಪಿ ದಿಢೀರ್ ಎತ್ತಂಗಡಿ

ಕಾರಣವಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ಶಿವಪ್ರಕಾಶ್ ಉತ್ತಮವಾಗಿ ಕೆಲಸ ಮಾಡುತ್ತಿದ್ದರು. ಕೆಲವು ವಿಷಯಗಳನ್ನು ಸಾರ್ವಜನಿಕವಾಗಿ ಚರ್ಚಿಸಲು ಸಾಧ್ಯವಿಲ್ಲ. ಸಂಸ್ಥೆಯ ಆಡಳಿತಾತ್ಮಕ ಅನುಕೂಲಕ್ಕಾಗಿ ಅವರನ್ನು ಮೂಲ ಇಲಾಖೆಗೆ ಕಳುಹಿಸಲಾಗಿದೆ ಎಂದು ಹೇಳಿದರು.

2014ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಶಿವಪ್ರಕಾಶ್ ದೇವರಾಜು, 2025ರ ಜುಲೈ 30ರಂದು ಭ್ರಷ್ಟಾಚಾರ ನಿಗ್ರಹ ಸಂಸ್ಥೆಯಲ್ಲಿ ಸೇವೆ ಸಲ್ಲಿಸುವ ಆಸಕ್ತಿ ವ್ಯಕ್ತಪಡಿಸಿ ಪತ್ರ ಬರೆದ ಬಳಿಕ ಲೋಕಾಯುಕ್ತ ಎಸ್‌ಪಿ-1 ಆಗಿ ನೇಮಕಗೊಂಡಿದ್ದರು.

ಲೋಕಾಯುಕ್ತದಲ್ಲಿ ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ ಶಿವಪ್ರಕಾಶ್ ಅವರು 31 ಆಪ್ ಕಾರ್ಯಾಚರಣೆಗಳು, 17 ಆದಾಯ ಮೀರಿ ಆಸ್ತಿ ಪ್ರಕರಣಗಳು ಹಾಗೂ 11 ಇತರೆ ಪ್ರಕರಣಗಳನ್ನು ದಾಖಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಜಮೀರ್ ಅಹ್ಮದ್ ವಿರುದ್ಧದ ಪ್ರಕರಣಗಳಲ್ಲಿ ಅಂದಿನ ಮುಖ್ಯಮಂತ್ರಿ ಕಚೇರಿಯಲ್ಲಿ ಸೇವೆ ಸಲ್ಲಿಸಿದ್ದ ಅಧಿಕಾರಿಯೊಬ್ಬರೂ ಸೇರಿದ್ದರು. ಭ್ರಷ್ಟ ಅಧಿಕಾರಿಗಳನ್ನು ಪತ್ತೆಹಚ್ಚಲು ಕೃತಕ ಬುದ್ಧಿಮತ್ತೆ ಬಳಸಿ ಇಲಾಖೆವಾರು ಮಾಹಿತಿ ಸಂಗ್ರಹ (ಡಾಸಿಯರ್) ಸಿದ್ಧಪಡಿಸಿದ್ದರು. ಭ್ರಷ್ಟ ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಹಲವು ಪ್ರಸ್ತಾವನೆಗಳನ್ನು ಕಳುಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

### ದಸರೆಯಲ್ಲಿ ಕಂಬಳ ಬೇಡ

ಕಂಬಳಕ್ಕೂ ತನ್ನದೇ ಆದ ಶ್ರೀಮಂತಿಕೆ ಇದೆ. ಅದನ್ನು ಸರ್ಕಾರ ಉಳಿಸಿಕೊಂಡು ಹೋಗಬೇಕು. ಕರಾವಳಿಯಲ್ಲಿ ಕಂಬಳವನ್ನ ಇನ್ನೂ ಅದ್ದೂರಿಯಾಗಿ ಮಾಡಲಿ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇರುತ್ತದೆ ಎಂದು ಅವರು ಹೇಳಿದರು.

### ಪೂಜೆ ಮಾಡದೆ ಆಹಾರ ಮುಟ್ಟಲ್ಲ!

ಹಕ್ಕು ಮತ್ತು ಉದ್ಯೋಗದ ಹಕ್ಕುಗಳನ್ನು ಜಾರಿಗೆ ತಂದರು. ಇವೆಲ್ಲವೂ ಸಂವಿಧಾನದಲ್ಲಿದ್ದರೂ ಅದಕ್ಕೂ ಮೊದಲು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

### ಸವಾಲು ಸ್ವೀಕರಿಸಿದ ಖಂಡ್ರೆ

ಇಳಿಯುವುದಿಲ್ಲ ಎಂದು ತಿರುಗೇಟು ನೀಡಿದರು. ಎಚ್‌ಎಂಟಿ ಭೂಮಿ ಮೇಲೆ ಸರ್ಕಾರಕ್ಕೆ ಹಕ್ಕಿಲ್ಲ ಎಂದೂ ಘೋಷಿಸಿದ್ದಾರೆ. ಈ ತೀರ್ಪು ಕೊಡಬೇಕಾದ್ದು ನ್ಯಾಯಾಧೀಶರೇ ಹೊರತು ಕುಮಾರಸ್ವಾಮಿ ಅವರಲ್ಲ. ಬೆಂಗಳೂರು ನಗರ ಡಿಸಿಎಫ್ ನೋಟಿಸ್ ನೀಡಿದ್ದಾರೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ. ಆದರೆ, ಅದು ನೋಟಿಸ್ ಅಲ್ಲ. ಅರೆ ನ್ಯಾಯಿಕ ಪ್ರಾಧಿಕಾರದ ಆದೇಶ. ಮಾಜಿ ಮುಖ್ಯಮಂತ್ರಿಗೆ ಇಷ್ಟೂ ಮಾಹಿತಿ ಇಲ್ಲವೇ ಎಂದು ನನಗೆ ವ್ಯಥೆಯಾಗುತ್ತಿದೆ ಎಂದು ಈಶ್ವರ ಖಂಡ್ರೆ ವ್ಯಂಗ್ಯವಾಡಿದರು. ಕುಮಾರಸ್ವಾಮಿ ಅವರು ಎಚ್‌ಎಂಟಿ ಅರಣ್ಯ ಪ್ರದೇಶಕ್ಕೆ ಬರುವಂತೆ ಸವಾಲು ಹಾಕಿದ್ದಾರೆ. ನಾನು ಸವಾಲು ಸ್ವೀಕರಿಸಲು ಸಿದ್ಧ. ಆದರೆ, ಕುಮಾರಸ್ವಾಮಿ ಮತ್ತೊಮ್ಮೆ ನಾನು ಅತಿಕ್ರಮ ಪ್ರವೇಶ ಮಾಡಿದ್ದೇನೆ ಎಂದು ಸುಳ್ಳು ಆರೋಪ ಮಾಡಬಾರದು ಅಷ್ಟೇ ಎಂದು ಛೇಡಿಸಿದರು.

### ಟೆಂಡರ್ ಮುಖ್ಯಮಂತ್ರಿ

ತುಂಬೆಲ್ಲಾ ಅಲ್ಪಸಂಖ್ಯಾತರು, ಬಾಂಗ್ಲಾದೇಶದವರ ಬಗ್ಗೆ ಪ್ರೀತಿ ಇಟ್ಟುಕೊಂಡಿದ್ದಾರೆ. ಇದಕ್ಕಾಗಿ ಪಿಆರ್‌ಸಿ (ಶಾಶ್ವತ ನಿವಾಸಿ ಪ್ರಮಾಣಪತ್ರ) ನೀಡುವ ಕೆಲಸ ಮಾಡುತ್ತಿದ್ದಾರೆ. ವೋಟ್‌ಬ್ಯಾಂಕ್ ಗಟ್ಟಿಮಾಡಿಕೊಳ್ಳಲು ಬಾಂಗ್ಲಾದೇಶದವರಿಗಾಗಿ ಮಾಡಿರುವ ಸ್ಕೀಂ ಇದು. ಕೂಡಲೇ ಈ ಆದೇಶವನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿದರು. ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲದಿದ್ದರೂ ಪಿಆರ್‌ಸಿ ಮಾಡಿಸುತ್ತಿದ್ದಾರೆ. ಬಾಂಗ್ಲಾದವರಿಗಾಗಿ ನಡೆಸುತ್ತಿರುವ ಕೌಂಟರ್ ಎಸ್‌ಐಆರ್ ಇದಾಗಿದೆ. ಕೇಂದ್ರದ ಕಾನೂನು ತಿರುಚುವ ಕೆಲಸವನ್ನು ಮಾಡಲಾಗುತ್ತಿದೆ. ಈ ಸರ್ಕಾರ ಒಂದೂವರೆ ವರ್ಷ ಇರುವುದೂ ಅನುಮಾನ ಎಂದು ಹೇಳಿದರು.

### ಜಾನಕಿ ವಿಧಿವಶ

ಕಾರ್ಯಕ್ರಮದಲ್ಲಿ ತಮ್ಮ ವೃತ್ತಿ ಜೀವನದ ಕೊನೆಯ ಹಾಡು ಹಾಡುವ ಮೂಲಕ ಮೈಸೂರಿಗೆ ಹಿರಿಮೆಗೆ ಗರಿಯಾಗಿದ್ದರು.

1938ರ ಏಪ್ರಿಲ್ 23ರಂದು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ರೆಪಲ್ಲೇ ಎಂಬ ಗ್ರಾಮದಲ್ಲಿ ಜನಿಸಿದ ಎಸ್. ಜಾನಕಿ, ತಮ್ಮ ಮೂರನೆಯ ವಯಸ್ಸಿನಲ್ಲೇ ನಾದಸ್ವರ ವಿದ್ವಾನ್ ಶ್ರೀ ಪೈದಿಸ್ವಾಮಿ ಎಂಬವರಲ್ಲಿ ಸಂಗೀತಾಭ್ಯಾಸವನ್ನು ಪ್ರಾರಂಭಿಸಿದರು.

1957ರಲ್ಲಿ ಪ್ರಸಿದ್ಧ ಸಂಗೀತ ನಿರ್ದೇಶಕ ಟಿ.ಚಲಪತಿ ರಾವ್ ಅವರ ತಮಿಳು ಚಿತ್ರ ವಿಧಿಯಿನ್ ವಿಳಯಾಟ್ಟು ಜಾನಕಿ ಅವರು ಹಾಡಿದ ಪ್ರಥಮ ಚಿತ್ರ. ಮುಂದೆ ತೆಲುಗಿನ ಚಿತ್ರ ಎಂ.ಎಲ್.ಎ, ಕನ್ನಡದ ಕೃಷ್ಣಗಾರುಡಿ ಇವೆಲ್ಲಾ ಒಂದಾದ ನಂತರ ಒಂದು ಎಂದು ಹರಿದು ಬರಲು ಪ್ರಾರಂಭವಾದವು. ಮಲಯಾಳಂ ಚಿತ್ರಗಳಲ್ಲಿ ಕೂಡಾ ಹಾಡಲು ಪ್ರಾರಂಭಿಸಿದರು. ದಕ್ಷಿಣ ಭಾರತದ ಎಲ್ಲಾ ಪ್ರಧಾನ ಭಾಷೆಗಳ ಗಾಯಕಿಯಾದರು. ಜೊತೆಗೆ ಹಿಂದಿಯನ್ನೊಳಗೊಂಡಂತೆ ಭಾರತದ ಬಹಳಷ್ಟು ಭಾಷೆಗಳಲ್ಲಿ ತಮ್ಮ ಗಾನಮಾಧುರ್ಯವನ್ನು ಹರಿಸಿದರು.

ದೀಪವು ನಿನ್ನದೆ, ಗಾಳಿಯೂ ನಿನ್ನದೆ, ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ', 'ಯುಗ ಯುಗಾದಿ ಕಳೆದರೂ', ಹೇಳೇ ಗೆಳತಿ ಬಾನಲ್ಲು ನೀನೆ ಭುವಿಯಲ್ಲು ನೀನೆ, ಬಿಸಿಲಾದರೇನು ಮಳೆಯಾದರೇನು ಸೋಲೆ ಇಲ್ಲ, ಅಂತಹ ಅಸಂಖ್ಯಾತ ಸುಮಧುರ ಕನ್ನಡ ಗೀತೆಗಳಿಗೆ ಅವರು ದನಿಯಾಗಿದ್ದಾರೆ.

ಇತ್ತೀಚಿನ ವರ್ಷದಲ್ಲಿ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿಯನ್ನು ಎಸ್. ಜಾನಕಿ ಅವರಿಗೆ ಘೋಷಿಸಿದಾಗ ಪದ್ಮ ಪ್ರಶಸ್ತಿಗಳಲ್ಲಿ ದಕ್ಷಿಣ ಭಾರತೀಯರ ಬಗ್ಗೆ ಅಸಡ್ಡೆ ಇರುವುದನ್ನು ವಿರೋಧಿಸಿ ಜಾನಕಿಯವರು ಈ ಪ್ರಶಸ್ತಿಯನ್ನು ತಿರಸ್ಕರಿಸಿದ್ದರು.

# ರಾಜ್ಯಸರ್ಕಾರದಿಂದ ಭದ್ರತೆಗೆ ಅಪಾಯ

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆ | ಬಿಜೆಪಿ ಕೃತಜ್ಞತಾ ಸಮರ್ಪಣಾ ಸಮಾರಂಭ

ಮೈಸೂರು: ಸಂವಿಧಾನ ಬಾಹಿರವಾಗಿ ಶಾಶ್ವತ ನಿವಾಸ ಪ್ರಮಾಣ ಪತ್ರ ವಿತರಣೆಗೆ ಮುಂದಾಗಿರುವ ರಾಜ್ಯ ಸರ್ಕಾರದ ದೇಶ ರಕ್ಷಣೆ ಹಾಗೂ ಭದ್ರತೆಗೆ ದೊಡ್ಡ ಅಪಾಯಕಾರಿ ನಡೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಕಾಯಕ ಸಮುದಾಯಗಳ ಒಕ್ಕೂಟ ಮೈಸೂರು ವಿಭಾಗದ ವತಿಯಿಂದ ಜೆ.ಕೆ. ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ನೂತನ ವಿಧಾನ ಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ ಅಭಿನಂದನೆ ಹಾಗೂ ಬಿಜೆಪಿ ಕೃತಜ್ಞತಾ ಸಮರ್ಪಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.


ಎಸ್‌ಐಆರ್ ಪ್ರಕ್ರಿಯೆಯಲ್ಲಿ ನುಸುಳುಕೋರರು, ಅಕ್ರಮ ವಸಲಿಗರಿಗೆ ಶಾಶ್ವತ ನಿವೇಶನ ಪತ್ರ ಕೊಡಲು ಕಂದಾಯ ನಿರೀಕ್ಷಕರಿಗೆ ಅಧಿಕಾರ ಕೊಟ್ಟಿದ್ದಾರೆ. ಇದು ದೇಶದ ರಕ್ಷಣೆ ಮತ್ತು ಭದ್ರತೆ ಅಪಾಯಕಾರಿಯಾಗಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲೂ ಅಲ್ಪಸಂಖ್ಯಾತರ ಓಲೈಕೆಗೆ ಮುಂದಾಗಿರುವ ಕಾಂಗ್ರೆಸ್ ಸರ್ಕಾರವನ್ನು ಭಗವಂತ ಮೆಚ್ಚಲ್ಲ. ಇದರ ವಿರುದ್ಧ ಮುಂದಿನ ವಾರ ರಾಜ್ಯಪಾಲರಿಗೆ ದೂರು ಕೊಡುವುದಾಗಿ ಹೇಳಿದರು.

ಅಹಿಂದ ಹೆಸರಿನಲ್ಲಿ ಸಮಾಜದ ಮಧ್ಯೆ ವಿಷ ಬೀಜ ಬಿತ್ತುವ, ಸಮಾಜ ಒಡೆಯುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಬಸವಣ್ಣನವರ ಜಪ, ಕೈಯಲ್ಲಿ ಶಿವಲಿಂಗ ಹಿಡಿದು ಕಾಂಗ್ರೆಸ್ ಸರ್ಕಾರ ಕಪಟ ನಾಟಕ ಮಾಡುತ್ತಿದೆ. ಇದನ್ನು ಯಾರೂ ನಂಬಬಾರದು. ಕೇಂದ್ರ ಮತ್ತು ರಾಜ್ಯದಲ್ಲಿ 6 ದಶಕ ಆಡಳಿತ ನಡೆಸಿದ ಕಾಂಗ್ರೆಸ್ ಕಾಯಕ ಸಮಾಜಗಳ ಕಣ್ಣೀರು ಒರೆಸಿದೆಯೇ? ಸಂವಿಧಾನ ಶಿಲ್ಪಿ ಅಂಬೇಡ್ಕರ್ ರನ್ನು ಕುತಂತ್ರದಿಂದ ಸೋಲಿಸಿದ್ದು ಯಾರು? ಅಂಬೇಡ್ಕರ್ ರನ್ನು ಈ ದೇಶದ ಪ್ರಧಾನಿ ಮಾಡಬೇಕಿತ್ತು. ಅವರ ಹೆಸರನ್ನು ಮತಕ್ಕಾಗಿ ಕಾಂಗ್ರೆಸ್ ಬಳಸುತ್ತಿದೆ. ಕಾಂಗ್ರೆಸ್‌ಗೆ ಮಹಾತ್ಮ ಗಾಂಧಿ, ದೇವರಾಜ ಅರಸು, ಅಂಬೇಡ್ಕರ್ ಹೆಸರೇಳುವ ನೈತಿಕತೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಸರ್ವರಿಗೂ ಸಮಪಾಲು, ಸಾಮಾಜಿಕ ನ್ಯಾಯ ತತ್ವದಡಿಯಲ್ಲಿ ಮೂರನೇ ಬಾರಿ ಪ್ರಧಾನಿಯಾಗಿರುವ ನರೇಂದ್ರ ಮೋದಿರನ್ನು ಕಾಂಗ್ರೆಸ್‌ಗೆ ಸಹಿಸಲು ಆಗುತ್ತಿಲ್ಲ. ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿಗೆ ಮೀಸಲಿಟ್ಟ ಹಣವನ್ನು ಲೂಟಿ ಮಾಡಲಾಯಿತು. ವಾಲ್ಮೀಕಿ ಸಮುದಾಯದ ಹಣವನ್ನು ನೆರೆ ರಾಜ್ಯದ ಚುನಾವಣೆಗೆ ಬಳಸಲಾಯಿತು. ಅಲ್ಪಸಂಖ್ಯಾತರ ಓಲೈಕೆಯಿಂದ ಹಾಡಹಗಲೇ ಹಿಂದೂಗಳ ಹತ್ಯೆಯಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಈ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಬುಡಸಮೇತ ಕಿತ್ತು ಹಾಕಬೇಕು ಎಂದರು.

ದೇಶಕ್ಕೆ ಮೋದಿಗಿಂತ ಒಳ್ಳೆಯ ನಾಯಕ ಸಿಗಲ್ಲ. ಕರ್ನಾಟಕದಲ್ಲಿ ಒಳ್ಳೆಯ ಆಡಳಿತ, ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ಬಿಜೆಪಿಯಿಂದ ಮಾತ್ರ ಸಾಧ್ಯ. 2028ರಲ್ಲಿ ಅಧಿಕಾರಕ್ಕೆ ಬರುತ್ತೇವೆ. ಕಾಯಕ ಸಮುದಾಯ ಸೇರಿ ಎಲ್ಲ ವರ್ಗಗಳಿಗೆ ನ್ಯಾಯ ಕೊಡುತ್ತೇವೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ ಅಭಿನಂದಿಸಲಾಯಿತು. ಪ್ರತಿಪಕ್ಷದ ನಾಯಕ ಆರ್. ಅಶೋಕ, ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ.ಮೋಹನ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಚಿವರಾದ ಶ್ರೀರಾಮುಲು, ಎನ್.ಮಹೇಶ್, ಮಾಜಿ ಸಂಸದ ಪ್ರತಾಪಸಿಂಹ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕೆ.ಸುಬ್ಬಣ್ಣ, ಮಾಜಿ ಶಾಸಕ ನಿರಂಜನಮೂರ್ತಿ, ಹರ್ಷವರ್ಧನ್, ಪಿ.ರಮೇಶ್, ಸಿದ್ದರಾಜು, ಎಸ್.ಬಾಲರಾಜು, ಶಂಕರರಾಯರು, ಬಿ.ಎಸ್. ಸೋಮಶೇಖರ್, ಸುರೇಶ್‌ಬಾಬು, ಬಾಬು ಪತ್ವಾರ್, ಮೈ.ನಾ. ಲೋಕೇಶ್, ಚನ್ನಕೇಶವಶೆಟ್ಟಿ, ನಟರಾಜೇಗೌಡ ಮುಂತಾದವರಿದ್ದರು.




> ಅಹಿಂದ ಹೆಸರು ಬಳಕೆ ಮಾಡಿಕೊಂಡು ಕಾಯಕ ಸಮುದಾಯಗಳನ್ನು ನಿರ್ಲಕ್ಷ್ಯ ಮಾಡಿದರು. ಅಹಿಂದದ ಜಪ ಮಾಡಿ ಅಧಿಕಾರಕ್ಕೆ ಬಂದು ಉಂಡರು, ಕೊಂಡೊಯ್ದರು ಹೊರತು ಯಾವುದೇ ಕೆಲಸ ಮಾಡಲಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದಾಗ ಬೀದಿಯಲ್ಲಿ ಹೋರಾಟ ಮಾಡುವ ಕೆಲವರು ರಾತ್ರಿ ಸಾಯಂಕಾಲ ತೂರಾಟ ಮಾಡುತ್ತಾರೆ. ಈಗ ದಲಿತರ ಹಣವನ್ನು ನುಂಗಿರುವ ಸರ್ಕಾರದ ವಿರುದ್ಧ ಯಾಕೇ ಹೋರಾಟ ಮಾಡುತ್ತಿಲ್ಲ. 2028ಕ್ಕೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ.
>
> –ಛಲವಾದಿ ನಾರಾಯಣಸ್ವಾಮಿ

> ಡಿ.ಕೆ. ಶಿವಕುಮಾರ್ ಕೈ ತುಂಬಾ ದಾರ ಹಾಕಿರುತ್ತಾರೆ. ದಿನನಿತ್ಯ ದೇವಸ್ಥಾನಗಳಿಗೆ ಹೋಗುತ್ತಾರೆ. ಇದನ್ನು ನೋಡಿ ನೀವು ಗೊಂದಲಕ್ಕೆ ಸಿಲುಕಬಾರದು. ಶಿವ ಬೆಟ್ಟವನ್ನು ಕಪಾಲಿ ಬೆಟ್ಟ ಮಾಡಲು ಹೊರಟಿದ್ದು ಇದೇ ಡಿ.ಕೆ. ಶಿವಕುಮಾರ್. ಈಗ ಅವರು ಕೈಯಲ್ಲಿ ದಾರ ಕಟ್ಟಿಕೊಂಡಿದ್ದಾರೆ ಎಂದು ನಂಬಲು ಹೋಗಬೇಡಿ.
>
> –ಪ್ರತಾಪ್ ಸಿಂಹ ಮಾಜಿ ಸಂಸದ

### ಡಿ.ಕೆ.ಶಿವಕುಮಾರ್ ಟೆಂಡರ್ ಸಿಎಂ: ಆರ್.ಅಶೋಕ

**ಮೈಸೂರು:** ಡಿ.ಕೆ.ಶಿವಕುಮಾರ್ ಅಂದರೆ ಟೆಂಡರ್ ಸಿಎಂ. ಸಿದ್ದರಾಮಯ್ಯರ ನಂತರ ಟೆಂಡರ್ ಆಗಿಯೇ ಮುಖ್ಯಮಂತ್ರಿ ಸ್ಥಾನಕ್ಕೆ ಬಂದಿದ್ದಾರೆ. 3ರಿಂದ 4 ಸಾವಿರ ಕೋಟಿ ಟೆಂಡರ್‌ಗೆ ಅನುಮೋದನೆ ಪಡೆದುಕೊಂಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದರು.

ಸಿದ್ದರಾಮಯ್ಯರು ಮುಡಾದಲ್ಲಿ ಸೈಟ್ ಮಾಡಿಕೊಂಡಿದ್ದು ಸಾಧನೆಯಾಗಿದೆ. ಈಗ ಡಿ.ಕೆ.ಶಿವಕುಮಾರ್ ಅವರು ಟೆಂಡರ್ ಸರ್ಕಾರದಂತೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಕಸದ ನಿರ್ವಹಣೆಗೆ ಟೆಂಡರ್, ಟನೆಲ್ ಅಳವಡಿಕೆಗೆ 40 ಸಾವಿರ ಕೋಟಿ ಟೆಂಡರ್, ಬಿಡದಿ ಟೌನ್‌ಶಿಪ್‌ಗೆ ಟೆಂಡರ್ ಕರೆದಿದ್ದಾರೆ. ಮುಂದಿನ 30-40ವರ್ಷಗಳಲ್ಲಿ ಕರೆಯಬಹುದಾದಷ್ಟು ಟೆಂಡರ್ ಮೊತ್ತವನ್ನು ಈಗಲೇ ಕರೆದಿದ್ದಾರೆ. ಡಿ.ಕೆ ಅಂದರೆ ಟೆಂಡರ್. ಟೆಂಡರ್ ಸಿಎಂ ಆಗಿಯೇ ಬಂದಿದ್ದಾರೆ ಎಂದು ಟೀಕಿಸಿದರು.

ಕರ್ನಾಟಕದಲ್ಲೂ 20 ರಿಂದ 30 ಲಕ್ಷ ಮಂದಿ ಅಕ್ರಮ ಬಾಂಗ್ಲಾ ವಲಸಿಗರು ಇದ್ದಾರೆ. ಡಿ.ಕೆ. ಶಿವಕುಮಾರ್ ಮುಖವಾಡದ ಸಿಎಂ. ಊರಿನವರಿಗೆ ನಾಮ ಹಾಕುವ ವ್ಯಕ್ತಿ. ಡಿಕೆಶಿ ಎಲ್ಲರಿಗೂ ಕಾಣುವ ರೀತಿ ವಿಭೂತಿ, ನಾಮ ಹಾಕುತ್ತಾರೆ. ಹಣೆಯ ತುಂಬ ವಿಭೂತಿ. ಹೃದಯದ ತುಂಬಾ ಬಾಂಗ್ಲಾ ವಲಸಿಗರ ಮೇಲೆ ಪ್ರೀತಿ. ಬಾಂಗ್ಲಾ ವಲಸಿಗರಿಗೆ ಮತದಾನದ ಹಕ್ಕು ಕೊಡಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಹೇಳಿದರು.



# ದಸರೆ: ಕಂಬಳಕ್ಕೆ ಯಾಕೆ ಖ್ಯಾತೆ

## ಹಣ ವೆಚ್ಚ, ಪರಿಸರಕ್ಕೂ ಧಕ್ಕೆ : ಬಿಜೆಪಿಗರಿಂದ ಸಾಮೂಹಿಕ ವಿರೋಧ

ಮೈಸೂರು: ನಾಡಹಬ್ಬ ದಸರೆಯ ಸಿದ್ಧಗಳು ಆರಂಭಗೊಂಡಿರುವ ಈ ಹೊತ್ತಿನಲ್ಲಿ ಇದೇ ಮೊದಲ ಬಾರಿಗೆ ಸಿದ್ಧತೆ ನಡೆಯಲಾರಂಬಿಸಿರುವ ಕಂಬಳಕ್ಕೆ ಎಲ್ಲೆಡೆ ಭಾರೀ ವಿರೋಧ ವ್ಯಕ್ತವಾಗಲಾರಂಭಿಸಿದೆ,.

ನಾಡಹಬ್ಬ ದಸರೆಯನ್ನು ಈಗಾಗಲೇ ದಸರಾ ಉನ್ನತ ಮಟ್ಟದ ಸಮಿತಿಯಲ್ಲಿ ಘೋಷಣೆ ಮಾಡಲಾಗಿದೆ. ಆದರೆ, ಕಳೆದ ಬಾರಿ ಈಗಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ಮೇರೆಗೆ ದಸರೆಯಲ್ಲಿ ಕಂಬಳ ಆಯೋಜನೆಗೆ ಈಗಾಗಲೇ ಸಿದ್ದತೆಗಳು ಪ್ರಾರಂಭಗೊಂಡಿವೆ. ಈ ಹಿನ್ನೆಲೆಯಲ್ಲಿ ಪರಿಸರ ಬಳಗ ಸೇರಿ ಕೆಲವು ಪರಿಸರ ಪ್ರೇಮಿಗಳು ಮೈಸೂರು ದಸರೆಯಲ್ಲಿ ಕಂಬಳ ಬೇಡ ಎಂದು ಅಪಸ್ವರ ಎತ್ತಿದರು. ಇದರ ಬೆನ್ನಲ್ಲೇ ಸಂಸದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಹ ಕಂಬಳ ಸಂಸ್ಕೃತಿ ದಸರೆಯಲ್ಲಿ ಬೇಡ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಳಿಯೂ ಹೇಳಿರುವುದಾಗಿ ತಿಳಿಸಿದ್ದರು.

ಈಗ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟ್ವಿಟ್ ಮೂಲಕ ವಿರೋಧ ವ್ಯಕ್ತಪಡಿಸಿದ್ದರೆ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಶಾಸಕ ಶ್ರೀವತ್ಸ ಸೇರಿ ಅನೇಕರು ದಸರೆಯಲ್ಲಿ ಕಂಬಳ ಆಚರಣೆಯ ವಿರೋಧ ಮಾಡುವ ಮೂಲಕ ರಾಜ್ಯಮಟ್ಟದ ಚರ್ಚೆಗೂ ಕಂಬಳ ಈಗ ದಾಳವಾಗಿ ಪರಿಣಮಿಸಿದೆ.

**ವಿರೋಧ ಏಕೆ**


ಕಂಬಳ ಆಚರಣೆಗೆ ಕನಿಷ್ಠ 20 ಎಕರೆ ಜಾಗ, ಕೆಸರು ಗದ್ದೆಗೆ ಸಾಕಷ್ಟು ಪ್ರಮಾಣದ ನೀರಿನ ಅವಶ್ಯಕತೆ ಬೇಕಿದೆ. ಪ್ರಮುಖವಾಗಿ ಈ ಭಾಗದಲ್ಲಿ ಕೋಣ ಸಾಕುವವರ ಸಂಖ್ಯೆಯೇ ಇಲ್ಲ. ಅಲ್ಲದೆ, ಕೋಣಗಳನ್ನು ಬೇರೆಡೆಯಿಂದ ತಂದು ನಡೆಸಬೇಕಿದ್ದು, ಅದೆಲ್ಲಾ ದುಂದುವೆಚ್ಚ ಎನ್ನಲಾಗುತ್ತಿದೆ. ಅಲ್ಲದೆ, ದಸರೆ ಇತರೆ ಕಾರ್ಯಕ್ರಮಗಳಿಗೂ ಇದು ತೊಂದರೆ ಯುಂಟು ಮಾಡುವ ಆತಂಕವಿದೆ. ಜತೆಗೆ ಎರಡು ದಿನದ ಕ್ರೀಡೆಗೆ 8 ಕೋಟಿ ದುಂದುವೆಚ್ಚ, ಜಾಗಕ್ಕಾಗಿ ಇರುವ ಪರಿಸರದ ಹಾನಿ ಹೀಗೆ ಅನೇಕ ಪ್ರಶ್ನೆಗಳು ಉದ್ಭವಿಸಿರುವುದೇ ಸ್ಥಳೀಯ ಚಿಂತಕರು, ಪರಿಸರ ಪ್ರೇಮಿಗಳ ವಿರೋಧಕ್ಕೆ ಕಾಣವಾಗಿದೆ. ಇದನ್ನೇ ದಾಳವಾಗಿಸಿ ಕೊಂಡ ಬಿಜೆಪಿ, ಜೆಡಿಎಸ್ ಸಹ ತಮ್ಮ ವಿರೋಧ ವ್ಯಕ್ತಪಡಿಸುತ್ತಿವೆ.

**ಸ್ವಚ್ಛತೆಯಲ್ಲಿ ಸರ್ಕಾರ**


ಒಂದೆಡೆ ವಿರೋಧ ಹೆಚ್ಚು ತ್ತಿದ್ದರೆ ಮತ್ತೊಂದೆಡೆ ಸರ್ಕಾರ ಈಗಾಗಲೇ ಸಾತಗಳ್ಳಿ ಸಮೀಪದ ಜಾಗದಲ್ಲಿ ಸ್ವಚ್ಛತೆ ಕಾರ್ಯಕ್ಕೆ ಮುಂದಾ ಗುವ ಮೂಲಕ ಕಂಬಳದ ಹಸಿರು ನಿಶಾನೆಗೆ ಮುಂದಾಗಿದೆ. ಮೈಸೂರಿನ ಹಂತದಲ್ಲಿದ್ದ ವಿರೋಧ ಈಗ ರಾಜ್ಯ ನಾಯಕರ ಚರ್ಚೆಗೂ ಗ್ರಾಸ ವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಿದೆ.

### ದಸರಾಗೆ ಕಂಬಳ ತುರುಕುವುದು ಬೇಡ: ಬಿವೈವಿ

ಮೈಸೂರು:ಮೈಸೂರು ದಸರಾದಲ್ಲಿ ಕಂಬಳ ಆಯೋಜನೆಗೆ ಮುಂದಾಗಿರುವ ರಾಜ್ಯ ಸರ್ಕಾರದ ನಡೆಗೆ ಕುರಿತು ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮೈಸೂರು ದಸರಾ ವೇಳೆ ಕಂಬಳ ನಡೆಸುವುದು ಬೇಡ ಎಂದರು.



ರಾಜ್ಯ ಸರ್ಕಾರ ಮೈಸೂರಿನ ಜನರ ಭಾವ ನೆಗೆ ಬೆಲೆ ಕೊಡಬೇಕು ಎಂದಿದ್ದಾರೆ. ಸರ್ಕಾರ ಭಂಡತನ ಪ್ರದರ್ಶನ ಮಾಡಬಾರದು. ಕರಾವಳಿಯಲ್ಲೇ ಕಂಬಳವನ್ನು ಸರ್ಕಾರ ಅದ್ದೂರಿಯಾಗಿ ಮಾಡಲಿ. ಅಲ್ಲಿನ ಪರಂಪರೆಯನ್ನು ಮೈಸೂರಿನ ಪರಂಪರೆಗೆ ತುರುಕಬೇಡಿ. ಕಂಬಳಕ್ಕೂ ತನ್ನದೇ ಆದ ಶ್ರೀಮಂತಿಕೆ ಇದೆ. ಅದನ್ನು ಉಳಿಸಿ. ಕರಾವಳಿಯಲ್ಲಿ ಅದ್ದೂರಿಯಾಗಿ ಕಂಬಳ ಮಾಡಿ ಸಹಕಾರ ವಿರುತ್ತೆ ಎಂದು ತಿಳಿಸಿದ್ದಾರೆ.



### ದಸರೆ ವ್ಯಾಪಾರೀಕರಣ ಬೇಡ ಎಂದಿದ್ದೇನೆ

**ಮೈಸೂರು:** ಮೈಸೂರು ದಸರಾ ಕಮರ್ಶಿಯಲ್ ಆಗೋದು ಬೇಡ. ದಸರಾ ಆಚರಣೆ ಸಾಂಸ್ಕೃತಿಕ ಹಬ್ಬವಾಗಿ ನಡೆಯಲಿ ಎಂದು ಶಾಸಕ ಶ್ರೀವತ್ಸ ತಿಳಿಸಿದರು.




ಮೈಸೂರು ದಸರಾ ಮಹೋತ್ಸವದಲ್ಲಿ ಕಂಬಳ ಬೇಡ ಎನ್ನುವ ಸಂಸದ ಯದುವೀರ್ ಅವರ ಹೇಳಿಕೆಗೆ ನನ್ನ ಸಹಮತವಿದೆ. ಕಂಬಳ ಬೇಡ ಎಂದು ದಸರಾ ಉನ್ನತ ಮಟ್ಟದ ಸಭೆಯಲ್ಲಿ ಹೇಳಿದ್ದೇವೆ. ಸಚಿವ ಯತೀಂದ್ರ ಸಿದ್ದರಾಮಯ್ಯ ಕೂಡ ವಿರೋಧ ವ್ಯಕ್ತವಾಗುವುದರ ಬಗ್ಗೆ ತಿಳಿಸಿದ್ದಾರೆ. ಸುತ್ತೂರು ಸಂಸ್ಥಾನಕ್ಕೆ ದಸರಾ ಉದ್ಘಾಟನೆಗೆ ಅವಕಾಶ ಸಿಕ್ಕಿಲ್ಲ. ಈ ಬಾರಿ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದೇನೆ. ಮೈಸೂರು ದಸರಾ ಉದ್ಘಾಟಕರ ಆಯ್ಕೆ ಸಿಎಂಗೆ ಬಿಟ್ಟಿದ್ದೇವೆ ಎಂದರು.

### ದಸರೆಯಲ್ಲಿ ಕಂಬಳಕ್ಕೆ ಎಚ್‌ಡಿಕೆ ಆಕ್ಷೇಪ

**ಬೆಂಗಳೂರು:** ಕರಾವಳಿ ಭಾಗದ ಕ್ರೀಡೆ ಕಂಬಳವನ್ನು ವಿಶ್ವ ವಿಖ್ಯಾತ ಮೈಸೂರು ದಸರಾದಲ್ಲಿ ಆಯೋಜಿಸುವುದಕ್ಕೆ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಸಹ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಕೇಂದ್ರ ಸಚಿವ ಹೆಚ್ ಡಿಕೆ, 'ಪರಂಪರಾಗತವಾಗಿ ತನ್ನದೇ ಆದ ವೈಶಿಷ್ಟ್ಯದಿಂದ ಕಂಗೊಳಿಸುತ್ತಿರುವ ಮೈಸೂರು ದಸರಾ ಉತ್ಸವದಲ್ಲಿ ಕಂಬಳವನ್ನು ಸೇರಿಸುವ ಅಗತ್ಯವಿಲ್ಲ. ಈವರೆಗೂ ನಡೆದುಕೊಂಡು ಬಂದಿರುವ ದಸರಾಕ್ಕೆ ಧಕ್ಕೆ ತರುವ ಪ್ರಯತ್ನ ಖಂಡಿತ ಬೇಡ' ಎಂದಿದ್ದಾರೆ.



ಕಂಬಳವು ಕರಾವಳಿ ಭಾಗದ ಸಾಂಸ್ಕೃತಿಕ ಶ್ರೇಷ್ಠತೆ ಮತ್ತು ನಂಬಿಕೆಗಳ ಸಂಕೇತವಾಗಿದೆ. ಕಂಬಳ ಭೌಗೋಳಿಕವಾಗಿ ಆ ಭಾಗಕ್ಕೆ ಮಾತ್ರ ಸರಿಹೊಂದುವ ಆಚರಣೆಯೂ ಹೌದು. ಅದನ್ನು ಮೈಸೂರಿಗೆ ತಂದು ದೈವಿಕ ಹಿನ್ನೆಲೆಯ ಆ ಪರಂಪರೆ, ಪಾವಿತ್ರ್ಯತೆಗೆ ಧಕ್ಕೆ ತರುವುದನ್ನು ಒಪ್ಪಲಾಗದು ಎಂದು ಕಿಡಿಕಾರಿದ್ದು, 'ಕರಾವಳಿ ಪ್ರದೇಶ ಹಸಿರು ಮತ್ತು ನೀರಿನ ಸಂಗಮ. ಇಂಥ ಪ್ರಾಕೃತಿಕ ಹಿನ್ನೆಲೆಯಲ್ಲಿ ಕಂಬಳವನ್ನು ಕಣ್ತುಂಬಿಕೊಳ್ಳುವುದೇ ಧನ್ಯತೆಯ ಅನುಭವ ಎನ್ನುವುದು ನನ್ನ ಭಾವನೆ. ಹೀಗಾಗಿ ಮೈಸೂರು ಮತ್ತು ಕರಾವಳಿ ಜನರ ಭಾವನೆಗಳಿಗೆ ನೋವುಂಟು ಮಾಡುವುದು ಬೇಕಿಲ್ಲ ಎಂದು ತಿಳಿಸಿದ್ದಾರೆ.




### ಸಿಎಂಗೂ ಬೇಡ ಎಂದು ಹೇಳಿದ್ದೇನೆ: ಯದುವೀರ್



ಮೈಸೂರು: ಮೈಸೂರು ದಸರಾದಲ್ಲಿ ಕಂಬಳ ಬೇಡ ಅಂತ ಸಿಎಂ ಡಿಕೆ ಶಿವಕುಮಾರ್ ಗೆ ತಿಳಿಸಿದ್ದೇನೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಈ ಕುರಿತು ಮಾತನಾಡಿದ ಅವರು, ಕಂಬಳ ಬೇಡ ಅಂತ ಸಿಎಂ ಬಳಿ ತಿಳಿಸಿದ್ದೇನೆ. ಕಂಬಳ ಕುರಿತು ಎರಡು ವಾರದಿಂದ ಸಾಕಷ್ಟು ಚರ್ಚೆಗಳಾಗುತ್ತಿವೆ. ಆದರೆ ಕರಾವಳಿ ಭಾಗದ ಆಚರಣೆ ಮೈಸೂರಿಗೆ ಬೇಡ. ಇದೊಂದು ಅನವಶ್ಯಕವಾದ ಬೆಳವಣಿಗೆ. ಬೇಕಿದ್ದರೇ ಕರಾವಳಿ ಭಾಗದಲ್ಲಿ ದೊಡ್ಡಮಟ್ಟದಲ್ಲಿ ಮಾಡಲಿ. ಮೈಸೂರಿನವರು ಅದಕ್ಕೆ ಕೈ ಜೋಡಿಸುತ್ತೇವೆ. ಮೈಸೂರು ಭಾಗದಲ್ಲಿ ಬೇಡ ಅಂತ ಮನವರಿಕೆ ಮಾಡಿದ್ದೇವೆ. ಸಿಎಂ ಕೂಡ ಅಗತ್ಯಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

ದಸರಾ ವೇಳೆ ದಸರಾಗೆ ಪ್ರಾಮುಖ್ಯತೆ ನೀಡಬೇಕಿದೆ. ಸರ್ಕಾರ ಸಾರ್ವಜನಿಕ ಅಭಿಪ್ರಾಯದಂತೆ ದಸರಾ ಮಾಡಲಿ. ಕಳೆದ ದಸರಾ ವೇಳೆ ಎರಡು ಕೊಲೆಗಳು ಆಗಿದ್ದವು. ಅಪ್ರಾಪ್ತ ಬಾಲಕಿ ಹತ್ಯೆ ಕ್ರೂರವಾಗಿತ್ತು. ಆ ಕಾರಣಕ್ಕೆ ರಕ್ಷಣೆ ಹೆಚ್ಚಳ ಮಾಡಿ ಅಂತ ಮನವಿ ಮಾಡಿದ್ದೇನೆ. ಈ ಬಾರಿ 11 ದಿನಗಳ ಕಾಲ ದಸರಾ ನಡೆಯಲಿದೆ. ಅರಮನೆಯ ಕ್ಯಾಲೆಂಡರ್ ಪ್ರಕಾರವೇ ಜರುಗಲಿದೆ. ದಸರಾ ಆನೆಗಳ ರಕ್ಷಣೆಗೂ ಒತ್ತು ನೀಡುವಂತೆ ಮನವಿ ಮಾಡಿದ್ದೇನೆ. ಈ ಬಾರಿ ದಸರೆಯಲ್ಲಿ ದಸರಾ ಪಾಸ್ ಬೇಡ. ಈ ಬಾರಿ ದಸರೆಯಲ್ಲಿ ಕ್ರೈಂಗಳನ್ನ ತಪ್ಪಿಸಿ. ಪಾಸ್ ಗಾಗಿ ನೂಕು ನುಗ್ಗಲು ಯತ್ನ ನಿಲ್ಲಿಸಿ ಎಂದು ಮನವಿ ಮಾಡಿರುವುದಾಗಿ ಹೇಳಿದರು.

# ಮತದಾರರ ಪಟ್ಟಿ ಪರಿಷ್ಕರಣೆಗೆ ಸಹಕಾರ ನೀಡಿ: ಜಿಲ್ಲಾಧಿಕಾರಿ

ಚಾಮರಾಜನಗರ, ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಕಾರ್ಯಕ್ಕೆ ಸಹಕಾರ ನೀಡಿ ಚುನಾವಣಾ ಆಯೋಗದ ಮಹತ್ತರ ಪ್ರಕ್ರಿಯೆಯನ್ನು ಯಶಸ್ವಿಗೊಳಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ವಿವಿಧ ರಾಜಕೀಯ ಪಕ್ಷಗಳಿಗೆ ಮನವಿ ಮಾಡಿದರು.


ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ – 2026ರ ಸಂಬಂಧ ನೋಂದಾಯಿತ ಮಾನ್ಯತೆ ಪಡೆದ ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು ಮತದಾರರ ಪಟ್ಟಿ ಸಿದ್ದಪಡಿಸುವಿಕೆ, ಮತದಾರರ ಪಟ್ಟಿಯಲ್ಲಿ ಎಲ್ಲಾ ಅರ್ಹ ಮತದಾರರ ಸೇರ್ಪಡೆ ಅಥವಾ ಪಟ್ಟಿಯಿಂದ ಕೈಬಿಟ್ಟಿರುವುದನ್ನು ಖಚಿತಪಡಿಸುವುದು ವಿಶೇಷ ಸಮಗ್ರ ಪರಿಷ್ಕರಣೆಯ ಪ್ರಮುಖ ಉದ್ದೇಶವಾಗಿದೆ. ಮುಕ್ತ ಹಾಗೂ ನಿಷ್ಪಕ್ಷಪಾತ ಚುನಾವಣೆ ನಡೆಸಲು ಮತದಾರರ ಪಟ್ಟಿಯ ವಿಶ್ವಾಸಾರ್ಹತೆ ಕಾಪಾಡಿಕೊಳ್ಳುವ ಸಲುವಾಗಿ ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಸುತ್ತಿದೆ. ಇಂತಹ ಮಹತ್ತರ ಪ್ರಕ್ರಿಯೆಗೆ ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ ಪಕ್ಷಗಳು ಅಗತ್ಯ ಸಹಕಾರ ನೀಡಬೇಕಿದೆ ಎಂದರು.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗಾಗಿ 2026ರ ಅಕ್ಟೋಬರ್ 1 ಅನ್ನು ಅರ್ಹತಾ ದಿನಾಂಕವಾಗಿ ಪರಿಗಣಿಸಿ ಜುಲೈ 29ರವರೆಗೆ ಎಲ್ಲಾ ಮತಗಟ್ಟೆ ಅಧಿಕಾರಿಗಳು (ಬಿ.ಎಲ್.ಒ) ಜಿಲ್ಲೆಯ ಪ್ರತಿ ಮನೆಮನೆಗೂ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸುತ್ತಿದ್ದು, ಅರ್ಹ ಮತದಾರರು ಗಣತಿ ನಮೂನೆಯನ್ನು ಭರ್ತಿಮಾಡಿ ಮತ್ತೆ ಅದನ್ನು ಬಿ.ಎಲ್.ಒ ಗಳಿಗೆ ತಲುಪಿಸುವ ಕಾರ್ಯ ಪ್ರಗತಿಯಲ್ಲಿದೆ. ಎಲ್ಲಾ ಮಾಹಿತಿಯನ್ನು ಕ್ರೋಢಿಕರಿಸಿ ಆಗಸ್ಟ್ 5ರಂದು ಕರಡು ಮತದಾರರ ಪಟ್ಟಿ ಪ್ರಕಟಗೊಳಿಸಲಾಗುತ್ತದೆ. ಕರಡು ಪಟ್ಟಿ ಪ್ರಕಟ ಸಂಬಂಧ ಅಂದಿನಿಂದ ಸೆಪ್ಟೆಂಬರ್ 4ರವರೆಗೆ ಮತದಾರರಿಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ಅಕ್ಟೋಬರ್ 3ರವರೆಗೂ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿ ಅಂತಿಮವಾಗಿ ಅಕ್ಟೋಬರ್ 7ರಂದು ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿ ಕಚೇರಿ, ತಾಲೂಕು ಕಚೇರಿ ಹಾಗೂ ಎಲ್ಲಾ ಮತಗಟ್ಟೆಗಳಲ್ಲಿ ಪ್ರಕಟಗೊಳಿಸಲಾಗುತ್ತದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಒಟ್ಟು 8,80,224 ಮತದಾರರಿದ್ದು, ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ಜಿಲ್ಲೆಯಲ್ಲಿ 983 ಮತಗಟ್ಟೆಗಳನ್ನು ತೆರೆಯಲಾಗಿದೆ. ಪ್ರತಿ ಮತಗಟ್ಟೆಗೆ ತಲಾ ಒಬ್ಬರಂತೆ ಮತಗಟ್ಟೆ ಅಧಿಕಾರಿಗಳು ಹಾಗೂ 98 ಮಂದಿ ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಪರಿಷ್ಕರಣೆ ಕಾರ್ಯಕ್ಕೆ ನೆರವಾಗಲು ರಾಜಕೀಯ ಪಕ್ಷಗಳು ಸಹ ಒಟ್ಟು 2082 ಮಂದಿ ಬಿ.ಎಲ್.ಒ ಗಳನ್ನು ನೇಮಿಸಿವೆ. ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದ ಮತಗಟ್ಟೆ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಮನೆಮನೆಗಳಿಗೆ ಖುದ್ದು ಭೇಟಿ ನೀಡಿ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಿ ಭರ್ತಿ ಮಾಡಿದ ನಮೂನೆಗಳನ್ನು ಮತದಾರರಿಂದ ಪಡೆದು ಗಣಕೀಕರಣಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈವರೆಗೆ ಒಟ್ಟು 2,87,790 ಗಣತಿ ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದರು.

ಪರಿಷ್ಕರಣೆ ಕಾರ್ಯ ಸಂಬಂಧ ಮತದಾರರಿಗೆ ಅಗತ್ಯ ಮಾಹಿತಿ ನೀಡಲು ಜಿಲ್ಲಾಧಿಕಾರಿ ಕಚೇರಿ, ಉಪವಿಭಾಗಾಧಿಕಾರಿ ಕಚೇರಿ ಹಾಗೂ ಆಯಾ ತಾಲೂಕು ತಹಶೀಲ್ದಾರ್ ಕಚೇರಿಗಳಲ್ಲಿ ಸಹಾಯವಾಣಿಯನ್ನು ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಹಾಯವಾಣಿ ಸಂಖ್ಯೆ 1950, 08226–224855, ಕೊಳ್ಳೇಗಾಲ ಉಪವಿಭಾಗಾಧಿಕಾರಿಗಳ ಕಚೇರಿ ದೂ.ಸಂ 08224–253615, ಹನೂರು ತಹಶೀಲ್ದಾರ್ ಕಚೇರಿ ದೂ.ಸಂ 08224–268032, ಕೊಳ್ಳೇಗಾಲ ತಹಶೀಲ್ದಾರ್ ಕಚೇರಿ ದೂ.ಸಂ 08224–252046, ಯಳಂದೂರು ತಹಶೀಲ್ದಾರ್ ಕಚೇರಿ ದೂ.ಸಂ 08826–240029, ಚಾಮರಾಜನಗರ ತಹಶೀಲ್ದಾರ್ ಕಚೇರಿ ದೂ.ಸಂ 08226–200254 ಹಾಗೂ ಗುಂಡ್ಲುಪೇಟೆ ತಹಶೀಲ್ದಾರ್ ಕಚೇರಿ ದೂ.ಸಂ 08229–222225 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು. ಒಟ್ಟಾರೆ ರಾಜಕೀಯ ಪಕ್ಷಗಳು ಸಹ ಪರಿಷ್ಕರಣೆ ಕಾರ್ಯಕ್ಕೆ ಜಿಲ್ಲಾಡಳಿತ ಸೇರಿದಂತೆ ಎಲ್ಲಾ ಮತಗಟ್ಟೆ ಅಧಿಕಾರಿಗಳಿಗೆ ಸಹಕರಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ತಿಳಿಸಿದರು ನೋಂದಾಯಿತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಸ್. ಬಾಲಸುಬ್ರಹ್ಮಣ್ಯ, ಎನ್. ನಾಗಯ್ಯ, ಎಂ. ಚಿಕ್ಕಮಹದೇವ, ಎಸ್. ಮಹೇಶ್ ಗೌಡ, ಸಯ್ಯದ್ ಅಸ್ರಮ್, ಎಸ್.ಹೆಚ್. ತೋಟಂದಾರ್ಯಸ್ವಾಮಿ, ಇತರರು ಸಭೆಯಲ್ಲಿ ಉಪಸಿತ್ಥರಿದ್ದರು.



## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ !

ಅಷ್ಟು ಸುಲಭವಲ್ಲ ಹರಿಯೇ
ನೀ ಇಟ್ಟಂತೆ ಇರಲು,
ಅಷ್ಟು ಸುಲಭವಲ್ಲ ಹರಿಯೇ||

ಸ್ವಾರ್ಥವ ನಾನು ಬಿಡಲಾರೆ,
ಮತ್ಸರ ಬುದ್ಧಿಯ ತೊರೆಯಲಾರೆ,
ಮತ್ತಷ್ಟು ಬೇಕೆಂಬ ಹಂಬಲ
ತೊರೆದು ಜೀವಿಸಲಾರೆ ದೊರೆಯೇ||

ನಾಲಿಗೆ ರುಚಿಯ ಬಿಡಲಾರೆ,
ಮಕ್ಕಳ ಮೋಹವ ಮರೆಲಾರೆ ,
ಸೊಕ್ಕಿದ ಮನಸಿಗೆ ಬೇಲಿಯ
ಹಾಕಿ ಇರಲಾರೆ ಒಂದಿಷ್ಟು ದೊರೆಯೇ||

ಹಣವನು ಗಳಿಸುವ ಹಂಬಲ,
ಕೊಡಲಾರೆ ಭಕ್ತಿಗೆ ಬೆಂಬಲ,
ತೋರಿಸೋ ಮುಕ್ತಿಯ ಪಥವ
ಹೇಮಗಿರೀಶನೆಂಬೋ ಎನ್ನ
ದೊರೆಯೇ||

# ರೈತರ ಬಾಯಿಗೆ ಮಣ್ಣು ಹಾಕಿದ ಸಮ್ಮಿಶ್ರ

## ಕೇಂದ್ರ ಸರ್ಕಾರದ 2013ರ ಕಾಯ್ದೆಗೆ, 2019ರಲ್ಲಿ ರಾಜ್ಯದಲ್ಲಿ ತಿದ್ದುಪಡಿ ವಿಚಾರ

ರಾಮನಗರ: 2013ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ಕಾಯ್ದೆಯಲ್ಲಿ ಫಲವತ್ತಾದ ಭೂಮಿಯನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಸಿಕೊಳ್ಳಲು ಶೇ 70ರಷ್ಟು ರೈತರು ಒಪ್ಪಿಗೆ ಕೊಟ್ಟನಂತರವಷ್ಟೇ ಸ್ವಾಧೀನಕ್ಕೆ ಅವಕಾಶವಿದೆ. ಆದರೆ 2019ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಸರ್ಕಾರ ಈ ಅಂಶವನ್ನು ಕೈಬಿಟ್ಟಿವೆ ಎಂದು ರೈತ ಮುಖಂಡ ಮೈಸೂರಿನ ಮಂಜು ಕಿರಣ್ ಹೇಳಿದರು.

ಬಿಡದಿ ಸಮಗ್ರ ಉಪನಗರ ಯೋಜನೆಯ ಭೂಸ್ವಾಧಿನಕ್ಕೆ ವಿರೋಧಿಸಿ ತಾಲ್ಲೂಕಿನ ಬೈರಮಂಗಲ ದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕೇಂದ್ರ ಸರ್ಕಾರದಿಂದ 2013ರಲ್ಲಿ ರಚನೆಯಾಗಿ 2014ರಲ್ಲಿ ಅನುಷ್ಠಾನಕ್ಕೆ ಬಂದ ಕಾಯ್ದೆಯಲ್ಲಿ ಭೂಸ್ವಾಧಿನದಿಂದ ಆ ಪ್ರದೇಶ ದಲ್ಲಿ ಸಾಮಾಜಿಕ ವ್ಯವಸ್ಥೆಗೆ ಯಾವ ರೀತಿ ಧಕ್ಕೆ ತರುತ್ತೆ ಎಂಬುದನ್ನು ಅಧ್ಯಯನ ಮಾಡಿ ಪರಿಹಾರ ಕೊಡಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಜೆಡಿಎಸ್ ಮತ್ತು ಕಾಂಗ್ರೆಸ್ ಸರ್ಕಾರ ತಂದ ತಿದ್ದುಪಡಿ ಕಾಯ್ದೆಯಲ್ಲಿ ಈ ಅಂಶವನ್ನು ಸಹ ಕೈಬಿಟ್ಟಿದೆ. ಈ ಎರಡೂ ಪಕ್ಷಗಳು ರೈತರ ಬಾಯಿಗೆ ಮಣ್ಣು ಹಾಕಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೀಗೆ ತಿದ್ದುಪಡಿ ತಂದ ವೇಳೆ ಮುಖ್ಯಮಂತ್ರಿ ಸ್ಥಾನದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರಿದ್ದರು.



ಜನಪ್ರತಿನಿಧಿಗಳ ನಿರ್ಧಾರವನ್ನು ರಾಷ್ಟ್ರಪತಿಗಳು ಸಹ ಒಪ್ಪಿಗೆ ಸೂಚಿಸಿದರು. ಜನಪ್ರತಿನಿಧಿಗಳಿಗೆ ಅಧಿಕಾರ ಕೊಟ್ಟಿದ್ದು ನೀವೆ. ನಿಮ್ಮ ಭೂಮಿ ಕಿತ್ತುಕೊಳ್ಳೋಕೆ, ನಿಮ್ಮ ಅನುಮತಿ ಇಲ್ಲದೆಯೇ ನಿಮಗೆ ಗೊತ್ತಿಲ್ಲದಮತೆ ತಿದ್ದುಪಡಿ ತಂದರು ಎಂದು ಎರಡೂ ಪಕ್ಷಗಳ ವಿರುದ್ದ ಹರಿಹಾಯ್ದರು. ಈಗ ಭೂಸ್ವಾಧೀನಕ್ಕೆ ಒಬ್ಬರು (ಕಾಂಗ್ರೆಸ್) ಮುಂದಾಗಿದ್ದಾರೆ, ಇನ್ನೊಬ್ಬರು (ಜೆಡಿಎಸ್) ಕೊಡೋಲ್ಲ ಅಂತ ಫೋಸು ಕೊಡ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು.

ವಿಧಾನಸೌಧದಲ್ಲಿ ಪ್ರತಿಭಟನೆ ಮಾಡಲು ಹೇಳಿ

ಕೇಂದ್ರ ಸರ್ಕಾರದಿಂದ ರೈತ ವಿರೋಧಿ ಕಾನೂನು ಬಂದಾಗ, ದೆಹಲಿಯಲ್ಲಿ ವರ್ಷಾನುಗಟ್ಟಲೆ ಹೋರಾಟ ನಡೆಯಿತು. ಹೋರಾಟದ ಸ್ಥಳದಲ್ಲಿ ಪ್ಯಾರಲಲ್ ಆಗಿ ಕಿಸಾನ್ ಸಂಸತ್ ಅನ್ನು ರೈತರು ನಡೆಸಿದರು. ಈ ಸ್ಥಳಕ್ಕೆ ಕಾಂಗ್ರೆಸ್ ಪಕ್ಷದಿಂದ, ಕೇರಳ ಮತ್ತು ತಮಿಳುನಾಡಿನಿಂದ ಕೆಲವು ಸಂಸದರು ಭಾಗವಹಿಸಲು ಬಂದಿದ್ದರು. ಆಗ ರೈತರು ಅವರನ್ನು ಉದ್ದೇಶಿಸಿ, ನಿಮನ್ನು ಸಂಸತ್ತಿಗೆ ಕಳ್ಸಿದ್ದೀವಿ. ಅಲ್ಲಿ ಪ್ರತಿಭಟನೆ ಮಾಡಿ, ನಮ್ಮ ವೇದಿಕೆ ಕೊಡೋಲ್ಲ ಅಂತ ಹೇಳಿದ್ದರು. ಈಗ ನೀವು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ರಾಜಕಾರಣಿಗಳು ಬಂದರೆ, ವಿಧಾನಸಭೆಯ ಭಾವಿಗೆ ಇಳಿದು ಹೋರಾಟ ಮಾಡಿ ಎಂದು ವಾಪಸ್ಸು ಕಳುಹಿಸಿ, ಕಾರಣ ನಿಮ್ಮ ಪ್ರತಿಭಟನೆಯ ವೇದಿಕೆಗೆ ಒಂದು ಪಕ್ಷಕ್ಕೆ ಅವಕಾಶ ಕೊಟ್ಟರೆ, ಮತ್ತೊಂದು ಪಕ್ಷ ರಾಜಕಾರಣ ಮಾಡೋಕೆ ಅವಕಾಶವಾಗುತ್ತೆ ಎಂದು ಕಿವಿಮಾತು ಹೇಳಿದರು.

ಶನಿವಾರ ನಡೆದ ಪ್ರತಿಭಟನೆಯಲ್ಲಿ ಹಾಸನ, ಬಿಜಾಪುರ, ಬೆಳಗಾಂ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಚಾಮರಾಜನಗರ, ಮೈಸೂರು, ಚಿಕ್ಕಬಳ್ಳಾಪುರ, ದೇವನಹಳ್ಳಿ, ಬಾಗಲಕೋಟೆ, ಚನ್ನಪಟ್ಟಣ, ಹೆಲುವನಹಳ್ಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಂದಿ ನೂರಾರು ರೈತರು ಭಾಗಿಯಗಿದ್ದರು.

ರೈತ ಪ್ರಮುಖರಾದ ಅನಸೂಯಮ್ಮ, ಹನೂರು ಪ್ರಕಾಶ್, ಪ್ರಕಾಶ್ ರಾಮನಾಯಕ್, ಕಣಲಗ್ ಮೂರ್ತಿ, ಜೂ ದಿನೇಶ್, ಗ್ಯಾರಂಟಿ ರಾಮಣ್ಣ ಮುಂತಾದವರು ವೇದಿಕೆಯಲ್ಲಿದ್ದರು.

### ಜು.21: ಭೂಸ್ವಾಧೀನ ವಿರೋಧಿ ದಿನ

ಭೂಸ್ವಾಧಿನ ವಿರೋಧಿಸಿ ಬೈರಮಂಗಲದಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲು ಆಗಮಿಸಿದ್ದ ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ ಮಾತನಾಡಿ, ಜುಲೈ 21ರಂದು ರೈತ ಹುತಾತ್ಮ ದಿನವನ್ನು ಭೂಸ್ವಾಧಿನ ವಿರೋಧಿ ದಿನವನ್ನಾಗಿ ಆಚರಿಸಲು ನಿರ್ಧರಿಸಿದ್ದೇವೆ. ಬಿಡದಿ, ಆನೇಕಲ್, ಚಿಕ್ಕಬಳ್ಳಾಪುರದ ಜಂಗಮಕೋಟೆ ದೊಡ್ಡಬೆಲೆವಂಗಲಗಳಲ್ಲಿ ನಡೆಯುತ್ತಿರುವ ಭೂಸ್ವಾಧೀನವನ್ನು ವಿರೋಧಿಸುತ್ತೇವೆ. ಅಂದು ರಾಜ್ಯದ ರೈತರು ತಮ್ಮ ಜಿಲ್ಲೆಗಳಲ್ಲೇ ಪ್ರತಿಭಟನೆ ಮಾಡಿ ನಿಮ್ಮ ಚಳುವಳಿಗೆ ಶಕ್ತಿ ತುಂಬುತ್ತಾರೆ ಎಂದರು. ಬೈರಮಂಗಲ ಸುತ್ತ ಮುತ್ತ 9000 ಎಕರೆ ಭೂಮಿಯ ಸ್ವಾಧಿನಕ್ಕೆ 2013ರಲ್ಲೇ ಕೆಂಗಣ್ಣು ಬಿದ್ದಿತ್ತು. ಎಲ್ಲಾ ಮೂರು ಪಕ್ಷಗಳು ಇದರಲ್ಲಿ ಭಾಗಿಯಾಗಿವೆ. ಇಂದು ನೀವು ನಡೆಸುತ್ತಿರುವ ಹೋರಾಟದ ವೇದಿಕೆಗೆ ರಾಜಕಾರಣಿಗಳಿಗೆ ಅವಕಾಶ ಕೊಡಬೇಡಿ. 2013ರಲ್ಲಿ ಕಾನೂನಿಗೆ ಏನಾಯ್ತು ಎಂಬುದು ನಿಮ್ಮ ಕಣ್ಣ ಮುಂದಿದೆ ಎಂದು ಜೆಡಿಎಸ್ ವಿರುದ್ಧ ಹರಿಹಾಯ್ದರು.

### ಬಿಕ್ಷುಕರನ್ನು ನೋಡಲು ಬ್ಯಾರಿಕೇಡು!

ಚುನಾವಣೆಯ ವೇಳೆ ರಾಜಕಾರಣಿಗಳು ನಿಮ್ಮ ಬಳಿ ಬಂದು ಮತಬಿಕ್ಷೆ ಕೇಳಿದರು. ಅಂದರೆ ಅವರು ಬಿಕ್ಷುಕರು ಎಂದಾಯಿತು. ಈಗ ಭೂಸ್ವಾಧೀನಕ್ಕೆ ನೋಟಿಸ್ ಇದೆ. ಸ್ವಾಧೀನಕ್ಕೆ ಬಂದು ನಿಮ್ಮ ಬಳಿ ಬಂದು ಅವರು ಮಾತನಾಡಬೇಕಿತ್ತು. ಆದರೆ ನೀವೆ ಅವರ ಬಳಿ ಹೋಗಿದ್ದೀರಿ. ಹೀಗೆ ಹೋದಾಗ ಬ್ಯಾರಿಕೇಡ್‌ಗಳು, ಪೊಲೀಸರು ಅಡ್ಡ ಇದ್ದರು. ಬಿಕ್ಷಕರನ್ನು ನೋಡಲು ಬ್ಯಾರಿಕೇಡ್ ಇತ್ತು ಎಂದು ತಮ್ಮ ಟೀಕೆ ಮುಂದುವರೆಸಿದರು.

### ಅವರ ಬಳಿ ಲಾಠಿ ಇದೆ, ನಮ್ಮ ಬಳಿ ಪೊರಕೆ ಇದೆ!

ನಮ್ಮಬಳಿ ಎತ್ತಿನಗಾಡಿಗಳು ಇವೆ. ಭೂಮಿ ತೆಗೆದುಕೊಳ್ಳೋಕೆ ಬಿಡದಿಗೆ ಬಂದಾಗ ಎತ್ತಿನಗಾಡಿಗಳನ್ನು ಬ್ಯಾರಿಕೇಡ್‌ಗಳಂತೆ ಅಡ್ಡ ಕಟ್ಟಿ, ಆ ಬ್ಯಾರಿಕೇಡ್ ದಾಟಿ ಬರಲಿ ನೋಡೋಣ. ಅವರ ಬಳಿ ಲಾಠಿ ಇದ್ದರೆ, ನಮ್ಮ ಬಳಿ ಪೊರಕೆ ಇದೆ. ಬಾರುಕೋಲು ಇದೆ. ನಮ್ಮ ಬಳಿ ದನಕರು ಸೈನ್ಯವೂ ಇದೆ ಎಂದರು. ಚುನಾವಣಾ ಸಭೆಗಳಿಗೆ ಕರೆ ತರಲು ಒಬ್ಬರಿಗೆ 500, 1000 ಕೊಡ್ತಾರೆ. ಆದರೆ ಇಲ್ಲಿ ಪ್ರತಿಭಟನಾ ಸ್ಥಳಕ್ಕೆ 13 ಜಿಲ್ಲೆಗಳಿಂದ ಬಸ್ಸು, ಟ್ರೈನುಗಳಲ್ಲಿ ಇಲ್ಲಿಗೆ ರೈತರು ಬಂದಿದ್ದಾರೆ. ಯಾರು ಯಾವ ಹಣವನ್ನು ಕೊಟ್ಟಿಲ್ಲ. ನೀವು ರಾಖಿ ಕಟ್ಟಿಲ್ಲ, ಆದರೆ ಹಸಿರು ಶಾಲು ಹೊಕಿಕೊಂಡಿದ್ದೀರಿ. ಆ ಸಂಬಂಧವೇ ಇಲ್ಲಿಗೆ ಕರೆ ತಂದಿದೆ ಎಂದರು.


### ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ

## ಒಟ್ಟು 23,910 ಮತದಾರರ ಎನ್ಯೂಮರೇಷನ್ ವಿತರಣೆ

ಬೆಂಗಳೂರು: ಜುಲೈ 9 ರಂದು ನಡೆದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ –2026 ಪ್ರಕ್ರಿಯೆ ಚುರಿಕಿನಿಂದ ಸಾಗಿದ್ದು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 7,85,800 ಮತದಾರರು ಇದ್ದು. ಒಟ್ಟು 23,910 ಮತದಾರರ ಎನ್ಯೂಮರೇಷನ್ ಫಾರ್ಮ್‌ಗಳನ್ನು (ಇಈ) ವಿತರಿಸಲಾಗಿದ್ದು, 12,195 ಎನ್ಯೂಮರೇಷನ್ ಫಾರ್ಮ್‌ಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದು ಮತಾದಾರರ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ (ಅಂಜನಾಪುರ) ವಿಭಾಗದ ನೊಂದಣಾಧಿಕಾರಿ ಹಾಗೂ ಕಂದಾಯ ಅಧಿಕಾರಿಗಳು ತಿಳಿಸಿದರು.

## ಕಬ್ಬಿನ ಬೆಳೆಗೆ ನೀರು ಬಿಡುವಂತೆ ಆನಂದ್ ಒತ್ತಾಯ

**ಶ್ರೀರಂಗಪಟ್ಟಣ** : ಮಂಡ್ಯ ಜಿಲ್ಲೆಯಲ್ಲಿ ಬೆಳೆದು ನಿಂತಿರುವ ಕೋಟ್ಯಾಂತರ ಮೊತ್ತದ ಕಬ್ಬು ಬೆಳೆಗೆ ಅಗತ್ಯವಾಗಿರುವ ನೀರು



ಹರಿಸಿ ರೈತ ರನ್ನು ಸಂಕಷ್ಟದಿಂದ ಪಾರು ಮಾಡು ವಂತೆ ಜಿಲ್ಲಾ ಬಿಜೆಪಿ ಮುಖಂಡ ಎಸ್ ಜೆ ಆನಂದ್ ಹೇಳಿಕೆಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ

ಕೆ ಆರ್ ಎಸ್ ಆಣೆಕಟ್ಟೆಯಲ್ಲಿ ಈಗ 90 ಅಡಿ ನೀರಿದೆ . ಇನ್ನು ಜಲನಯನ ಪ್ರದೇಶದಲ್ಲಿ ಮಳೆಯಾಗುವ ಸೂಚನೆ ಇದೆ. ಹೀಗಾಗಿ ಈಗ ಸಂಗ್ರಹವಾಗಿರುವ ನೀರಿನಲ್ಲೇ ಮಂಡ್ಯ ಬೆಳೆಗೆ ಒಂದು ನೀರನ್ನು ಕೊಡುವಂತೆ ರೈತರ ಪರವಾಗಿ ಸರ್ಕಾರವನ್ನು ಆಗ್ರಹಿಸಿದ್ದಾರೆ. ಮಂಡ್ಯ ಜಿಲ್ಲೆಯ ರೈತರು ಈಗ ಸಾಕಷ್ಟು ಸಂಕಷ್ಟದಲ್ಲಿದ್ದಾರೆ . ಕಬ್ಬು ಬೆಳೆಗೆ 8 ದಿನಗಳ ಕಾಲ ನೀರಿನ ಅಗತ್ಯವಿದೆ. ಇಲ್ಲದೆ ಹೋದರೆ ಬೆಳೆ ಒಣಗಿ ಕೋಟ್ಯಾಂತರ ರು ನಷ್ಟವಾಗಲಿದೆ. ಮಂಡ್ಯ ರೈತ ನಾಯಕರು ಹಾಗೂ ಶಾಸಕರು ಸರ್ಕಾರದ ಮೇಲೆ ಒತ್ತಡ ತಂದು ನಾಲೆಗೆ ಬಿಡಿಸುವಂತೆ ಆನಂದ್ ಒತ್ತಾಯಿಸಿದ್ದಾರೆ.

## ಮನೆಯೊಳಗಿದ್ದ ನಾಗರಹಾವು ರಕ್ಷಣೆ

ಗುಂಡ್ಲುಪೇಟೆ: ತಾಲೂಕಿನ ಕಗ್ಗಳದಹುಂಡಿ ಗ್ರಾಮದ ಮನೆ ಯೊಂದರಲ್ಲಿ ನುಗ್ಗಿದ್ದ ನಾಗರಹಾವನ್ನು ಉರಗಪ್ರೇಮಿ ಸ್ವಾಮಿ ಸುರ ಕ್ಷಿತವಾಗಿ ರಕ್ಷಿಸಿ ಅರಣ್ಯ ಪ್ರದೇಶಕ್ಕೆ ಬಿಟ್ಟ ಘಟನೆ ಶನಿವಾರ ನಡೆದಿದೆ.

ಮನೆಯೊಳಗೆ ನಾಗರಹಾವು ಕಾಣಿಸಿಕೊಂಡಿದ್ದರಿಂದ ಕುಟುಂ ಬದವರು ಆತಂಕಗೊಂಡು ಉರಗಪ್ರೇಮಿ ಸ್ವಾಮಿ ಅವರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಅವರು ಎಚ್ಚರಿಕೆ ಯಿಂದ ಕಾರ್ಯಾಚರಣೆ ನಡೆಸಿ ಯಾವುದೇ ಅಪಾಯವಾಗದಂತೆ ನಾಗರಹಾವನ್ನು ಹಿಡಿದು ಸುರಕ್ಷಿತವಾಗಿ ರಕ್ಷಿಸಿದರು.


ಬಳಿಕ ಅರಣ್ಯ ಇಲಾಖೆ ಮಾರ್ಗಸೂಚಿಯಂತೆ ನಾಗರಹಾ ವನ್ನು ಸೂಕ್ತ ಅರಣ್ಯ ಪ್ರದೇಶದಲ್ಲಿ ಬಿಡಲಾಯಿತು. ಸಮಯೋ ಚಿತವಾಗಿ ಕಾರ್ಯಾಚರಣೆ ನಡೆಸಿದ ಉರಗಪ್ರೇಮಿ ಸ್ವಾಮಿ ಅವರ ಕಾರ್ಯಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಅರಣ್ಯಾ ಧಿಕಾರಿಗಳು ಹಾಗೂ ಉರಗ ತಜ್ಞರ ಸಲಹೆಯಂತೆ, ಹಾವುಗಳು ಕಂಡುಬಂದಾಗ ಅವುಗಳನ್ನು ಕೊಲ್ಲಲು ಅಥವಾ ಹಿಡಿಯಲು ಪ್ರಯತ್ನಿಸದೆ ತಕ್ಷಣ ಉರಗ ರಕ್ಷಕರಿಗೆ



ಅಥವಾ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ.

## ಇಲವಾಲ ಬಳಿ ಕೃಷಿ ಭೂಮಿ ಕೈ ಬಿಡಿ

**ಮೈಸೂರು:** ತಾಲ್ಲೂಕಿನ ಇಲವಾಲ ಹೋಬಳಿ ವ್ಯಾಪ್ತಿಯ ದೊಡ್ಡ ಮಾರಗೌಡನಹಳ್ಳಿ, ಕಮರಳ್ಳಿ, ಸೀಗಳ್ಳಿ, ನಾಗವಾಲ ಮತ್ತು ಬೊಮ್ಮೇನಹಳ್ಳಿ ಗ್ರಾಮಗಳ ಫಲವತ್ತಾದ ಭೂಮಿಯ ಸ್ವಾಧೀನಕ್ಕೆ ಪಾಲಿಕೆ ಮುಂದಾಗಿರುವ ನಿರ್ಧಾರ ಕೈಬಿಡಬೇಕು. ಇಲ್ಲದಿದ್ದಲ್ಲಿ ಹೋರಾಟ ರೂಪಿಸಲಾಗುವುದು ಎಂದು ಕನಾಟಕ ಪ್ರಜಾಪಾರ್ಟಿ (ರೈತ ಪರ್ವ) ಪಕ್ಷದ ರಾಜ್ಯಾಧ್ಯಕ್ಷ ಬಿ. ಶಿವಣ್ಣ ಎಚ್ಚರಿಸಿದರು.



ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರದೇಶಗಳಲ್ಲಿ 2,160ಎಕರೆ ಫಲವತ್ತಾದ ಭೂಮಿಯನ್ನು ಎಕರೆಗೆ ಐದು ಲಕ್ಷ, ಒಂಬತ್ತು ನಿವೇಶನ ನೀಡುವ ನೆಪದಲ್ಲಿ ಸ್ವಾಧೀನಕ್ಕೆ ಮುಂದಾಗಿ ರೈತರನ್ನು ಒಕ್ಕಲೆಬ್ಬಿಸ ಹೊರಟಿರುವುದು ಸರಿಯಲ್ಲ. ರೈತರು ವಂಶ ಪಾರಂಪರ್ಯವಾಗಿ ಜಮೀನನ್ನು ಅವಲಂಬಿಸಿದ್ದಾರೆ. ಅವರಿಗೆ ಆಮಿಷ ತೋರಿಸಿ ಭೂಮಿ ಕಸಿಯಲು ಮುಂದಾಗಲಾಗಿದೆ ಎಂದು ಆರೋಪಿಸಿದರು.

ಭೂಸ್ವಾಧೀನ ಪ್ರಸ್ತಾವನೆ ಕೈಬಿಡದಿದ್ದರೆ ಗ್ರಾಮಸ್ಥರೊಡಗೂಡಿ ಜಿಲ್ಲಾಧಿಕಾರಿ ಕಚೇರಿಗೆ ಪಾದಯಾತ್ರೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ಪದಾಧಿಕಾರಿಗಳ ನೇಮಕ: ಪಕ್ಷದ ಮಹಿಳಾ ರಾಜ್ಯ ಘಟಕದ ಅಧ್ಯಕ್ಷೆಯಾಗಿ ರಂಜಿತಾ ಸುಬ್ರಹ್ಮಣ್ಯ, ನಗರ ಮಾಧ್ಯಮ ವಕ್ತಾರೆಯಾಗಿ ವೀಣಾ, ಕೃಷ್ಣರಾಜ ಘಟಕದ ಅಧ್ಯಕ್ಷೆಯಾಗಿ ಪ್ರೇಮಾ, ಚಾಮರಾಜ ಘಟಕದ ಅಧ್ಯಕ್ಷೆಯಾಗಿ ರೇಖಾ, 55ನೇ ವಾರ್ಡ್ ಅಧ್ಯಕ್ಷೆಯಾಗಿ ಲಾವಣ್ಯ ಪ್ರತಾಪ್, 65ನೇ ವಾರ್ಡ್ ಉಪಾಧ್ಯಕ್ಷೆಯಾಗಿ ಶಾರದಾ, 25ನೇ ವಾರ್ಡ್ ಅಧ್ಯಕ್ಷೆಯಾಗಿ ಮಮತಾ ನೇಮಕವಾದರು.

**ಬಿಎಲ್ ಓ, ಎಸ್ ಐ ಆರ್ ಹಾಗೂ ಇತರೆ ಸಮೀಕ್ಷಾ ಕೆಲಸಗಳಿಂದ ಮುಕ್ತಗೊಳಿಸಲು ಎ.ನಾಗಮಣಿ ಆಗ್ರಹ**

# ಅಂಗನವಾಡಿ ನೌಕರರು, ಬಿಸಿಯೂಟದ ಕಾರ್ಯಕರ್ತರ ಪ್ರತಿಭಟನೆ

ಚಾಮರಾಜನಗರ, ಸ್ಕೀಮ್ ನೌಕರರ ಕರಾಳ ದಿನಾಚರಣೆ ಅಂಗವಾಗಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಅಂಗನವಾಡಿ ನೌಕರರು, ಬಿಸಿಯೂಟದ ಕಾರ್ಯಕರ್ತೆಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ನಾಗಮಣಿ, ಬಿಸಿಯೂಟದ ಅಧ್ಯಕ್ಷೆ ನಾಗಸುಂದ್ರಮ್ಮ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತದ ಮುಂಭಾಗಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮುಖಾಂತರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ ಮಾತನಾಡಿ, ರಾಜ್ಯ ಸರ್ಕಾರ ಚುನಾವಣೆ ಭರವಸೆಯಂತೆ



2026–ಮಾರ್ಚ್ 23–24ರ ಸಭೆಯ ಚರ್ಚೆಯಂತೆ 15000 ಕಾರ್ಯಕರ್ತೆ 10,000 ಸಹಾಯಕಿಗೆ ಜಾರಿ ಮಾಡಬೇಕು. ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಎಲ್ ಕೆಜಿ, ಯುಕೆಜಿ ವಿಸ್ತರಣೆ ಆಗಬೇಕು.2026 ಮಾರ್ಚ್ –24ರ ಸಭೆಯ ತೀರ್ಮಾನದಂತೆ 10.000 ಕೇಂದ್ರಗಳಲ್ಲಿ ಎಲ್ ಕೆಜಿ, ಯುಕೆಜಿ ಪ್ರಾರಂಭಿಸಲು ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

3–6 ವರ್ಷದ ಮಕ್ಕಳಿಗೆ ಆರಂಭಿಕ ಬಾಲ್ಯ ಆರೈಕೆ, ಶಿಕ್ಷಣ ಮತ್ತು ಅಭಿವೃದ್ಧಿ ಹಕ್ಕನ್ನು ಕಾನೂನಿನ ಮೂಲಕ ಖಾತರಿಪಡಿಸಬೇಕು. 2011ರಿಂದ ನಿವೃತ್ತ ಆದವರಿಗೆ ಗ್ರಾಚ್ಯುಟಿ ಪಾವತಿಸಬೇಕು. 3–6 ವರ್ಷದ ಮಕ್ಕಳಿಗೆ ಸಮವಸ್ತ್ರ ಪುಸ್ತಕಗಳು, ಆಟಿಕೆಗಳನ್ನು ಒದಗಿಸಬೇಕು. 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗಾಗಿ ಎಲ್ಲಾ ಅಂಗನವಾಡಿಗಳನ್ನು ಅಂಗನವಾಡಿ – ಕಮ್ – ಶಿಶುಪಾಲನಾ ಕೇಂದ್ರಗಳಾಗಿ ಪರಿವರ್ತಿಸಬೇಕು ಎಂದು ಒತ್ತಾಯಿಸಿದರು.

ಬಿಎಲ್‌ಓ, ಎಸ್‌ಐಆರ್ ಹಾಗೂ ಇತರೆ ಸಮೀಕ್ಷಾ ಕೆಲಸಗಳಿಂದ ಮುಕ್ತಗೊಳಿಸಬೇಕು. ಅಂಗನವಾಡಿ ನೌಕರರನ್ನು ಬಿಎಲ್‌ಓ ಕೆಲಸದಿಂದ ಸಂಪೂರ್ಣ ಕೈಬಿಡಬೇಕು. 50 ವರ್ಷ ಮೇಲಟವರನ್ನು. ಸಹಾಯಕಿ ಇಲ್ಲದಿದ್ದಾರೆ. ಎಲ್ ಕೆಜಿ, ಯುಕೆಜಿಗೆ ಆಯ್ಕೆಯಾದ. ತೀವ್ರ ಖಾಯಿಲೆ ಇರುವವರನ್ನು ಬಿಎಲ್‌ಓಯಿಂದ ಬಿಡುಗಡೆ ಮಾಡಬೇಕು ಇಲಾಖೇತರ ಯಾವುದೇ ಕೆಲಸಗಳನ್ನು ನೀಡಬಾರದು. 'ಪೋಷಣ್ ಟ್ರ್ಯಾಕರ್' ಹೆಸರಿನಲ್ಲಿ ಕಿರುಕುಳ ನಿಲ್ಲಿಸಬೇಕು. ಮೊಬೈಲ್, ಡೇಟಾ ಹಾಗೂ ನಿರ್ವಹಣಾ ವೆಚ್ಚಗಳನ್ನು ಮರುಪಾವತಿಸಬೇಕು ಎಂದು ಆಗ್ರಹಿಸಿದರು.

ಡಿಜಿಟಲೀಕರಣವನ್ನು ಮೇಲ್ವಿಚಾರಣೆ ಅಥವಾ ಕಿರುಕುಳದ ಸಾಧನವಾಗಿ ಬಳಸಬಾರದು. ಡಿಜಿಟಲ್ ಕೆಲಸಕ್ಕಾಗಿ ಉತ್ತಮ ಗುಣಮಟ್ಟದ ಟ್ಯಾಬ್ಲೆಟ್‌ಗಳು ಮತ್ತು ಡೇಟಾ ಪ್ಯಾಕ್‌ಗಳನ್ನು ಒದಗಿಸಬೇಕು. FRS ಮತ್ತು E-KYC ಕಡ್ಡಾಯ ಎನ್ನುವುದನ್ನು ಹಿಂಪಡೆಯಬೇಕು. ಅಂಗನವಾಡಿ ಕೇಂದ್ರಗಳಿಗೆ ಶುದ್ಧ ಕುಡಿಯುವ ನೀರು, ಸೂಕ್ತ ಮೂಲಸೌಕರ್ಯ, ಗ್ಯಾಸ್ ಸಂಪರ್ಕ, ಅಡುಗೆ ಆಧುನಿಕ ಅಡುಗೆ ಉಪಕರಣಗಳನ್ನು ಒದಗಿಸಬೇಕು. ಬಾಡಿಗೆ ಕಟ್ಟಡಗಳಲ್ಲಿ ಸಲಕರಣೆಗಳು ಹಾಗೂ ಕಾರ್ಯನಿರ್ವಹಿಸುವ ಕೇಂದ್ರಗಳ ಬಾಡಿಗೆಯನ್ನು ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಹೆಚ್ಚಿಸಬೇಕು. ಮಹಾನಗರಗಳಲ್ಲಿ ಕನಿಷ್ಠ 15,000, ನಗರ ಪ್ರದೇಶಗಳಲ್ಲಿ 10,000 ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 15.000 ಬಾಡಿಗೆ ನೀಡಬೇಕು. ಉತ್ತಮ ಗುಣಮಟ್ಟದ ಸ್ಥಳೀಯ ಪೌಷ್ಟಿಕ ಆಹಾರವನ್ನು ನಿಯಮಿತವಾಗಿ ಒದಗಿಸಬೇಕು. ವೈದ್ಯಕೀಯ ಪರೀಕ್ಷೆಗೊಳಪಡದ 'ಫೋರ್ಟಿಫೈಡ್' ಆಹಾರ ಸರಬರಾಜು ಮಾಡಬಾರದು. ತಾಜಾ ಸ್ಥಳೀಯ ಆಹಾರವನ್ನು ಒದಗಿಸಬೇಕು. ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಅಧಿಕೃತ ಸಭೆಗಳಿಗೆ ಹಾಜರಾಗುವಾಗ ಖಿಂ/ಆಂ ಯನ್ನು ಸರ್ಕಾರಿ ನೌಕರರ ಡಿ ಗುಂಪಿನವರಿಗೆ ಕೊಡುವ ಮೊತ್ತವನ್ನು ಪಾವತಿಸಬೇಕು. ಒತ್ತಾಯಿಸಿದರು. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾ ಯಕಿಯರನ್ನು ಖಾಯಂಗೊಳಿಸಬೇಕು ಖಾಯಂಗೊಳಿ ಸುವವರೆಗೆ 45ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿ ಸಿದರು. ಪ್ರತಿಭಟನೆಯಲ್ಲಿ ಖಜಾಂಚಿ ಭಾಗ್ಯಮ್ಮ, ಚಾಮ ರಾಜನಗರ ತಾಲೂಕು ಕಾರ್ಯದರ್ಶಿ ಶಾಹೇದಬಾನು, ಖಜಾಂಚಿ ಗುರುಮಲ್ಲಮ್ಮ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷೆ ಗುರುಲಿಂಗಮ್ಮ, ಕಾರ್ಯದರ್ಶಿ ದೇವಮ್ಮ, ಖಜಾಂಚಿ ಸುಮಿತ್ರ, ಯಳಂದೂರು ತಾಲೂಕು ಅಧ್ಯಕ್ಷೆ ಮೀನಾಕ್ಷಿ, ಕಾರ್ಯದರ್ಶಿ ಭಾಗ್ಯ, ಸಂತೇಮರಹಳ್ಳಿ ಅಧ್ಯಕ್ಷೆ ಪಾರ್ವತಮ್ಮ, ಖಜಾಂಚಿ ಜಯಮಾಲ, ಕೊಳ್ಳೇಗಾಲ ಅಧ್ಯಕ್ಷೆ ಶಾಂತಮ್ಮ ಬಿಸಿಯೂಟ ಅಧ್ಯಕ್ಷೆ ನಾಗಸುಂದ್ರಮ್ಮ, ಕಾರ್ಯದರ್ಶಿ ನಾಗಮ್ಮ, ಉಪಾಧ್ಯಕ್ಷೆ ಗೌರಮ್ಮ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ನೂತನ ಪೊಲೀಸ್ ಚೌಕಿಗೆ ವರಿಷ್ಠಾಧಿಕಾರಿ ಚಾಲನೆ

ಚಾಮರಾಜನಗರ, ನಗರದ ಹೃದಯಭಾಗದಲ್ಲಿರುವ ಭುವನೇಶ್ವರಿ ವೃತ್ತದಲ್ಲಿ ನಿರ್ಮಿಸಲಾಗಿರುವ ನೂತನ ಪೊಲೀಸ್ ಚೌಕಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಅವರು ಚಾಲನೆ ನೀಡಿದರು.

ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ದೊಡ್ಡ ದೊಡ್ಡ ಮಹಾನಗರಗಳಲ್ಲಿರುವಂತೆ ವೃತ್ತಾಕಾರದ ಆಕರ್ಷಕ ಮಾದರಿಯಲ್ಲಿ ನಗರದ ಭುವನೇಶ್ವರಿ ವೃತ್ತ (ಪಚ್ಚಪ್ಪ ಸರ್ಕಲ್) ಹಾಗೂ ಸಂತೇಮರಹಳ್ಳಿ ವೃತ್ತಗಳಲ್ಲಿ ನಿರ್ಮಿಸಿರುವ ಪೊಲೀಸ್ ಚೌಕಿ ಬಟನ್ ಆಪರೇಟ್ ಮಾಡುವ ಮೂಲಕ ಕಾರ್ಯಾರಂಭಕ್ಕೆ ಅನುವು ಮಾಡಿಕೊಡಲಾಯಿತು. ಇದೇ ವೇಳೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಅವರು ಪಟ್ಟಣದಲ್ಲಿ ಸಂಚಾರದಟ್ಟಣೆ ನಿಯಂತ್ರಿಸುವ ಸಮಯ ದಲ್ಲಿ ಮಳೆ ಬಂದರೆ ಸಂಚಾರಿ ಪೊಲೀಸರ ಕಾರ್ಯ ನಿರ್ವಹಣೆಗೆ ತೊಂದರೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಸಂಚಾರ ಕಾರ್ಯದ ಸುಗಮ ನಿರ್ವಹಣೆಗೆ ನಗರದಲ್ಲಿ 2 ಹೊಸ ಪೊಲೀಸ್ ಚೌಕಿ ಹಾಗೂ ಹಳೆಯ ಚೌಕಿಗಳನ್ನು ನವೀಕರಣ ಮಾಡಲಾಗಿದೆ. ದೊಡ್ಡರಾಯಪೇಟೆ ಜಂಕ್ಷನ್‌ನಲ್ಲಿಯೂ ಪೊಲೀಸ್ ಚೌಕಿ ನಿರ್ಮಿಸಲಾಗಿದೆ ಎಂದರು.

ಕೊಳ್ಳೇಗಾಲ ಪಟ್ಟಣದಲ್ಲಿಯೂ ಸಂಚಾರದಟ್ಟಣೆ ನಿಯಂತ್ರಿಸಲು ಅನುಕೂಲವಾಗುವಂತೆ 3 ಹೊಸ ಪೊಲೀಸ್



ಚೌಕಿಗಳನ್ನು ಪ್ರಮುಖ ಸ್ಥಳಗಳಲ್ಲಿ ತೆರೆಯಲಾಗಿದೆ. ಆ ಮೂಲಕ ಜಿಲ್ಲೆಯಲ್ಲಿ ನಾಗರಿಕರಿಗೆ ಸಂಚಾರಿ ನಿಯಮಗಳ ಪಾಲನೆ ಅರಿವು ನೀಡಿ ಕಾನೂನು ಸುವ್ಯವಸ್ಥೆ ಕಾಪಾಡಲಾಗುತ್ತಿದೆ. ಪ್ರವಾಸಿತಾಣವಾಗಿರುವ ಜಿಲ್ಲೆಯ ಗಡಿಭಾಗ ಹಾಗೂ ಅಂತರ ರಾಜ್ಯ ಸಂಪರ್ಕ ಹೊಂದಿರುವ ಗುಂಡ್ಲುಪೇಟೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ. ಅಲ್ಲಿಗೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾಗಿದ್ದು, ಶೀಘ್ರ ಕಾರ್ಯ ಆರಂಭಿಸಲಿದೆ ಎಂದು ತಿಳಿಸಿದರು.

ಚಾಮರಾಜನಗರ ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಸಂಚಾರಿ ನಿಯಮಗಳನ್ನು ಪ್ರದರ್ಶಿಸುವ ಡಿಸ್‌ಪ್ಲೇ ಬೋರ್ಡ್ ಅಳವಡಿಸಲಾಗುತ್ತದೆ. ಅಲ್ಲದೆ ಡಿಸ್‌ಪ್ಲೇ ಆಗುವ ಸಂಚಾರಿ ನಿಯಮಗಳನ್ನು ಮೈಕ್ ಮೂಲಕ ತಿಳಿಸಲಾಗುತ್ತದೆ. ಈಗಾಗಲೇ ವಾಹನಗಳ ವೇಗಕ್ಕೆ ಕಡಿವಾಣ ಹಾಕಲು ರಸ್ತೆ ಡುಬ್ಬಗಳನ್ನು (ಹಂಪ್ಸ್) ನಿರ್ಮಿಸಲಾಗಿದೆ. ಹಂಪ್ಸ್‌ಗಳಿಗೆ ನಿಗದಿತ ಬಣ್ಣ ಬಳಿಯಲಾಗಿದೆ. ವಾಹನ ಸವಾರರು ಹೆಲ್ಮೆಟ್ ಧರಿಸಬೇಕು. ತ್ರಿಬಲ್ ರೈಡಿಂಗ್ ಮಾಡಬಾರದು ಹಾಗೂ ಕಾರು ಸವಾರರು ಸೀಟ್ ಬೆಲ್ಟ್ ಹಾಕಿ ಸಂಚಾರಿ ನಿಯಮಗಳನ್ನು ಪಾಲಿಸಬೇಕು. ಪೋಷಕರು ಸಹ ತಮ್ಮ ಮಕ್ಕಳಿಗೆ ಸಂಚಾರ ನಿಯಮಗಳ ಅರಿವು ಮೂಡಿಸಬೇಕು ಎಂದರು.

ಮುಂದಿನ ಕೆಲ ದಿನಗಳಲ್ಲಿ ಪಟ್ಟಣದ ಮುಖ್ಯ ವೃತ್ತಗಳಲ್ಲಿ ಹಾಗೂ ಜನನಿಬಿಡ ಸ್ಥಳಗಳಲ್ಲಿ ಎ.ಎನ್.ಪಿ.ಆರ್ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದ್ದು, ವಾಹನಸಂಖ್ಯೆಯನ್ನು ನಿಖರವಾಗಿ ಗುರುತಿಸಿ ಫೋಟೋ ಸಮೇತ ವರದಿ ಮಾಡಲಿವೆ ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಡಿವೈ.ಎಸ್.ಪಿ ಸ್ನೇಹರಾಜ್, ಪೊಲೀಸ್ ಅಧಿಕಾರಿಗಳು ಇದೇ ಸಂದರ್ಭದಲ್ಲಿ ಹಾಜರಿದ್ದರು.

# ಎಸ್‌ಐಆರ್ ಪ್ರಕ್ರಿಯೆ ವಿಸ್ತರಿಸಿ




ಮೈಸೂರು: ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಅವಧಿಯನ್ನು 6 ತಿಂಗಳಿಗೆ ವಿಸ್ತರಿಸಿ ಕ್ರಮಬದ್ಧವಾಗಿ ನಡೆಸಬೇಕು ಎಂದು ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿ ರಾಷ್ಟ್ರೀಯ ಅಧ್ಯಕ್ಷ ಅಯೂಬ್ ಖಾನ್ ಮನವಿ ಮಾಡಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಎಲ್‌ಒ ಮುಖಾಂತರ ವಿತರಿಸುತ್ತಿರುವ ಗಣತಿನಮೂನೆ ಫಾರಂನಲ್ಲಿ ಹಲವು ಲೋಪಗಳಿವೆ. ಒಬ್ಬ ಮತದಾರ ತನ್ನ ಕುಟುಂಬದ ಇತರರು ವಿದೇಶಗಳ ಪೌರತ್ವ ಪಡೆದಿಲ್ಲ ಎಂಬ ದೃಢೀಕರಣ ನೀಡಬೇಕು. ಆತ ತಪ್ಪು ಹೇಳಿಕೆ ನೀಡಿದರೆ ಶಿಕ್ಷೆ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಮತದಾರ ವೈಯಕ್ತಿಕನಾಗಿದ್ದು, ಆತನಿಗೆ ಈ ಹೊಣೆಗಳೆಲ್ಲಾ ಏಕೆ ಬೇಕು ಎಂದು ಪ್ರಶ್ನಿಸಿದರು.

ಸುಪ್ರೀಂ ಕೋರ್ಟ್ ಆದೇಶವಿದ್ದರೂ ಆಧಾರ್ ಕಾರ್ಡ್ ಅನ್ನು ಗುರುತಿನ ಪುರಾವೆಯಾಗಿ ಬಳಸುತ್ತಿಲ್ಲ. ಒಂದು ತಿಂಗಳ ಸಮಯವೂ ಅತ್ಯಂತ ಕಡಿಮೆ. ಚುನಾವಣಾ ಆಯೋಗವು ಅರ್ಜಿಯಲ್ಲಿನ ಈ ಲೋಪಗಳನ್ನು ಸರಿಪಡಿಸಿ ಸಾಕಷ್ಟು ಸಮಯ ನೀಡಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ಕಾರ್ಯಕರ್ತ ಖೌನ್ಯೆನ್ ಮಿರ್ಜಾ, ಎಸ್.ಎಂ.ರೆಹಮಾನ್, ಪಕ್ಷದ ಸದಸ್ಯರಾದ ಶ್ರೀನಿವಾಸ್, ಯೋಗೇಂದ್ರ ಹಾಜರಿದ್ದರು.

ಮೊದಲ ಪುಟದಿಂದ

## ಆಸ್ಪತ್ರೆಯಲ್ಲಿ ಕೊನೆಯುಸಿರು

ಪುನರುಜ್ಜೀವನ (ಸಿಪಿಆರ್) ಅನ್ನು ತಕ್ಷಣವೇ ಪ್ರಾರಂಭಿಸಲಾಯಿತು. ಪುನರುಜ್ಜೀವನಗೊಳಿಸುವ ಪ್ರಯತ್ನಗಳ ಹೊರತಾಗಿಯೂ, ಅವರಿಗೆ ಅನೇಕ ಹೃದಯ ಸ್ತಂಭನಗಳು ಸಂಭವಿಸಿದವು. ಅವರನ್ನು ಪುನರುಜ್ಜೀವನಗೊಳಿಸಲು ಸಾಧ್ಯವಾಗದೇ ಸಂಜೆ 7.30ರ ಸಮಯದಲ್ಲಿ ಕೊನೆಯುಸಿರೆಳೆದಿದ್ದಾರೆಂದು ಅಪೋಲೊ ಆಸ್ಪತ್ರೆ ತಿಳಿಸಿದೆ.

**20ಕ್ಕೂ ಹೆಚ್ಚು ಭಾಷೆ, 48,000ಕ್ಕೂ ಅಧಿಕ ಗೀತೆ:**

ಜಾನಕಿ ಅಮ್ಮನವರ ಕಂಠಸಿರಿಗೆ ಭಾಷೆಯ ಗೆರೆಗಳಿರಲಿಲ್ಲ. ಚಿತ್ರಗಳು, ಆಲ್ಬಮ್‌ಗಳು, ದೂರದರ್ಶನ ಮತ್ತು ರೇಡಿಯೋ ಸೇರಿದಂತೆ ತಮ್ಮ ಸುದೀರ್ಘ ವೃತ್ತಿಜೀವನದಲ್ಲಿ ಬರೋಬ್ಬರಿ 48,000ಕ್ಕೂ ಹೆಚ್ಚು ಹಾಡುಗಳನ್ನು ಅವರು ರೆಕಾರ್ಡ್ ಮಾಡಿದ್ದಾರೆ. ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ, ಸಂಸ್ಕೃತ, ಒಡಿಯಾ, ತುಳು, ಉರ್ದು, ಪಂಜಾಬಿ, ಬಡಗ, ಬೆಂಗಾಲಿ, ಕೊಂಕಣಿ ಸೇರಿದಂತೆ ಭಾರತದ 20 ಭಾಷೆಗಳಲ್ಲಿ ಇವರ ಸ್ವರ ಸಾರಥ್ಯವಿತ್ತು. ಅಷ್ಟೇ ಅಲ್ಲದೆ, ಇಂಗ್ಲಿಷ್, ಜಪಾನೀಸ್, ಜರ್ಮನ್ ಮತ್ತು ಸಿಂಹಳದಂತಹ ವಿದೇಶಿ ಭಾಷೆಗಳಿಗೂ ತಮ್ಮ ಧ್ವನಿಯಾಗುವ ಮೂಲಕ ಭಾರತದ ಅತ್ಯಂತ ಬಹುಮುಖ ಪ್ರತಿಭೆಯ ಗಾಯಕಿ ಎನಿಸಿಕೊಂಡಿದ್ದರು.

**ಕನ್ನಡವೇ ಜಾನಕಿ ಅಮ್ಮನ ಉಸಿರು:**

ಆಂಧ್ರ ಮೂಲದವರಾಗಿದ್ದರೂ ಜಾನಕಿ ಅಮ್ಮನವರ ವೃತ್ತಿಜೀವನದಲ್ಲಿ ಅತಿ ಹೆಚ್ಚು ಗೀತೆಗಳನ್ನು ಹಾಡಿದ್ದು ನಮ್ಮ ಕನ್ನಡ ಭಾಷೆಯಲ್ಲಿ. ಕನ್ನಡದ ನಂತರದ ಸ್ಥಾನ ಮಲಯಾಳಂ ಭಾಷೆಯದ್ದಾಗಿದೆ. ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್, ಶಂಕರ್ ನಾಗ್ ಅವರ ಕಾಲದ ಸುವರ್ಣ ಯುಗದಿಂದ ಹಿಡಿದು ಇತ್ತೀಚಿನ ತಲೆಮಾರಿನವರೆಗೂ ಕನ್ನಡ ಚಿತ್ರರಂಗದ ಪ್ರತಿಯೊಬ್ಬ ನಾಯಕಿಯ ಧ್ವನಿಯಾಗಿ ಜಾನಕಿ ಅಮ್ಮ ಮಿಂಚಿದ್ದರು.

19ನೇ ವಯಸ್ಸಿಗೆ ಆರಂಭವಾದ ಸಂಗೀತ ಸವಾರಿ: 1957 ರಲ್ಲಿ ತಮಿಳಿನ 'ವಿಧಿಹಿನ್ ವಿಲಾಯಟ್ಟು' ಚಿತ್ರದ ಮೂಲಕ ಕೇವಲ 19ನೇ ವಯಸ್ಸಿನಲ್ಲಿಯೇ ಹಿನ್ನೆಲೆ ಗಾಯಕಿಯಾಗಿ ಜಾನಕಿ ಅಮ್ಮ ಚಿತ್ರರಂಗ ಪ್ರವೇಶಿಸಿದರು. ಅಚ್ಚರಿಯೆಂದರೆ, ಅವರು ವೃತ್ತಿಜೀವನ ಆರಂಭಿಸಿದ ಮೊದಲ ವರ್ಷದಲ್ಲೇ ಆರು ವಿಭಿನ್ನ ಭಾಷೆಗಳಲ್ಲಿ ಹಾಡಿ ಸೈ ಎನಿಸಿಕೊಂಡಿದ್ದರು. 2016 ರಲ್ಲಿ ಚಿತ್ರರಂಗ ಮತ್ತು ವೇದಿಕೆ ಕಾರ್ಯಕ್ರಮಗಳಿಂದ ಅಧಿಕೃತವಾಗಿ ನಿವೃತ್ತಿ ಘೋಷಿಸುವವರೆಗೆ ಸತತ 60 ವರ್ಷಗಳ ಕಾಲ ಅವರು ಸಂಗೀತ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ತದನಂತರ ಅಭಿಮಾನಿಗಳ ಒತ್ತಾಯಕ್ಕೆ ಮಣಿದು 2018 ರ ತಮಿಳಿನ 'ಪನ್ನಾಡಿ' ಚಿತ್ರಕ್ಕಾಗಿ ಮತ್ತೊಮ್ಮೆ ಹಾಡಿದ್ದರು.

**ಪ್ರಶಸ್ತಿಗಳೇ ಗೌರವಿಸಿದ ಮಹಾನ್ ಚೇತನ:**

ಎಸ್. ಜಾನಕಿ ಅವರ ಅಪಾರ ಪ್ರತಿಭೆಗೆ ಒಲಿದು ಬಂದ ಪ್ರಶಸ್ತಿ ಪುರಸ್ಕಾರಗಳು ಅಸಂಖ್ಯಾತ. 4 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಮತ್ತು ವಿವಿಧ ರಾಜ್ಯ ಸರ್ಕಾರಗಳಿಂದ ಬರೋಬ್ಬರಿ 33 ಚಲನಚಿತ್ರ ಪ್ರಶಸ್ತಿಗಳು ಇವರ ಮುಡಿಗೇರಿವೆ. ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ತಮಿಳುನಾಡು ಸರ್ಕಾರದ 'ಕಲೈಮಾಮಣಿ' ಮತ್ತು ಕರ್ನಾಟಕ ಸರ್ಕಾರದ ಅತ್ಯುನ್ನತ 'ರಾಜ್ಯೋತ್ಸವ ಪ್ರಶಸ್ತಿ' ನೀಡಿ ಇವರನ್ನು ಗೌರವಿಸಲಾಗಿತ್ತು.

# ನಾಡಪ್ರಭುವಿನ ಕೊಡುಗೆ ಅಪಾರ

## ಡಾ.ಸಿ.ಎನ್.ಅಶ್ವಥ್ ನಾರಾಯಣ ಹೇಳಿಕೆ । ಕೆಂಪೇಗೌಡರ ಜಯಂತೋತ್ಸವ

ಚಾಮರಾಜನಗರದ ವರನಟ ಡಾ. ರಾಜ್ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ವತಿಯಿಂದ ಆಯೋಜಿಸಲಾಗಿದ್ದ ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತೋತ್ಸವವನ್ನು ಮಾಜಿ ಉಪಮುಖ್ಯಮಂತ್ರಿ ಹಾಗೂ ಮಲ್ಲೇಶ್ವರಂ ಶಾಸಕ ಡಾ. ಸಿ.ಎನ್. ಅಶ್ವಥ್ ನಾರಾಯಣ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಮಾಜದ ಒಳಿತಿಗಾಗಿ ಹಾಗೂ ಮುಂದಿನ ಪೀಳಿಗೆಯನ್ನು ಮುನ್ನಡೆಸಲು ನಾಡಪ್ರಭು ಕೆಂಪೇಗೌಡರು ನೀಡಿದ ಅಪಾರ ಕೊಡುಗೆಗಳು ಇಂದಿನ ಯುವ ಪೀಳಿಗೆಗೆ ಸದಾ ಮಾದರಿಯಾಗಿವೆ ಎಂದು ಬಣ್ಣಿಸಿದರು.

**ದೂರದೃಷ್ಟಿಯ ನಾಯಕ ಮತ್ತು ಬೆಂಗಳೂರಿನ ನಿರ್ಮಾಣ**

16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಪಾಳೇಗಾರರಾಗಿದ್ದ ಕೆಂಪೇಗೌಡರು ಯಲಹಂಕವನ್ನು ಆಳುತ್ತಿದ್ದರು. 1537ರಲ್ಲಿ ಬೆಂಗಳೂರು ಕೋಟೆ ಮತ್ತು ನಗರಕ್ಕೆ ಭದ್ರ ಬುನಾದಿ ಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ. ನೀರಾವರಿ ಹಾಗೂ ಕುಡಿಯುವ ನೀರಿನ ಅನುಕೂಲಕ್ಕಾಗಿ ಸುಮಾರು 1,000 ಕೆರೆಗಳನ್ನು ನಿರ್ಮಿಸಿ, ಮಳೆ ನೀರು ಸಂಗ್ರಹಿಸಲು ರಾಜಕಾಲುವೆಗಳ ಮೂಲಕ ಅವುಗಳನ್ನು ಜೋಡಿಸುವ ದೂರದೃಷ್ಟಿಯ ಯೋಜನೆಯನ್ನು ಅಂದೇ ಅನುಷ್ಠಾನಗೊಳಿಸಿದ್ದರು. ಅವರ ಈ ದೀರ್ಘಕಾಲಿಕ ದೃಷ್ಟಿಯ ಫಲವಾಗಿಯೇ ಇಂದು ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಅವರು ಸ್ಮರಿಸಿದರು. ಇದೇ ವೇಳೆ, ವರನಟ ಡಾ. ರಾಜ್ಕುಮಾರ್ ಅವರು ಚಾಮರಾಜನಗರದಲ್ಲಿ ಜನಿಸಿ ಮಲ್ಲೇಶ್ವರಂನಲ್ಲಿ ನೆಲೆಸಿದ್ದನ್ನು ನೆನಪಿಸಿಕೊಂಡ ಶಾಸಕರು, ಜಿಲ್ಲೆಯ ಅಭಿವೃದ್ಧಿಗೆ ತಾವು ಸದಾ ಕೈಜೋಡಿಸುವುದಾಗಿ ಭರವಸೆ ನೀಡಿದರು.

ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಮಾಜಿ ಶಾಸಕರುಗಳಾದ ಎನ್. ಮಹೇಶ್, ಎಸ್. ಬಾಲರಾಜು, ಜಿಲ್ಲಾ ಬಿಜೆಪಿಯ ಮಾಜಿ ಅಧ್ಯಕ್ಷ ನಾರಾಯಣ ಪ್ರಸಾದ್, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ, ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರಯ್ಯ, ಖಜಾಂಚಿ ಕೆ.ವಿ. ಶ್ರೀಧರ್, ಉದ್ಯಮಿ ಸಿ. ರಾಜುಗೌಡ, ಕೊಳ್ಳೇಗಾಲ ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ದತ್ತೇಶ್ ಕುಮಾರ್, ಕನ್ನಡ ಮಹಾಸಭಾ ಗೌರವಾಧ್ಯಕ್ಷ ಶಾ. ಮುರಳಿ, ಪ್ರಧಾನ ಕಾರ್ಯದರ್ಶಿ ಚಾ.ವೆಂ. ರಾಜ್ಗೋಪಾಲ್, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು ಉಪಸ್ಥಿತರಿದ್ದರು. ಅಲ್ಲದೆ, ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ. ಪುಟ್ಟಸ್ವಾಮಿಗೌಡ, ಉಪಾಧ್ಯಕ್ಷ ಚಿನ್ನಮುತ್ತು, ಆಲತ್ತೂರು ಜಯರಾಮು, ಉದ್ಯಮಿ ಶ್ರೀನಿಧಿಕುದರ್, ನಿಜಧ್ವನಿ ಗೋವಿಂದರಾಜು, ಮಹೇಶ್ ಗೌಡ, ಹೊಮ್ಮ ಲೋಕೇಶ್, ಅರುಣ್ಕುಮಾರ್ ಗೌಡ, ಮಹೇಶ್, ಮಂಗಲದ ಹೊಸೂರು ಶಿವಣ್ಣ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.



### ವೃತ್ತಿ ಆಧಾರಿತ ಪೇಟೆಗಳ ನಿರ್ಮಾಣ ಹಾಗೂ ಮಹಾಸಭಾದ ಕಾರ್ಯಗಳು

ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ತಮ್ಮ ಸಂಘಟನೆಯು ನಾಡು, ನುಡಿ, ಜಲ ವಿಚಾರವಾಗಿ ನಿರಂತರ ಹೋರಾಟ ನಡೆಸುವುದರ ಜೊತೆಗೆ ಮಹನೀಯರ ಜಯಂತಿ ಆಚರಣೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಗಳನ್ನು ಹಮ್ಮಿಕೊಂಡು ಬರುತ್ತಿದೆ ಎಂದರು. ದಕ್ಷ ಆಡಳಿತಗಾರರಾಗಿದ್ದ ಕೆಂಪೇಗೌಡರು ಅಂದೇ ಭವಿಷ್ಯದ ಆಡಳಿತದ ರೂಪುರೇಷೆಗಳನ್ನು ಅರಿತು, ನಗರದ ನಾಲ್ಕು ದಿಕ್ಕುಗಳಲ್ಲಿ ಗೋಪುರಗಳನ್ನು ನಿರ್ಮಿಸಿದ್ದರು. ಜೊತೆಗೆ ವೃತ್ತಿ ಆಧಾರಿತವಾಗಿ ನಗರತ್ಪೇಟೆ, ಚಿಕ್ಕಪೇಟೆ, ಬಳೆಪೇಟೆಯಂತಹ ಅನೇಕ ಮಾರುಕಟ್ಟೆಗಳನ್ನು ನಿರ್ಮಿಸಿದ್ದು ನಮ್ಮೆಲ್ಲರಿಗೂ ಉತ್ತಮ ಮಾದರಿಯಾಗಿದೆ ಎಂದು ವಿವರಿಸಿದರು.

### ಸಾಧಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಹಾಗೂ ಎಸ್‌ಎಸ್‌ಎಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

# 10.775ಪ್ರಕರಣಗಳ ಇತ್ಯರ್ಥ



ಮೈಸೂರು: ನಗರ ಮತ್ತು ತಾಲ್ಲೂಕುಗಳಲ್ಲಿನ ನ್ಯಾಯಾಲಯಗಳಲ್ಲಿ ಒಟ್ಟು 1,35,890 ಪ್ರಕರಣಗಳು ವಿಚಾರಣೆಗೆ ಬಾಕಿಯಿದ್ದು, ಅವುಗಳ ಪೈಕಿ 61,336 ಸಿವಿಲ್ ಪ್ರಕರಣಗಳು ಹಾಗೂ 74,554 ಕ್ರಿಮಿನಲ್ ಪ್ರಕರಣಗಳಿದ್ದು, ಪ್ರಸ್ತುತ ಸದರಿ ಪ್ರಕರಣಗಳಲ್ಲಿ 30,055 ಪ್ರಕರಣಗಳನ್ನು ರಾಜಿಯಾಗಬಹುದಾದ ಪ್ರಕರಣಗಳಿದ್ದು, ಅವುಗಳ ಪೈಕಿ 15,606 ರಾಜಿ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ರಾಜಿ ಸಂಧಾನಕ್ಕಾಗಿ ತೆಗೆದುಕೊಂಡ ಪ್ರಕರಣಗಳಲ್ಲಿ (ನ್ಯಾಯಾಲಯದಲ್ಲಿ ಬಾಕಿ ಇರುವ) 10,775 ಪ್ರಕರಣಗಳನ್ನು ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ.

ನವದೆಹಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಬೆಂಗಳೂರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದಂತೆ ಮೈಸೂರು ಜಿಲ್ಲೆಯನ್ನೊಳಗೊಂಡಂತೆ ರಾಜ್ಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ರಾಜಿಯಾಗಬಹುದಾದ ಪ್ರಕರಣಗಳನ್ನು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಲೋಕ್ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿತ್ತು

ಈ ಹಿನ್ನೆಲೆಯಲ್ಲಿ ನಡೆದ ಲೋಕ್ ಅದಾಲತ್‌ನಲ್ಲಿ ವಿಶೇಷವಾಗಿ ಟ್ರಾಫಿಕ್ ದಂಡಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಜಿಲ್ಲೆಯಾದ್ಯಂತ ಒಟ್ಟು 2,75,853 ಪ್ರಕರಣಗಳು ವಿಲೇವಾರಿಯಾಗಿದ್ದು, ಸದರಿ ಪ್ರಕರಣಗಳಲ್ಲಿ ಒಟ್ಟಾರೆಯಾಗಿ ಮೊತ್ತ 6,89,97,350ರೂ.ಗಳು ಸ್ವೀಕೃತವಾಗಿರುತ್ತದೆ. ಅಲ್ಲದೆ ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ ಮೈಸೂರು ನಗರ ಹಾಗೂ ಮೈಸೂರು ತಾಲ್ಲೂಕು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 38 ದಂಪತಿಗಳು ತಮ್ಮ ಮಧ್ಯದ ವ್ಯಾಜ್ಯಗಳನ್ನು ಬಗೆಹರಿಸಿಕೊಂಡು ವಿವಿಧ ಪ್ರಕರಣಗಳಲ್ಲಿ ಜಿಲ್ಲೆಯಾದ್ಯಂತ ಒಟ್ಟು 2,75,853 ಪ್ರಕರಣಗಳು ವಿಲೇವಾರಿಯಾಗಿದ್ದು, ಸದರಿ ಪ್ರಕರಣಗಳಲ್ಲಿ ಒಟ್ಟಾರೆಯಾಗಿ ಮೊತ್ತ 6,89,97,350ರೂ. ಗಳು ಸ್ವೀಕೃತವಾಗಿರುತ್ತದೆ.

> **ಒಂದಾದ 38ಜೋಡಿ**
> ಲೋಕ ಅದಾಲತ್ ನಲ್ಲಿ ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ ಮೈಸೂರು ನಗರ ಹಾಗೂ ಮೈಸೂರು ತಾಲ್ಲೂಕು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 38 ದಂಪತಿಗಳು ತಮ್ಮ ಮಧ್ಯದ ವ್ಯಾಜ್ಯಗಳನ್ನು ಬಗೆಹರಿಸಿಕೊಂಡು ಒಂದಾದರು.
> –ನ್ಯಾಯಾಧೀಶೆ ಉಷಾರಾಣಿ

ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಒಟ್ಟಾರೆಯಾಗಿ 10,775 ನ್ಯಾಯಾಲಯದಲ್ಲಿ ಬಾಕಿಯಿದ್ದ ಪ್ರಕರಣಗಳು ತೀರ್ಮಾನವಾಗಿರುತ್ತದೆ. ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜಿ ಸಂಧಾನ ಮೂಲಕ ಒಟ್ಟು 84,39,27,106ರೂ.ಗಳು ಇತ್ಯರ್ಥವಾಗಿರುತ್ತದೆ. ಈ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಕೃತಜ್ಞತೆಯನ್ನು ಸಲ್ಲಿಸಿದರು. ಸುದ್ದಿಗೋಷ್ಠಿಯಲ್ಲಿ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಇನ್ನಿತರರು ಇದ್ದರು.

# ಪೋಕ್ಸೋ-ರಸ್ತೆ ಸುರಕ್ಷತೆ ಅರಿವು




**ಹಾಸನ:** ನಗರದ ಸ್ಕಾಲಸ ಇಂಟರ್ನ್ಯಾಷನಲ್ ಶಾಲೆಯಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ 'ಪೋಕ್ಸೋ ಕಾಯ್ದೆ ಹಾಗೂ ರಸ್ತೆ ಸುರಕ್ಷತೆ' ಕುರಿತ ವಿಶೇಷ ಅರಿವು ಕಾರ್ಯಕ್ರಮ ಹಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ವಕೀಲೆ ಬಿಂದೇಶ್ವರಿ ಹಾಗೂ ಸಖಿ ಒನ್ ಸ್ಟಾಪ್ ಸೆಂಟರ್‌ನ ಆಡಳಿತಾಧಿಕಾರಿ ಸುನಿತಾ ಮಾತನಾಡಿ, ವಿದ್ಯಾರ್ಥಿಗಳು ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ನಡುವಿನ ವ್ಯತ್ಯಾಸ ಅರಿಯಬೇಕು. ಯಾವುದೇ ಅನುಚಿತ ವರ್ತನೆ ಕಂಡುಬಂದರೆ ತಕ್ಷಣವೇ ಪೋಷಕರು ಅಥವಾ ಶಿಕ್ಷಕರ ಗಮನಕ್ಕೆ ತರಬೇಕು ಎಂದರು.

ರಸ್ತೆಯಲ್ಲಿ ಒಂಟಿಯಾಗಿ ಓಡಾಡದಿರುವುದು, ಅಪರಿಚಿತರ ಆಮಿಷಗಳಿಗೆ ಬಲಿಯಾಗದಿರುವುದು ಹಾಗೂ ಎಷ್ಟೇ ಪರಿಚಿತರಾಗಿದ್ದರೂ ಪೋಷಕರ ಅನುಮತಿ ಇಲ್ಲದೆ ಅವರೊಂದಿಗೆ ಹೋಗದಿರುವ ಬಗ್ಗೆ ಎಚ್ಚರಿಕೆ ನೀಡಿದರು.

ಸಾಮಾಜಿಕ ಜಾಲತಾಣಗಳಿಂದ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚಿವೆ. ಅಂತರ್ಜಾಲವನ್ನು ಹಿತಮಿತವಾಗಿ ಬಳಸಬೇಕು. ಮಕ್ಕಳು ಬೇರೆಯವರಿಂದ ಯಾವುದೇ ರೀತಿಯ ತೊಂದರೆ ಅನುಭವಿಸಿದರೆ ತಕ್ಷಣವೇ ಅಕ್ಕ ಪಡೆ, ಸಖಿ ಒನ್ ಸ್ಟಾಪ್ ಸೆಂಟರ್ ಅಥವಾ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ನೆರವು ಪಡೆಯಬಹುದು ಎಂದರು.

ಶಾಲೆಯ ಆಡಳಿತಾಧಿಕಾರಿ ಡಾ.ಎಚ್.ಎನ್. ಚಂದ್ರಶೇಖರ್ ಮಾತನಾಡಿ, ವಿದ್ಯಾರ್ಥಿಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ವಯಂ ರಕ್ಷಣೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಪ್ರಸ್ತುತಕ್ಕೆ ಅಗತ್ಯ ಎಂದರು.

ಶಾಲೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್, ಮುಖ್ಯ ಶಿಕ್ಷಕಿ ಸಂಧ್ಯಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಶ್ರೀ ಲಕ್ಷ್ಮಿ ಹಾಜರಿದ್ದರು.

# ಡಿವೈಡರ್‌ಗೆ ಲಾರಿ ಡಿಕ್ಕಿ

ಗುಂಡ್ಲುಪೇಟೆ: ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಸರಕು ಸಾಗಣೆ ಲಾರಿಯೊಂದು ನಿರ್ಮಾಣ ಹಂತದಲ್ಲಿದ್ದ ಡಿವೈಡರ್‌ಗೆ ಡಿಕ್ಕಿ ಹೊಡೆದು ಮುಂಭಾಗ ಸಂಪೂರ್ಣ ಜಖಂಗೊಂಡಿರುವ ಘಟನೆ ತಾಲೂಕಿನ ಅರೇಪುರ ಗೇಟ್ ಸಮೀಪ ರಾಷ್ಟ್ರೀಯ ಹೆದ್ದಾರಿ-766ರಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಮೈಸೂರು ಮಾರ್ಗದಿಂದ ಗುಂಡ್ಲುಪೇಟೆ ಕಡೆಗೆ ತೆರಳುತ್ತಿದ್ದ ಲಾರಿ ಅರೇಪುರ ಗೇಟ್ ಸಮೀಪದ ಕೆಇಬಿ ಪವರ್ ಸ್ಟೇಷನ್ ಬಳಿ ಚಾಲಕನ ನಿಯಂತ್ರಣ ತಪ್ಪಿ ನಿರ್ಮಾಣ ಹಂತದಲ್ಲಿದ್ದ ಡಿವೈಡರ್‌ಗೆ ಗುದ್ದಿದೆ. ಡಿಕ್ಕಿಯ ರಭಸಕ್ಕೆ ಲಾರಿಯ ಮುಂಭಾಗ ಹಾಗೂ ಡೀಸೆಲ್ ಟ್ಯಾಂಕ್ ಸಂಪೂರ್ಣ ಹಾನಿಗೊಳಗಾಗಿದ್ದು, ವಾಹನಕ್ಕೆ ಭಾರೀ ನಷ್ಟ ಸಂಭವಿಸಿದೆ. ಅದೃಷ್ಟವಶಾತ್, ಲಾರಿ ಚಾಲಕ ಯಾವುದೇ ಗಂಭೀರ ಗಾಯಗಳಿಲ್ಲದೆ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಬೇಗೂರು ಪೊಲೀಸ್ ಠಾಣೆಯ ಸಿಬ್ಬಂದಿ ವಾಹನವನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.



**ಬೆಂಗಳೂರು ಪುಳಿಯೋಗರೆ ವತಿಯಿಂದ**

# ಶಾಲೆಯ ಮಕ್ಕಳಿಗೆ ಉಚಿತ ಬ್ಯಾಗ್ ವಿತರಣೆ

ಚಾಮರಾಜನಗರ, ಬೆಂಗಳೂರು ಪುಳಿಯೋಗರೆ ವತಿಯಿಂದ ತಾಲೂಕಿನ ಸಿದ್ದಯ್ಯನಪುರ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ವಿತರಿಸಲಾಯಿತು.

ಶಾಲೆಯ ಅಕ್ಷರದವ್ವ ಸಾವಿತ್ರಿಬಾಯಿಪುಲೆ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆದ ಎಲ್ ಕೆಜಿ, ಯುಕೆಜಿ ತರಗತಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಬೆಂಗಳೂರು ಪುಳಿಯೋಗರೆಯ ಮಾಲೀಕರಾದ ಮಹಾದೇವಸ್ವಾಮಿ, ಸಹೋದರ ನಾಗರಾಜು ವಿದ್ಯಾರ್ಥಿಗಳಿಗೆ ಉಚಿತ ಶಾಲಾ ಬ್ಯಾಗ್ ವಿತರಿಸಿದರು. ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಿಸಿದ ಬೆಂಗಳೂರು ಪುಳಿಯೋಗರೆಯ ಮಾಲೀಕ ನಾಗರಾಜು ಮಾತನಾಡಿ, ಸಂಪಾದಿಸಿ ಹಣದಲ್ಲಿ ಶೇ 10 ರಷ್ಟನ್ನು ದಾನ ಮಾಡುವಂತೆ ನಮ್ಮ ತಂದೆ, ತಾಯಿಯವರು ಹೇಳಿಕೊಟ್ಟಿದ್ದರು. ಅದರಂತೆ ತಾವು ಸಂಪಾದಿಸಿದ ಹಣದಲ್ಲಿ ದಾನ ಮಾಡುವ ಕೆಲಸ ಮಾಡಲಾಗಿದ್ದು, ಮುಂದಿನ ವರ್ಷದಿಂದ 1 ಸಾವಿರ ವಿದ್ಯಾರ್ಥಿಗಳಿಗೆ ದಾನ ಮಾಡಲು ನಿರ್ಧರಿಸಲಾಗಿದೆ ಎಂದರು.

ಚಾಮರಾಜನಗರ ಬೆಂಗಳೂರು ಪುಳಿಯೋಗರೆಯ ಮಾಲೀಕ ಮಹಾದೇವಸ್ವಾಮಿ ಮಾತನಾಡಿ, ಬೆಂಗಳೂರು ಪುಳಿಯೋಗರೆ ವತಿಯಿಂದ ಈಗಾಗಲೇ ಶಾಲಾಮಕ್ಕಳಿಗೆ ಉಚಿತ ಶಾಲಾಬ್ಯಾಗ್, ನೋಟ್ ಪುಸ್ತಕ ವಿತರಣೆ, ವೃದ್ಧಾಶ್ರಮ, ಅನಾಥಾಶ್ರಮಗಳಿಗೆ ದಾನ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಟ್ರಸ್ಟ್ ಸ್ಥಾಪನೆ ಮಾಡಿ ದೊಡ್ಡಮಟ್ಟದಲ್ಲಿ ಸಮಾಜಸೇವೆ ಮಾಡಲಾಗುವುದು ಎಂದರು. ಕಾರ್ಯಕ್ರಮ ಉದ್ಘಾಟಿಸಿ ಸಿಆರ್ ಪಿ ಮಂಟೇನಾಯಕ ಮಾತನಾಡಿ, ಸರ್ಕಾರ ಶಾಲೆಗಳಲ್ಲಿ ಪ್ರವೇಶ ಸಂಖ್ಯೆ ಗಣನೀಯವಾಗಿ ಇಳಿಕೆಮುಖವಾಗಿದ್ದು, ಶಾಲೆಯಲ್ಲಿ ಮಕ್ಕಳು ಪ್ರವೇಶಾತಿ ಪಡೆಯದೆ ಎಲ್ಲರೂ ಖಾಸಗಿ ಶಾಲೆಗಳತ್ತ ಮುಖ ಮಾಡಿದರು. ಇದನ್ನು ಸರ್ಕಾರ ಮನಗಂಡು ಸರ್ಕಾರಿ ಶಾಲೆಗಳಲ್ಲಿ ಎಲ್ ಕೆಜಿ, ಯುಕೆಜಿ ತರಗತಿ ಆರಂಭಿಸಿದ ಮೇಲೆ ಈ ಶಾಲೆಯಲ್ಲಿ 35 ಮಕ್ಕಳು ಪ್ರವೇಶ ಪಡೆದಿದ್ದಾರೆ. ಇದು ಒಳ್ಳೆಯ ಬೆಳವಣಿಯಾಗಿದ್ದು, ಮುಂದಿನ ದಿನಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಲಿದೆ ಎಂದರು.

**ಸನ್ಮಾನ:** ಇದೇ ವೇಳೆ ಬೆಂಗಳೂರು ಪುಳಿಯೋಗರೆಯ ಮಾಲೀಕರಾದ ಮಹಾದೇವಸ್ವಾಮಿ, ಸಹೋದರ ನಾಗರಾಜು ಅವರನ್ನು ಶಾಲೆ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷೆ ಲತಾ, ಸದಸ್ಯರು, ಗ್ರಾ.ಪಂ. ಮಾಜಿ ಸದಸ್ಯ ಬಸವಣ್ಣ, ಟಿವಿಎಸ್ ಕಂಪನಿಯ ಸೇಂದಿಲ್, ಶಾಲಾ ಮುಖ್ಯ ಶಿಕ್ಷಕ ಪಿ.ಪುಟ್ಟರಾಜು, ಶಿಕ್ಷಕರಾದ ನಾರಾಯಣ, ಗುರುಸಿದ್ದಯ್ಯ, ನಂಜುಂಡಯ್ಯ, ಭವಾನಿ,ನಂದಿನಿ, ಪುಷ್ಪಾ, ಶಾಲಾ ಮಕ್ಕಳು, ಪೋಷಕರು ಹಾಜರಿದ್ದರು.



## ಸಮಾಜದಲ್ಲಿ ಶಾಂತಿ-ಸೌಹಾರ್ದತೆ ಪ್ರತೀಕ ದರ್ಗಾ

# ನಗರಸಭೆಯಿಂದ 10 ಲಕ್ಷ ಚೆಕ್ ವಿತರಿಸಿದ ಕೆ.ಶೇಷಾದ್ರಿ



**ರಾಮನಗರ:** ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಭಾವೈಕ್ಯತೆಯನ್ನು ಬೆಳೆಸುವ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿರುವ ಪಿಎಸ್‌ವಿ ದರ್ಗಾದ ಜೀರ್ಣೋದ್ಧಾರ ಕಾಮಗಾರಿಗಾಗಿ ರಾಮನಗರ ನಗರಸಭೆ ವತಿಯಿಂದ ರೂ.10 ಲಕ್ಷ ಅನುದಾನದ ಚೆಕ್‌ನ್ನು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ (ಶಶಿ) ಶುಕ್ರವಾರ ದರ್ಗಾ ಸಮಿತಿಗೆ ಹಸ್ತಾಂತರಿಸಿದರು.

ನಗರದ ಅರ್ಕಾವತಿ ನದಿ ತೀರದ ರೈಲ್ವೆ ನಿಲ್ದಾಣ ಮುಖ್ಯರಸ್ತೆಯಲ್ಲಿರುವ ಸುಮಾರು 260 ವರ್ಷಗಳ ಇತಿಹಾಸ ಹೊಂದಿರುವ ಪಿಎಸ್‌ವಿ ದರ್ಗಾ ಎಲ್ಲ ಧರ್ಮಗಳ ಭಕ್ತರನ್ನು ಒಗ್ಗೂಡಿಸುವ ಪವಿತ್ರ ಕೇಂದ್ರವಾಗಿದೆ. 'ಬಾಬಯ್ಯನ ದರ್ಗಾ' ಎಂದೇ ಪ್ರಸಿದ್ಧಿ ಪಡೆದಿರುವ ಈ ದರ್ಗಾಕ್ಕೆ ಹಿಂದೂ ಸೇರಿದಂತೆ ವಿವಿಧ ಧರ್ಮಗಳ ಭಕ್ತರು ಆಗಮಿಸಿ ಆಶೀರ್ವಾದ ಪಡೆಯುವ ಸಂಪ್ರದಾಯವಿದೆ ಎಂದು ಅಧ್ಯಕ್ಷರು ಹೇಳಿದರು.

ನಗರಸಭೆಯ ಅನುದಾನವು ಕೇವಲ ಕಟ್ಟಡ ಅಭಿವೃದ್ಧಿಗೆ ಮಾತ್ರವಲ್ಲ, ಧಾರ್ಮಿಕ ಸಾಮರಸ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ನೀಡಲಾಗಿದೆ. ಇದೇ ರೀತಿಯಲ್ಲಿ ಕೆಲ ದಿನಗಳ ಹಿಂದೆಯಷ್ಟೇ ನಗರದೇವತೆ ಮಂಡಿಪೇಟೆಯ ಬನ್ನಿಮಹಾಂಕಾಳಿ ಅಮ್ಮನ ದೇವಾಲಯದ ಜೀರ್ಣೋದ್ಧಾರಕ್ಕೂ ರೂ.10 ಲಕ್ಷ ಅನುದಾನ ನೀಡಲಾಗಿದೆ ಎಂದು ಅವರು ತಿಳಿಸಿದರು.

ದರ್ಗಾ ಸಮಿತಿಯವರು ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕಟ್ಟಡ ನಿರ್ಮಾಣ ಹಾಗೂ ಭಕ್ತರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಬೇಕು ಎಂದು ಅವರು ಸಲಹೆ ನೀಡಿದರು.

ನಗರಸಭೆ ಸದಸ್ಯ ನಿಜಾಂ ಶರೀಫ್ ಮಾತನಾಡಿ, ಹಳೆಯದಾಗಿರುವ ದರ್ಗಾ ಕಟ್ಟಡವನ್ನು ಆಧುನಿಕ ವಿನ್ಯಾಸದಲ್ಲಿ, ವಿಶಾಲ ಪ್ರಾರ್ಥನಾ ಸಭಾಂಗಣ ಸೇರಿದಂತೆ ನವೀಕರಿಸಲಾಗುತ್ತಿದೆ. ಪ್ರತಿವರ್ಷ ನಡೆಯುವ ಉರುಸ್‌ಗೆ ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ನಗರಸಭೆ ನೀಡಿರುವ ರೂ.10 ಲಕ್ಷ ಅನುದಾನವನ್ನು ಪಾರದರ್ಶಕವಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ದರ್ಗಾ ಸಮಿತಿ ಅಧ್ಯಕ್ಷ ಅಸ್ಮತ್ ಉಲ್ಲಾಖಾನ್, ಕಾರ್ಯದರ್ಶಿ ಸೈಯದ್ ಲಿಯಾಕತ್, ಉಪಾಧ್ಯಕ್ಷ ಮುಸ್ತಾಕ್ ಅಹಮ್ಮದ್, ನಗರಸಭೆ ಆಯುಕ್ತ ಡಾ.ಜಯಣ್ಣ, ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ ಹಾಗೂ ನಗರಸಭೆ ಸದಸ್ಯರು ಸೇರಿದಂತೆ ದರ್ಗಾ ಸಮಿತಿಯ ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಪಶು ಸಕಿಯರಿಗೆ ನಡೆದ ತರಬೇತಿ ಕಾರ್ಯಗಾರ




**ಪಿರಿಯಾಪಟ್ಟಣ:** ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರದ ಜೊತೆ ಸಂಘ ಸಂಸ್ಥೆಗಳ ಪಾತ್ರ ಸಹ ಪ್ರಮುಖವಾಗಿದೆ ಎಂದು ಪಿರಿಯಾಪಟ್ಟಣ ತಾಲೂಕು ಪಂಚಾಯತಿ ಸಹಾಯಕ ನಿರ್ದೇಶಕಿ ವಸಂತ ಲಕ್ಷ್ಮಿ ಅಭಿಪ್ರಾಯಪಟ್ಟರು. ಸುದ್ದಿಪೋರ್ಟಲ್

ಪಿರಿಯಾಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಐಟಿಸಿ ಮೈಕ್ಯಾಪ್ಸ್ ಸಂಸ್ಥೆ ವತಿಯಿಂದ ತಾಲೂಕು ಪಂಚಾಯತಿ ಹಾಗೂ ಪಶು ವೈದ್ಯಕೀಯ ಇಲಾಖೆ ಸಹಯೋಗದೊಂದಿಗೆ ಪಶು ಸಕಿಯರಿಗೆ ನಡೆದ ತರಬೇತಿ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು, ನಗರ ಪ್ರದೇಶಗಳಿಗೆ ಹೋಲಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶಗಳು ಕಡಿಮೆಯಿದೆ ಆದ ಕಾರಣ ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರದ ಜೊತೆ ಸಂಘ ಸಂಸ್ಥೆಗಳು ನೀಡುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗುವ ಮೂಲಕ ಸಮಾಜದ ಮುಖ್ಯ ವಾಹಿನಿಯಲ್ಲಿ ಗುರುತಿಸುವಂತಾಗಬೇಕು ಎಂದರು.

ಮೈರಾಡ ಕಾವೇರಿ ಪ್ರಾದೇಶಿಕ ಸಂಸ್ಥೆ ಮೈಸೂರಿನ ಕಾರ್ಯ ನಿರ್ವಾಹಕ ನಿರ್ದೇಶಕರಾದ ಅಶ್ರಫುಲ್ ಹಸನ್ ಅವರು ಮಾತನಾಡಿ ಪಶುಸಕಿಯರನ್ನು ಆರ್ಥಿಕವಾಗಿ ಸಬಲೀಕರಣ ಮಾಡುವ ಉದ್ದೇಶದಿಂದ ಐಟಿಸಿ ಮೈಕ್ಯಾಪ್ಸ್ ಸಂಸ್ಥೆ ವತಿಯಿಂದ ತರಬೇತಿ ಹಮ್ಮಿಕೊಂಡಿದ್ದು ಮುಂಬರುವ ದಿನಗಳಲ್ಲಿ ಸರ್ಕಾರ ಹಾಗೂ ಇಲಾಖೆ ಸಹಯೋಗದೊಂದಿಗೆ ಸಂಸ್ಥೆ ವತಿಯಿಂದ ನೂತನ ಯೋಜನೆಗಳನ್ನು ಜಾರಿಗೊಳಿಸಲಾಗುವುದು ಎಂದರು.

ಪಶು ವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕರಾದ ಡಾ.ಸೋಮಯ್ಯ ಅವರು ಮಾತನಾಡಿ ಸರ್ಕಾರದಿಂದ ಇಲಾಖೆ ಮುಖಾಂತರ ದೊರೆಯುವ ಸವಲತ್ತುಗಳ ಮಾಹಿತಿ ಹಾಗೂ ಜಾನುವಾರುಗಳ ಉತ್ತಮ ಆರೋಗ್ಯ ರಕ್ಷಣೆಗಾಗಿ ನೀಡುವ ಲಸಿಕೆ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಪಶುಸಕಿಯರ ಪಾತ್ರ ಅಪಾರವಾಗಿದೆ ಎಂದರು.

ಮೈಕ್ಯಾಪ್ಸ್ ಯೋಜನಾ ಸಮನ್ವಾಯಧಿಕಾರಿ ಎಸ್.ರಾಜಪ್ಪ ಅವರು ಸಂಸ್ಥೆಯ ಕಾರ್ಯ ಚಟುವಟಿಕೆ ಹಾಗೂ ದೊರೆಯುವ ಸವಲತ್ತುಗಳ ಬಗ್ಗೆ ಹಾಗೂ ಎನ್‌ಆರ್ ಎಲ್‌ಎಂ ತಾಲೂಕು ಕಾರ್ಯಕ್ರಮಾಧಿಕಾರಿ ರೋಸಿ ಅವರು ಪ್ರಸ್ತಾವಿಕವಾಗಿ ಮಾತನಾಡಿದರು, ಈ ಸಂದರ್ಭ ತಾಲೂಕು ಪಂಚಾಯತಿ ಲೆಕ್ಕಾಧಿಕಾರಿ ರಂಗನಾಥ್ ಮೈಕ್ಯಾಪ್ಸ್ ಕೃಷಿ ಅಧಿಕಾರಿ ಅರ್ಚನ, ಸಿಬ್ಬಂದಿ ಕೃಷ್ಣಚಾರಿ, ಚಂದ್ರಪ್ಪ, ಕಾರ್ತಿಕ್, ಸಂಜಯ್, ಸತೀಶ್ ಆರಾಧ್ಯ ಇದ್ದರು.

# ಶಾಲೆಯಲ್ಲಿ ವಿದ್ಯಾರ್ಥಿಗಳೇ ದೈವ ಸ್ವರೂಪಿಯ ದರ್ಶನ




**ನಾಗಮಂಗಲ:** ಒಂದು ಶಾಲೆಯ ನಿರ್ಮಾಣ ಮಾಡುವ ಮುಖಾಂತರ ನೂರಾರು ದೇವಾಲಯಗಳು ಕಟ್ಟಿಸಿದಷ್ಟೇ ಪುಣ್ಯದ ಕೆಲಸವೆಂದು ಬೆಂಗಳೂರು ಉಪತಹಸಿಲ್ದಾರ್ ಯೋಗಾನಂದ ಮೂರ್ತಿ ಯವರು ತಿಳಿಸಿದರು.

ಅವರು ನಾಗಮಂಗಲ ತಾಲೂಕು ದೇವಲಾಪುರ ಹೋಬಳಿ ಸಮೀಪವಿರುವ ಹರದನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಹಳೆಯ ಕಟ್ಟಡಗಳನ್ನ ದಾನಿಗಳ ಸಹಾಯದಿಂದ ಜೀರ್ಣೋದ್ಧಾರ ಮಾಡಿ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಒಂದು ಶಾಲೆಯ ನಿರ್ಮಾಣ ಮಾಡುವ ಮುಖಾಂತರ ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ನೂರಾರು ದೇವರುಗಳು ನೂರಾರು ದೇವಾಲಯಗಳ ನಿರ್ಮಾಣ ಮಾಡಿದಷ್ಟೇ ಪುಣ್ಯದ ಕೆಲಸ ಸಾರ್ಥಕ ವಾಗುತ್ತದೆ.

ಜೀವನದ ಸಾರ್ಥಕ ಬದುಕಿನಲ್ಲಿ ಸಮುದಾಯದ ಸಮಾಜದಲ್ಲಿ ಎಲ್ಲರನ್ನೂ ಮೆಚ್ಚಿಸುವ ಕೆಲಸ ವಾಗದೆ ಇದ್ದರೂ ನಮ್ಮಗಳ ಮನಸ್ಸಿಗೆ ನೆಮ್ಮದಿ ತರುವ ಕರ್ತವ್ಯ ಮಾಡಿದರೆ ಸಮಾಜ ಸಮುದಾಯ ಅಭಿವೃದ್ಧಿಯಾಗಲು ಸಾಧ್ಯನೆಂದು ಮಾತನಾಡಿದರು.

ಗ್ರಾಮೀಣ ಭಾಗಗಳಲ್ಲಿ ಸರ್ಕಾರಿ ಶಾಲೆಗಳ ಬೆಳವಣಿಗೆಗೆ ಆ ಭಾಗದ ವಿದ್ಯಾರ್ಥಿಗಳು ಪೋಷಕರು ಸಾರ್ವಜನಿಕರು ಸ್ವಶಕ್ತಿಯಿಂದ ಸಹಕಾರ ನೀಡುವ ಮುಖಾಂತರ ಶಿಕ್ಷಣ ರಂಗದಲ್ಲಿ ಹೊಸ ಅಧ್ಯಯನ ಮಾಡಲು ಸಾಧ್ಯ ಇಂತಹ ಸೇವದಾನಿಗಳು ಸಮಾಜಕ್ಕೆ ಮುಂದಿನ ಸೇವಾದಾನಿಗಳಿಗೂ ಮಾದರಿಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕರಾದ ಚಿಕ್ಕ ಬೋರಯ್ಯನವರು ಮಾತನಾಡಿದರು.

ಇದೇ ಸಮಾರಂಭದಲ್ಲಿ ಈ ಶಾಲೆಯಿಂದ ವರ್ಗಾವಣೆಗೊಂಡ ಶಿಕ್ಷಕರುಗಳಾದ ಶ್ರೀ ಪರಶಿವಮೂರ್ತಿ ಗಣಿತ ಶಿಕ್ಷಕರು. ಶ್ರೀಮತಿ ಶ್ರುತಿ ಟಿ ಎಂ ಆಂಗ್ಲಭಾಷಾ ಶಿಕ್ಷಕಿ. ರವರಿಗೆ ರವರುಗಳಿಗೆ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಕೆ ಎನ್ ರಮೇಶ ರವರು. ಮತ್ತು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರುಎಲ್ಲಾಸದಸ್ಯರುಗಳುಹಾಗೂ ಶಾಲಾ ಶಿಕ್ಷಕರುಗಳಾದ ರಾಜಕುಮಾರ ಮತ್ತು ಕೆ ಮಂಜುನಾಥ್ ರವರು ಶಿಕ್ಷಕರು. ಎಂ ಎಲ್, ಸುನೀತ, ಸಚಿನ್. ರವರುಗಳು ಉಪಸ್ಥಿತರಿದ್ದರು.

## ವನಮಹೋತ್ಸವದಲ್ಲಿ ಪರಿಸರ ಸಂರಕ್ಷಣೆಯ ಸಂದೇಶ

# ವಿದ್ಯಾರ್ಥಿಗಳು ಗಿಡ ನೆಟ್ಟು ಬೆಳೆಸುವ ಸಂಕಲ್ಪ ಮಾಡಲಿ: ಪ್ರಸನ್ನಕುಮಾರ್



**ರಾಮನಗರ:** ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ವಿದ್ಯಾರ್ಥಿಗಳು ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಸನ್ನಕುಮಾರ್ ಹೇಳಿದರು.

ರಾಮನಗರ ತಾಲೂಕಿನ ಪಾದರಹಳ್ಳಿ ಸರ್ಕಾರಿ ಶಾಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗದ ವತಿಯಿಂದ ಶನಿವಾರ ಆಯೋಜಿಸಿದ್ದ ವನಮಹೋತ್ಸವ2026 ಕಾರ್ಯಕ್ರಮದಲ್ಲಿ ಗಿಡ ನೆಟ್ಟು ಮಾತನಾಡಿದ ಅವರು, ಸಮಾಜ ಸೇವಕ ಸಾಲುಮರದ ತಿಮ್ಮಕ್ಕ ಅವರ ಪರಿಸರ ಪ್ರೇಮ ಎಲ್ಲರಿಗೂ ಮಾದರಿಯಾಗಿದೆ. ಅವರಂತೆ ಪ್ರತಿಯೊಬ್ಬರೂ ಪರಿಸರ ಕಾಳಜಿ ಬೆಳೆಸಿಕೊಂಡರೆ ಮುಂದಿನ ಪೀಳಿಗೆಗೆ ಹಸಿರು ಭವಿಷ್ಯ ನಿರ್ಮಾಣವಾಗಲಿದೆ ಎಂದು ಹೇಳಿದರು.

ಪರಿಸರ ಸಂರಕ್ಷಣೆ ಮಾನವ ಜೀವನದ ಅವಿಭಾಜ್ಯ ಅಂಗವಾಗಿದೆ. ಮರಗಳು ಭೂಮಿಯ ಉಸಿರಾಗಿದ್ದು, ಹವಾಮಾನ ಸಮತೋಲನ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸುವ ಕಾರ್ಯಕ್ರಮಗಳನ್ನು ಸಾಮಾಜಿಕ ಅರಣ್ಯ ಇಲಾಖೆ ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.

ರೈತರಿಗೆ ಕೃಷಿ ಅರಣ್ಯ ಉತ್ತೇಜಿಸುವ ಉದ್ದೇಶದಿಂದ ಮಹಾಗನಿ, ಸಿಲ್ವರ್ ಓಕ್, ತೇಗು, ಶ್ರೀಗಂಧ, ಬೇವು, ಹಲಸು, ಬನ್ನಿ ಸೇರಿದಂತೆ ವಿವಿಧ ಜಾತಿಯ ಗಿಡಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ ಎಂದು ಹೇಳಿದರು. ಶಾಲೆಯ ಮುಖ್ಯಶಿಕ್ಷಕ ಹೆಚ್.ಎಸ್.ಢಾಕ್ಯಾನಾಯಕ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸುವುದು ಶಿಕ್ಷಣದ ಪ್ರಮುಖ ಭಾಗವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದು ಗಿಡ ನೆಟ್ಟು ಅದನ್ನು ಬೆಳೆಸುವ ಸಂಕಲ್ಪ ಮಾಡಬೇಕು ಎಂದರು.

ಕಾರ್ಯಕ್ರಮದ ಅಂಗವಾಗಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆ ನಡೆಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೆ ವಿದ್ಯಾರ್ಥಿಗಳಿಗೆ ಮನೆ, ಜಮೀನು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನೆಡುವ ಉದ್ದೇಶದಿಂದ ವಿವಿಧ ಜಾತಿಯ ಗಿಡಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ, ಸಾಮಾಜಿಕ ಅರಣ್ಯ ಇಲಾಖೆಯ ವಲಯಾಧಿಕಾರಿ ಕಿರಣ್‌ಕುಮಾರ್, ಉಪ ವಲಯ ಅರಣ್ಯಾಧಿಕಾರಿಗಳಾದ ಬಿ.ಪಿ.ಕುಮಾರ್, ಕೃಷ್ಣ, ಅರಣ್ಯ ಸಿಬ್ಬಂದಿ ಮಾದಪ್ಪ, ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಳವಳ್ಳಿ ಟಿಎಪಿಸಿಎಂಎಸ್‌ನಲ್ಲಿ ಭ್ರಷ್ಟಾಚಾರ ಆರೋಪ ನಿರಾಧಾರ: ಅಧ್ಯಕ್ಷ ಲಿಂಗರಾಜು ಸ್ಪಷ್ಟನೆ




**ಮಂಡ್ಯ:** ಮಳವಳ್ಳಿ ಟಿಎಪಿಸಿಎಂಎಸ್‌ನಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ನಿರ್ದೇಶಕ ಚಂದಳ್ಳಿ ಶ್ರೀಧರ್ ಅವರ ಆರೋಪ ನಿರಾಧಾರವಾಗಿದೆ ಎಂದು ಅಧ್ಯಕ್ಷ ಎಂ.ಲಿಂಗರಾಜು ಖಂಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟಿಎಪಿಸಿಎಂಎಸ್‌ನ ನಡೆದಿರುವ ಭ್ರಷ್ಟಾಚಾರದಲ್ಲಿ ಶಾಸಕರ ಹಸ್ತಕ್ಷೇಪವಿದೆ ಎನ್ನುತ್ತಿದ್ದಾರೆ. ಆದರೆ ಶಾಸಕರು ಸಹಕಾರ ಸಂಘದ ಆಡಳಿತದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡಿಲ್ಲ. ಶ್ರೀಧರ್ ತಮ್ಮ ಪ್ರಚಾರದ ಗಿಮಿಕ್‌ಗಾಗಿ ಈ ರೀತಿಯ ಹೇಳಿಕೆ ನೀಡುತ್ತಿದ್ದಾರೆ ಎಂದು ಖಂಡಿಸಿದರು.

ಅಧ್ಯಕ್ಷ ಹಾಗೂ ಲೆಕ್ಕ ಪರಿಶೋಧಕರು ಒಂದೇ ಗ್ರಾಮದವರಾಗಿದ್ದು, ಸಭೆಗೆ ತಪ್ಪು ವರದಿ ನೀಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. 2025ರ ಆಗಸ್ಟ್‌ನಲ್ಲಿ ಲೆಕ್ಕ ಪರಿಶೋಧಕರ ನೇಮಕವಾಗಿದೆ. ಅಕ್ಟೋಬರ್‌ನಲ್ಲಿ ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಿದ್ದೇನೆ. ಸಭೆಯಲ್ಲಿ ಸರ್ವಾನುಮತಿಯಂದಲೇ ಅಧಿಕಾರಿಯ ನೇಮಕ ಮಾಡಲಾಗಿದೆ ಎಂದು ಸಮರ್ಥನೆ ಮಾಡಿಕೊಂಡರು.

ಸಂಘದಲ್ಲಿ ನಡೆದಿದೆ ಎನ್ನಲಾಗ ಹಗರಣಗಳ ಸಂಬಂಧ ಈ ಹಿಂದಿನ ಆಡಳಿತ ಮಂಡಳಿಯೂ ಸಹಕಾರ ನಿಯಮಗಳನ್ವಯ 64ರ ತನಿಖೆಗೆ ಒಳಪಡಿಸಿತ್ತು. ಎರಡು ತಿಂಗಳ ಹಿಂದಷ್ಟೇ ಅದರ ವರದಿ ಬಂದಿದೆ. ಈಗಿನ ಆಡಳಿತ ಮಂಡಳಿಯ ವಿರುದ್ಧ ತನಿಖೆಗೆ ಕೆಲ ನಿರ್ದೇಶಕರು ಒತ್ತಾಯಿಸಿದ್ದು, ಈಗಲೂ ತನಿಖೆ ಮಾಡಲು ಇಲಾಖೆಗೆ ತಿಳಿಸಲಾಗಿದೆ. ತಪ್ಪೆಂದು ಸಾಬೀತಾದರೆ ಅಧ್ಯಕ್ಷ ಸ್ಥಾನ ತ್ಯಜಿಸುತ್ತೇನೆ. ತಮ್ಮ ಆರೋಪ ಸಾಬೀತ ಮಾಡದಿದ್ದರೆ ಶ್ರೀಧರ್ ತಮ್ಮ ನಿರ್ದೇಶಕ ಸ್ಥಾನ ತ್ಯಜಿಸಲು ಮುಂದಾಗಲೆಂದು ಸವಾಲೆಸೆದರು. ಗೋಷ್ಠಿಯಲ್ಲಿ ಉಪಾಧ್ಯಕ್ಷೆ ಎಸ್. ಮಾಲಾಶ್ರೀ, ನಿರ್ದೇಶಕರಾದ ಕೆ.ಜೆ.ದೇವರಾಜು, ಎಂ.ಮಾದಯ್ಯ, ವಿ.ಎನ್.ಮನು, ಎನ್.ಸತೀಶ್, ದಿಲೀಪ್‌ಕುಮಾರ್ ಇದ್ದರು.

# ಬಿ.ಖಾತೆಯಿಂದ ಎ.ಖಾತೆಗೆ ಪರಿವರ್ತಿಸುವ ಆದೇಶ ಶೀಘ್ರದಲ್ಲೇ ಜಾರಿ



**ಕೆ.ಆರ್.ಪೇಟೆ:** ಬೆಂಗಳೂರು ಮಹಾನಗರಕ್ಕೆ ಸೀಮಿತವಾಗಿದ್ದ ಬಿ. ಖಾತೆಯನ್ನು ಎ ಖಾತೆಗೆ ಪರಿವರ್ತಿಸುವ ಆದೇಶವನ್ನು ರಾಜ್ಯ ಸರ್ಕಾರ ರಾಜ್ಯದಾದ್ಯಂತ ವಿಸ್ತರಿಸಿರುವುದಾಗಿ ತಿಳಿಸಿದ್ದರೂ ಈ ಕುರಿತ ಅಧಿಕೃತ ಸರ್ಕಾರಿ ಆದೇಶ ಇದುವರೆಗೂ ಹೊರ ಬಿದ್ದಿಲ್ಲ. ಇದರಿಂದ ಗ್ರಾಮೀಣ ಪ್ರದೇಶದ ಸಾವಿರಾರು ರೈತರು ತಮ್ಮ ಮನೆ ಮತ್ತು ನಿವೇಶನಗಳನ್ನು ಬಿ. ಖಾತೆಯಿಂದ ಎ ಖಾತೆಗೆ ಪರಿವರ್ತಿಸಲು ಅಡಚಣೆಯಾಗಿದೆ. City& Local Guides ಬೆಂಗಳೂರು ಮಹಾನಗರಕ್ಕೆ ಮಾತ್ರ ಸೀಮಿತವಾಗಿದ್ದ ಬಿ. ಖಾತೆಯನ್ನು ಎ ಖಾತೆಗೆ ಪರಿವರ್ತಿಸುವ ಆದೇಶವನ್ನು ರಾಜ್ಯದಾದ್ಯಂತ ವಿಸ್ತರಿಸುತ್ತಿರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದರು.

ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೂ ಕೂಡ ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿ ಬಿ.ಖಾತೆಯನ್ನು ಎ.ಖಾತೆಗೆ ಪರಿವರ್ತಿಸುವ ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದರು. ಮುಖ್ಯಮಂತ್ರಿಗಳ ಆದೇಶ ಕೆ.ಆರ್.ಪೇಟೆ ತಾಲೂಕಿನಲ್ಲಿ ಇದುವರೆಗೂ ಕಾರ್ಯರೂಪಕ್ಕೆ ಬಾರದ ಹಿನ್ನೆಲೆಯಲ್ಲಿ ತಾಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಸುಷ್ಮಾ ಅವರನ್ನು ಭೇಟಿ ಮಾಡಿದಾಗ ಈ ಕುರಿತು ಯಾವುದೇ ಸರ್ಕಾರಿ ಆದೇಶ ಇದುವರೆಗೂ ಬಾರದಿರುವುದು ಬಯಲಿಗೆ ಬಂದಿದೆ. ಈ ಕುರಿತು ರೈತ ಮುಖಂಡರ ಸಮ್ಮುಖದಲ್ಲಿಯೇ ತಾ.ಪಂ ಇ.ಓ ಸುಷ್ಮಾ ಮೇಲಧಿಕಾರಿಗಳನ್ನು ಸಂಪರ್ಕಿಸಿದಾಗ ರಾಜ್ಯ ಸರ್ಕಾರ ಈ ಕುರಿತು ಪ್ರಕಟಿಸಿದ್ದು ಜಿಲ್ಲೆಯಲ್ಲಿ ಇದನ್ನು ಶೀಘ್ರದಲ್ಲಿಯೇ ಜಾರಿಗೆ ತರುವ ಉತ್ತರ ದೊರಕಿದೆ.

# ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ ಸಾಂಸ್ಕೃತಿಕೋತ್ಸವ

**ಮಂಡ್ಯ:** ನಗರದ ಅಂಬೇಡ್ಕರ್ ಭವನದಲ್ಲಿ ವೇದಂ ಎಕ್ಸೆಲ್ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಮತ್ತು ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಎಂ.ಸಂತೋಷ್ ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಂಡ್ಯ ತಾಲ್ಲೂಕು ದಕ್ಷಿಣ ವಲಯದ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರಾದ ಶಿವಣ್ಣಮಂಗಲ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ನ ಅಧ್ಯಕ್ಷರಾದ ವಿನಯ್ ಕುಮಾರ್, ಅಂಬೇಡ್ಕರ್ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಎಂ. ಎನ್.ರವಿ ಭಾಗವಹಿಸಿದ್ದರು.

ವೇದಿಕೆಯಲ್ಲಿ ಕಾಲೇಜಿನ ಅಕಾಡೆಮಿಕ್ ಪಾರ್ಟನರ್ ಗಳಾದ ಡಾ. ಎಸ್. ಎ. ಮಹೇಶ್, ರವಿಕಿರಣ್, ಕೆ.ಅರುಣ್ ಮತ್ತಿತರರು ಇದ್ದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಶಿವಣ್ಣ ಮಂಗಲ ರವರನ್ನು ಗೌರವಿಸ ಲಾಯಿತು.

ಹಾಗೂ ಭರತನಾಟ್ಯದಲ್ಲಿ ಸಾಧನೆ ಮಾಡಿರುವ ಕಾಲೇಜು ವಿದ್ಯಾರ್ಥಿನಿ ಮಂಡ್ಯ ಯಶುರವರಿಗೆ ಅಭಿನಂದಿಸಲಾಯಿತು.




# ಅರಕೆರೆ ಶ್ರೀ ಬಸವೇಶ್ವರ ದೇವಸ್ಥಾನ ಅಭಿವೃದ್ಧಿಗೆ 25 ಲಕ್ಷ ಅನುದಾನ: ದೊಡ್ಡಸ್ವಾಮಿಗೌಡ



**ಕೆ .ಆರ್ .ನಗರ :** 750 ವರ್ಷಗಳ ಇತಿಹಾಸ ಇರುವ ಅರಕೆರೆ ಶ್ರೀ ಬಸವೇಶ್ವರ ದೇವಸ್ಥಾನ ಅಭಿವೃದ್ಧಿಗೆ 25 ಲಕ್ಷ ಅನುದಾನವನ್ನು ಶಾಸಕ ರವಿಶಂಕರ್ ನೀಡಿದ್ದಾರೆ ಎಂದು ಎಂ ಸಿ ಡಿ ಸಿ ಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ ತಿಳಿಸಿದರು.

ಅರಕೆರೆ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ಕಾಮಗಾರಿ ಪ್ರಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು ಸುಖ ಶಾಂತಿ ನೆಮ್ಮದಿಗಾಗಿ ಗ್ರಾಮಗಳಲ್ಲಿ ದೇವಸ್ಥಾನಗಳ ಅಭಿವೃದ್ಧಿ ಆಗಬೇಕು. ಅದರಲ್ಲೂ ಅರಕೆರೆ ಗ್ರಾಮದಲ್ಲಿರುವ ಈ ಬಸವೇಶ್ವರ ಶಕ್ತಿಶಾಲಿ ಭಕ್ತಿಯಿಂದ ಬೇಡಿದ ವರವನ್ನು ಕರುಣಿಸುವ ಬಸವೇಶ್ವರ ದೇವರ ಪವಾಡಗಳು ಅಪಾರ ಈಗಾಗಲೇ ನಮಗೆ ಅನುಭವ ಆಗಿದೆ.

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಸನ್ಮಾನ್ಯ ದಿವಂಗತ ಧ್ರುವ ನಾರಾಯಣ್ ಅವರ ನೇತೃತ್ವದಲ್ಲಿ ರವಿಶಂಕರ್ ಅವರು ಇದೇ ದೇವಸ್ಥಾನದಲ್ಲಿ ಮೊದಲ ಪೂಜೆ ಸಲ್ಲಿಸಿ ಜನ ಆಶೀರ್ವಾದ ಕಾರ್ಯಕ್ರಮವನ್ನು ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಪ್ರಾರಂಭಿಸಿದರು. ಬಸವೇಶ್ವರ ಆಶೀರ್ವಾದದಿಂದ ಅಧಿಕ ಮತಗಳಿಂದ ರವಿಶಂಕರ್ ವಿಧಾನಸಭಾ ಕ್ಷೇತ್ರದಲ್ಲಿ ಆಯ್ಕೆಯಾಗಿ ಶಾಸಕರಾಗಿದ್ದಾರೆ. ಹಾಗಾಗಿ ಈ ದೇವಸ್ಥಾನ ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ದೇವಸ್ಥಾನ ಪೂರ್ಣಗೊಳ್ಳಲು ಈಗಾಗಲೇ ಅಂದಾಜು ಕ್ರಿಯ ಯೋಜನೆ, ಸುಮಾರು 50 ಲಕ್ಷ ಆಗುತ್ತದೆ ಎಂಬ ಮಾಹಿತಿ ಇದ್ದು ಮೊದಲ ಅನುದಾನ 25 ಲಕ್ಷ ಬಿಡುಗಡೆ ಆಗಿದೆ ಜೊತೆಗೆ ಇನ್ನಷ್ಟು ಅನುದಾನ ಹಾಕಿಸುವ ಮೂಲಕ ದೇವಸ್ಥಾನ ನಿರ್ಮಾಣ ಮಾಡಲು ಮುಂದಾಗೋಣ ಜೊತೆಗೆ ಒಂದಷ್ಟು ದಾನಿಗಳು ಸೇರಿದಂತೆ ಗ್ರಾಮದ ಎಲ್ಲರ ಸಹಕಾರ ಈ ದೇವಸ್ಥಾನಕ್ಕೆ ಇನ್ನಷ್ಟು ಹೆಚ್ಚಿನ ರೀತಿಯಲ್ಲಿ ಹರಿದು ಬರಲಿ ಎಂದು ಎಲ್ಲರಲ್ಲಿ ಮನವಿ ಮಾಡಿದರು.


ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ತಾಲೂಕು ಸಮಿತಿ ಅಧ್ಯಕ್ಷ ಉದಯ್ ಶಂಕರ್, ಎಸ್ ಟಿ ಘಟಕದ ಕಾಂಗ್ರೆಸ್ ಅಧ್ಯಕ್ಷ ನರಸಿಂಹ ನಾಯಕ,ಗ್ರಾಪಂ ಮಾಜಿ ಸದಸ್ಯ ಯತಿರಾಜ್, ಎಸ್ ಕುಮಾರ್ ಮಂಜಪ್ಪ, ಸಿ ಪಿ ಕುಮಾರ್, ಸ್ವಾಮಿ, ಶಿವರಾಜ್, ಮಹದೇವ, ಪ್ರಕಾಶ್, ಆರ್ ಮಂಜಪ್ಪ, ಶಂಕರಪ್ಪ, ಪಾಟೀಲ್, ಚಂದ್ರಪ್ಪ, ಶಿವಣ್ಣ, ನಾಡಗೌಡ ಕುಮಾರಸ್ವಾಮಿ , ಬೋರಪ್ಪನಾಯಕ, ಗಾರೆಕೃಷ್ಣ, ಕೆಂಚನಹಳ್ಳಿಪ್ರಸನ್ನ, ಕಾಂತರಾಜ್, ಕಲಾವಿದ, ವೆಂಕಟೇಶ್, ಮಹದೇವ್, ಗುತ್ತಿಗೆದಾರ ನಾರಾಯಣಪ್ಪ, ರಾಜಣ್ಣ, ಮಂಜು, ಅಪ್ಪು, ಕಾಳೇಗೌಡ, ನಾಗರಾಜೇಗೌಡ,ರಘು, ಮಂಜು ಇತರರು ಇದ್ದರು.



ಡಾ.ಸುಧಾಕರ.ಜಿ.ಲಕ್ಕವಳ್ಳಿ

# ತರಗತಿಯಿಂದ ಸಂಸತ್ತಿನವರೆಗೆ

ಸ್ಫೂರ್ತಿ ಸುದ್ಧೆ - 65



ಬರಾಕ್ ಕಣಿವೆಯ ಹೆಮ್ಮೆ,ಅಕ್ಷರದ ಜೊತೆ ಜನಸೇವೆಯನ್ನು ಬೆಸೆದ ಹಿರಿಯ ಚೇತನ.ಅಸ್ಸಾಂನ ಪ್ರಮುಖ ನಾಯಕ ಶ್ರೀ ಕಬೀಂದ್ರ ಪುರ್ಕಾಯಸ್ಥ ಅವರಿಗೆ 2026ರ ಪದ್ಮಶ್ರೀ ಸಂದಿದೆ.ಸಿಲ್ಚಾರ್‌ನಿಂದ ಮೂರು ಬಾರಿ ಸಂಸದರಾಗಿ,ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿದ ಇವರು, 45 ವರ್ಷಗಳಿಗೂ ಹೆಚ್ಚು ಕಾಲ ಜನರಿಗಾಗಿ ಬದುಕಿದರು. ರಾಜಕೀಯದ ಹಾದಿ ಹಿಡಿಯುವ ಮೊದಲೇ ಇವರು ನೂರಾರು ಮಕ್ಕಳ ಬದುಕು ರೂಪಿಸಿದ ಶಿಕ್ಷಕ.

ರಾಮಕೃಷ್ಣ ವಿದ್ಯಾಪೀಠದ ಪ್ರಾಂಶುಪಾಲರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ದಾರಿ ತೋರಿದರು. ಶಿಕ್ಷಕರ ಸಂಘಗಳಲ್ಲಿ ಹಲವು ಜವಾಬ್ದಾರಿ ಹೊತ್ತು,ಶಿಕ್ಷಣ ಕ್ಷೇತ್ರದ ನೋವುಗಳಿಗೆ ದನಿಯಾದರು.ದೇಶ ಕಟ್ಟುವ ಕೆಲಸ ತರಗತಿಯಿಂದ ಶುರುವಾಗುತ್ತದೆ ಎಂದು ನಂಬಿದ ಇವರು,ಕಪ್ಪು ಹಲಗೆಯ ಪಾಠವನ್ನು ಸಂಸತ್ತಿನ ವೇದಿಕೆಗೆ ಒಯ್ದರು. ಈಶಾನ್ಯ ರಾಜ್ಯಗಳ ಅಭಿವೃದ್ಧಿ, ಬಡವರ ಬದುಕು ಇವರ ಮಾತಿನ ಕೇಂದ್ರಬಿಂದು ಆಗಿತ್ತು.

ರಾಜಕೀಯ ಇವರಿಗೆ ಅಧಿಕಾರದ ಮೆಟ್ಟಿಲಾಗಲಿಲ್ಲ;ಅದು ಜನಸೇವೆಯ ವಿಸ್ತಾರವಾದ ತರಗತಿ ಆಯಿತು. ಶಾಲೆಯ ಮಕ್ಕಳ ಸಮಸ್ಯೆಯಿಂದ ಹಿಡಿದು ದೇಶದ ನೀತಿಯವರೆಗೆ ಒಂದೇ ಮನಸ್ಸಿನಿಂದ ಕೆಲಸ ಮಾಡಿದರು.ಅಕ್ಷರ ಕಲಿಸಿದ ಕೈಗಳಿಂದಲೇ ಜನರ ಕಷ್ಟಕ್ಕೆ ಪರಿಹಾರ ಬರೆದರು.ಇವರ ಬದುಕು, ನಿಜವಾದ ನಾಯಕತ್ವವೆಂದರೆ ಸೇವೆ ಎಂದು ತೋರಿಸಿಕೊಟ್ಟಿತು.

ಈ ಪದ್ಮಶ್ರೀ ಕೇವಲ ರಾಜಕಾರಣಿಗೆ ಸಂದಿಲ್ಲ;ಕಪ್ಪು ಹಲಗೆಯಿಂದ ಸಂಸತ್ತಿನವರೆಗೆ ಅಕ್ಷರದ ದೀಪ ಹಚ್ಚುತ್ತಾ, ಜನಸೇವೆಯ ಪಾಠ ಮಾಡಿದ ಹಿರಿಯ ಜೀವಕ್ಕೆ ಸಂದ ನಮನ.ಶ್ರೀ ಕಬೀಂದ್ರ ಪುರ್ಕಾಯಸ್ಥ ಅವರ ಸಂದೇಶ: ರಾಜಕೀಯವೆಂದರೆ ಕುರ್ಚಿಯಲ್ಲ; ಅದು ಜನರ ಬದುಕನ್ನು ಬೆಳಗಿಸುವ ನಿರಂತರ ಪಾಠ.

# ಭಾರತೀಯರಿಗೆ ಗೊತ್ತಿರಬೇಕಾದ ಭಾರತೀಯ ಅಂಚೆ ಇಲಾಖೆಯ ಸೌಲಭ್ಯಗಳು

ವಾಟ್ಸ್‌ಆಪ್ ಮೆಸೇಜ್‌ಗಳಿಂದ ಪ್ರಾರಂಭವಾಗುವ ಪ್ರೀತಿ, ಮೆಸೇಜ್‌ಗಳಲ್ಲೇ ಕೊನೆಗೊಳ್ಳುವ ಕಾಲಘಟ್ಟದಲ್ಲಿ ನಾವು ಬದುಕುತ್ತಿದ್ದೇವೆ. ಆದರೆ, ಒಂದು ಕಾಲವಿತ್ತು; ಮನಸ್ಸಿನ ಭಾವನೆಗಳು ಪತ್ರಗಳ ಮೂಲಕ ವಿನಿಮಯವಾಗುತ್ತಿದ್ದವು.

ಒಂದು ಪತ್ರಕ್ಕಾಗಿ ತಿಂಗಳುಗಟ್ಟಲೆ ಕಾಯುವುದು, ಅದರೊಳಗೆ ಅಡಗಿರುವ ಪರಿಶುದ್ಧ ಪ್ರೀತಿಯನ್ನು ಮನದಾಳದಿಂದ ಅನುಭವಿಸುವುದು, ಅದಕ್ಕೆ ಉತ್ತರ ಬರೆದು ಮತ್ತೊಂದು ಪತ್ರಕ್ಕಾಗಿ ಕಾತರದಿಂದ ಕಾಯುವುದು ಆ ಖುಷಿಯೇ ವಿಭಿನ್ನವಾಗಿತ್ತು. ಅದು ಕೇವಲ ಗಂಡ ಹೆಂಡತಿಯ ಪ್ರೇಮಪತ್ರಗಳಷ್ಟೇ ಅಲ್ಲ; ದೂರದ ಊರಿನಲ್ಲಿ ದುಡಿಯುತ್ತಿರುವ ತಂದೆಗೆ ಪುಟ್ಟ ಮಗಳು ಬರೆದ ಪತ್ರ, ತಾಯಿಯ ಆಶೀರ್ವಾದ, ಸ್ನೇಹಿತರ ಆತ್ಮೀಯತೆ, ಮನೆಯವರ ಕಾಳಜಿ ಇವೆಲ್ಲವೂ ಆ ಪತ್ರಗಳಲ್ಲಿ ಜೀವಂತವಾಗಿರುತ್ತಿದ್ದವು.

ಇಂದು ನಂಬಿಕೆಗಳು ಕ್ಷೀಣಿಸುತ್ತಿರುವ ಈ ಕಾಲದಲ್ಲಿಯೂ ಪೋಸ್ಟ್‌ಮ್ಯಾನ್ ಬಾಗಿಲು ತಟ್ಟಿದರೆ ಜನರು ನಂಬಿಕೆಯಿಂದ ಪತ್ರವನ್ನು ಸ್ವೀಕರಿಸುತ್ತಾರೆ. ಅದಕ್ಕೆ ಕಾರಣ, ತಲೆಮಾರುಗಳಿಂದ ಭಾರತೀಯ ಅಂಚೆ ಇಲಾಖೆ ಗಳಿಸಿಕೊಂಡಿರುವ ಅಪಾರ ವಿಶ್ವಾಸ.

**ಪ್ರಸ್ತುತ ಹಣ ಸಂಪಾದಿಸುವುದಷ್ಟೇ ಸಾಕಾಗುವುದಿಲ್ಲ;** ಹಣದಿಂದ ಮತ್ತಷ್ಟು ಹಣವನ್ನು ಗಳಿಸುವ ಆರ್ಥಿಕ ಜಾಣ್ಮೆಯನ್ನೂ ಬೆಳೆಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಭಾರತೀಯ ಅಂಚೆ ಇಲಾಖೆಯು ದೇಶದ ಪ್ರತಿಯೊಬ್ಬ ನಾಗರಿಕನಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸುವ ಹಾಗೂ ಸುರಕ್ಷಿತ ಹೂಡಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ವಿವಿಧ ಸಣ್ಣ ಉಳಿತಾಯ ಯೋಜನೆಗಳನ್ನು ಜಾರಿಗೊಳಿಸಿದೆ. ಭಾರತ ಸರ್ಕಾರದ ಭರವಸೆಯೊಂದಿಗೆ ಕಾರ್ಯನಿರ್ವಹಿಸುವ ಈ ಯೋಜನೆಗಳು ಸಂಪೂರ್ಣ ಸುರಕ್ಷಿತ ಹೂಡಿಕೆಯ ಮಾರ್ಗಗಳೆಂದು ಪರಿಗಣಿಸಲ್ಪಡುತ್ತವೆ. ಕಡಿಮೆ ಮೊತ್ತದಿಂದಲೇ ಹೂಡಿಕೆಯನ್ನು ಆರಂಭಿಸಬಹುದಾದ ಕಾರಣ ಸಾಮಾನ್ಯ ಜನರು, ವಿದ್ಯಾರ್ಥಿಗಳು, ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಉದ್ಯೋಗಿಗಳು ಎಲ್ಲರೂ ಇದರ ಪ್ರಯೋಜನ




ಪಡೆಯಬಹುದು.

ಭಾರತೀಯ ಅಂಚೆ ಇಲಾಖೆಯು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸ್ಪೀಡ್ ಪೋಸ್ಟ್ ಸೇವೆಯಲ್ಲಿ 10% ಶುಲ್ಕ ರಿಯಾಯಿತಿಯನ್ನು ನೀಡುತ್ತಿದೆ. ಆದರೆ, ಈ ಉಪಯುಕ್ತ ಸೌಲಭ್ಯದ ಕುರಿತು ಇನ್ನೂ ಸಾಕಷ್ಟು ವಿದ್ಯಾರ್ಥಿಗಳಿಗೆ ಮಾಹಿತಿ ಇಲ್ಲ. ಸರಿಯಾದ ಮಾಹಿತಿ ಮತ್ತು ಜಾಗೃತಿಯ ಕೊರತೆಯಿಂದ ಅನೇಕ ವಿದ್ಯಾರ್ಥಿಗಳು ಈ ಸೌಲಭ್ಯದ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಭಾರತೀಯ ಅಂಚೆ ಇಲಾಖೆಯ ಪ್ರಮುಖ ಸಣ್ಣ ಉಳಿತಾಯ ಯೋಜನೆಗಳಲ್ಲಿ ಉಳಿತಾಯ ಖಾತೆ (SB), ಆವರ್ತ ಠೇವಣಿ (RD), ಅವಧಿ ಠೇವಣಿ (TD), ಸಾರ್ವಜನಿಕ ಭವಿಷ್ಯ ನಿಧಿ (PPF), ಸುಕನ್ಯಾ ಸಮೃದ್ಧಿ ಯೋಜನೆ (SSA),ಹಿರಿಯ ನಾಗರಿಕರ ಉಳಿತಾಯ ಯೋಜನೆ (SCSS), ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (NSC), ಮಾಸಿಕ ಆದಾಯ ಯೋಜನೆ (MIS)ಹಾಗೂ ಕಿಸಾನ್ ವಿಕಾಸ್ ಪತ್ರ (KVP)ಸೇರಿವೆ. ಹೂಡಿಕೆದಾರರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಅಲ್ಪಾವಧಿ ಅಥವಾ ದೀರ್ಘಾವಧಿಯ ಯೋಜನೆಗಳನ್ನು ಆಯ್ಕೆ ಮಾಡಬಹುದು.

* ಉಳಿತಾಯ ಖಾತೆ (SB): ಕನಿಷ್ಠ ಠೇವಣಿ 500, ಅವಧಿ ಇಲ್ಲ, ಬಡ್ಡಿದರ 4%.
* ಆವರ್ತ ಠೇವಣಿ (RD): ಕನಿಷ್ಠ ಠೇವಣಿ 100, 5 ವರ್ಷಗಳ ಅವಧಿ, ಬಡ್ಡಿದರ 6.70%.
* ಅವಧಿ ಠೇವಣಿ (TD):ಕನಿಷ್ಠ ಠೇವಣಿ 1,000, 1 ರಿಂದ 5 ವರ್ಷಗಳ ಅವಧಿ, ಬಡ್ಡಿದರ 6.9% ರಿಂದ 7.5%.
* ಸಾರ್ವಜನಿಕ ಭವಿಷ್ಯ ನಿಧಿ (PPF): ಕನಿಷ್ಠ ಠೇವಣಿ 500, 15 ವರ್ಷಗಳ ಅವಧಿ, ಬಡ್ಡಿದರ 7.10%.
* ಸುಕನ್ಯಾ ಸಮೃದ್ಧಿ ಯೋಜನೆ (SSA): ಕನಿಷ್ಠ ಠೇವಣಿ 250, 15 ವರ್ಷಗಳ ಅವಧಿ, ಬಡ್ಡಿದರ 8.20%.
* ಹಿರಿಯ ನಾಗರಿಕರ ಉಳಿತಾಯ ಯೋಜನೆ (SCSS): ಕನಿಷ್ಠ ಠೇವಣಿ 1,000, 5 ವರ್ಷಗಳ ಅವಧಿ, ಬಡ್ಡಿದರ 8.20%.
* ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (NSC):ಕನಿಷ್ಠ ಠೇವಣಿ 1,000, 5 ವರ್ಷಗಳ ಅವಧಿ, ಬಡ್ಡಿದರ 7.70%.
* ಮಾಸಿಕ ಆದಾಯ ಯೋಜನೆ (MIS): ಕನಿಷ್ಠ ಠೇವಣಿ 1,000, 5 ವರ್ಷಗಳ ಅವಧಿ, ಬಡ್ಡಿದರ 7.40%.
  ತಿಕಿಸಾನ್ ವಿಕಾಸ್ ಪತ್ರ (KVP): ಕನಿಷ್ಠ ಠೇವಣಿ 1,000, 9 ವರ್ಷ 7 ತಿಂಗಳ ಅವಧಿ, ಬಡ್ಡಿದರ 7.50%.

ಈ ಯೋಜನೆಗಳ ಪ್ರಮುಖ ವೈಶಿಷ್ಟ್ಯಗಳೆಂದರೆ ಖಚಿತ ಬಡ್ಡಿದರ, ನಿಯಮಿತ ಆದಾಯದ ಅವಕಾಶ, ನಾಮನಿರ್ದೇಶನ ಸೌಲಭ್ಯ ಹಾಗೂ ಆದಾಯ ತೆರಿಗೆ ಕಾಯ್ದೆ 80ಅ ಅಡಿಯಲ್ಲಿ ತೆರಿಗೆ ಉಳಿತಾಯದ ಅವಕಾಶ ದೊರೆಯುವುದು.

ಹೆಣ್ಣು ಮಗುವಿನ ಶಿಕ್ಷಣ ಮತ್ತು ವಿವಾಹವು ಪ್ರತಿಯೊಂದು ಮಧ್ಯಮ ವರ್ಗದ ಕುಟುಂಬದ ಕನಸಾಗಿದೆ. ಈ ಕನಸನ್ನು ಸಾಕಾರಗೊಳಿಸಲು ಸುಕನ್ಯಾ ಸಮೃದ್ಧಿ ಯೋಜನೆ ಅತ್ಯುತ್ತಮ ಉಳಿತಾಯ ಯೋಜನೆಯಾಗಿದೆ. ಅದೇ ರೀತಿ ಹಿರಿಯ ನಾಗರಿಕರ ಉಳಿತಾಯ ಯೋಜನೆ ನಿವೃತ್ತಿಯ ನಂತರ ನಿಯಮಿತ ಆದಾಯವನ್ನು ಒದಗಿಸುತ್ತದೆ. ಸಾರ್ವಜನಿಕ ಭವಿಷ್ಯ ನಿಧಿ (ಕಕಈ) ಮತ್ತು ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (ಓಖಅ) ದೀರ್ಘಾವಧಿಯ ಉಳಿತಾಯ ಮತ್ತು ತೆರಿಗೆ ಉಳಿತಾಯಕ್ಕೆ ಅತ್ಯುತ್ತಮಣ ಆಯ್ಕೆಗಳಾಗಿವೆ.

ಹೀಗಾಗಿ, ಭಾರತೀಯ ಅಂಚೆ ಇಲಾಖೆಯ ಸಣ್ಣ ಉಳಿತಾಯ ಯೋಜನೆಗಳು ಕೇವಲ ಹಣ ಹೂಡುವ ಸಾಧನಗಳಲ್ಲ; ಅವು ಪ್ರತಿಯೊಬ್ಬ ನಾಗರಿಕನ ಆರ್ಥಿಕ ಭದ್ರತೆ, ಸ್ವಾವಲಂಬನೆ ಮತ್ತು ಉತ್ತಮ ಭವಿಷ್ಯದ ಭರವಸೆಯಾಗಿದೆ. ಅಂಚೆ ಇಲಾಖೆಯ ಮೇಲಿನ ವಿಶ್ವಾಸದಂತೆ, ಈ ಉಳಿತಾಯ ಯೋಜನೆಗಳೂ ಕೋಟ್ಯಾಂತರ ಭಾರತೀಯರ ಕನಸುಗಳಿಗೆ ಭದ್ರ ಅಡಿಪಾಯವಾಗಿ ನಿಂತಿವೆ.

| ಅಪೂರ್ವ ಸಾಲ್ಯಾನ್ ಪೆರಿಂಜೆ

# ಶಿಕ್ಷಣ ಬೆಳೆಯುತ್ತಿದೆ... ಸಂಸ್ಕಾರ ಏಕೆ ಕುಸಿಯುತ್ತಿದೆ?



| ಉಮೇಶ ಸರ್ಪನಕಟ್ಟೆ
ಉಪನ್ಯಾಸಕರು

ಇಂದು ನಾವು ಶಿಕ್ಷಣದ ಯುಗದಲ್ಲಿದ್ದೇವೆ. ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಹೆಚ್ಚುತ್ತಿವೆ. ತಂತ್ರಜ್ಞಾನ ಹೊಸ ಹೊಸ ಅವಕಾಶಗಳನ್ನು ತೆರೆದಿಡುತ್ತಿದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಜಗತ್ತಿನ ಜ್ಞಾನವನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯುತ್ತಿದ್ದಾರೆ. ಆದರೆ ಈ ಎಲ್ಲ ಬೆಳವಣಿಗೆಗಳ ನಡುವೆ ಒಂದು ಪ್ರಶ್ನೆ ಕಾಡುತ್ತಿದೆ ? ಶಿಕ್ಷಣ ಬೆಳೆಯುತ್ತಿರುವಾಗ ಸಂಸ್ಕಾರ ಏಕೆ ಕುಸಿಯುತ್ತಿದೆ?

ಒಂದು ಕಾಲದಲ್ಲಿ ಮನೆಯೇ ಮಗುವಿನ ಮೊದಲ ಶಾಲೆಯಾಗಿತ್ತು. ತಂದೆ–ತಾಯಿ, ಅಜ್ಜ–ಅಜ್ಜಿ ಹಾಗೂ ಮನೆಯ ಹಿರಿಯರು ಮಕ್ಕಳಿಗೆ ಜೀವನದ ಮೌಲ್ಯಗಳನ್ನು ಕಲಿಸುತ್ತಿದ್ದರು. ಗೌರವ, ಕರುಣೆ, ಪ್ರಾಮಾಣಿಕತೆ, ಸಹಾನುಭೂತಿ ಮತ್ತು ಮಾನವೀಯತೆ ಎಂಬ ಗುಣಗಳು ಕುಟುಂಬದ ವಾತಾವರಣದಲ್ಲಿಯೇ ಬೆಳೆದು ಬರುತ್ತಿದ್ದವು. ಆದರೆ ಇಂದು ಆ ಜಾಗವನ್ನು ಮೊಬೈಲ್, ಟಿವಿ ಮತ್ತು ಸಾಮಾಜಿಕ ಜಾಲತಾಣಗಳು ಆಕ್ರಮಿಸಿವೆ.

ಹಿಂದೆ ಚಂದಮಾಮನನ್ನು ತೋರಿಸಿ ಕೈತುತ್ತು ನೀಡುತ್ತಿದ್ದ ತಾಯಂದಿರು ಇಂದು ಮಕ್ಕಳಿಗೆ ಮೊಬೈಲ್‌ನಲ್ಲಿ ರೀಲ್ಸ್ ತೋರಿಸಿ ಊಟ ಮಾಡಿಸುತ್ತಿದ್ದಾರೆ. ಕಥೆಗಳ ಮೂಲಕ ಜೀವನ ಪಾಠಗಳನ್ನು ಕಲಿಯುತ್ತಿದ್ದ ಮಕ್ಕಳು ಇಂದು ಕ್ಷಣಿಕ ಮನರಂಜನೆಯ ಜಗತ್ತಿನಲ್ಲಿ ಮುಳುಗಿದ್ದಾರೆ. ತಂತ್ರಜ್ಞಾನ ನಮ್ಮ ಬದುಕನ್ನು ಸುಲಭಗೊಳಿಸಿದರೂ, ಸಂಬಂಧಗಳ ಆತ್ಮೀಯತೆಯನ್ನು ನಿಧಾನವಾಗಿ ಕಸಿದುಕೊಳ್ಳುತ್ತಿದೆ.

ಇಂದಿನ ಶಿಕ್ಷಣ ವ್ಯವಸ್ಥೆಯ ಮತ್ತೊಂದು ದೌರ್ಬಲ್ಯ ಎಂದರೆ ಅಂಕಗಳ ಮೇಲಿನ ಅತಿಯಾದ ಒತ್ತಡ. ವಿದ್ಯಾರ್ಥಿಯ ವ್ಯಕ್ತಿತ್ವ, ನೈತಿಕತೆ ಮತ್ತು ಮಾನವೀಯ ಗುಣಗಳಿಗಿಂತ ಅವನ ಅಂಕಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಪರಿಣಾಮವಾಗಿ ಮಕ್ಕಳು ಸ್ಪರ್ಧೆಯಲ್ಲಿ ಗೆಲ್ಲುವುದನ್ನು ಕಲಿಯುತ್ತಿದ್ದಾರೆ, ಆದರೆ ಜೀವನದಲ್ಲಿ ಒಳ್ಳೆಯ ಮನುಷ್ಯರಾಗುವುದನ್ನು ಕಲಿಯುವ ಅವಕಾಶ ಕಡಿಮೆಯಾಗುತ್ತಿದೆ.

ಒಂದೇ ಮನೆಯಲ್ಲಿದ್ದರೂ ಕುಟುಂಬ ಸದಸ್ಯರು



ಪರಸ್ಪರ ಮಾತನಾಡಲು ಸಮಯವಿಲ್ಲದಂತಾಗಿದೆ. ಎಲ್ಲರೂ ತಮ್ಮದೇ ಮೊಬೈಲ್ ಜಗತ್ತಿನಲ್ಲಿ ಕಳೆದುಹೋಗಿದ್ದಾರೆ. ಅನೇಕ ಮಕ್ಕಳಿಗೆ ತಮ್ಮ ಸಂಬಂಧಿಕರ ಪರಿಚಯವೇ ಇಲ್ಲದಿರುವುದು ಇಂದಿನ ಸಾಮಾಜಿಕ ವಾಸ್ತವ್ಯವಾಗಿದೆ. ಸಂಬಂಧಗಳಿಗಿಂತ ಸಾಧನಗಳಿಗೆ ಹೆಚ್ಚು ಮಹತ್ವ ಸಿಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಇದರ ಜೊತೆಗೆ ಆಡಂಬರದ ಜೀವನಶೈಲಿಯೂ ಮೌಲ್ಯಗಳ ಕುಸಿತಕ್ಕೆ ಕಾರಣವಾಗಿದೆ. ಸಮಾಜದಲ್ಲಿ ಹೋಲಿಕೆಯ ಮನೋಭಾವ ಹೆಚ್ಚುತ್ತಿದೆ. ಇತರರಿಗಿಂತ ಹೆಚ್ಚು ಸಂಪಾದಿಸಬೇಕು, ಹೆಚ್ಚು ವೈಭವದಿಂದ ಬದುಕಬೇಕು ಎಂಬ ಸ್ಪರ್ಧೆಯಲ್ಲಿ ಮಾನವೀಯತೆ, ತೃಪ್ತಿ ಮತ್ತು ಸಂತೋಷ ಹಿಂದುಳಿಯುತ್ತಿವೆ. ಯಶಸ್ಸಿನ ಅಳತೆ ಹಣ ಮತ್ತು ಆಸ್ತಿಯ ಮಟ್ಟಕ್ಕೆ ಸೀಮಿತವಾಗುತ್ತಿರುವುದು ಸಮಾಜದ ದುರಂತವಾಗಿದೆ.

ಸಾಮಾಜಿಕ ಜಾಲತಾಣಗಳ ಪ್ರಭಾವವೂ ಯುವಜನರ ಮನೋಭಾವವನ್ನು ಬದಲಾಯಿಸುತ್ತಿದೆ. ಕಡಿಮೆ ಸಮಯದಲ್ಲಿ ಖ್ಯಾತಿ, ಹಣ ಮತ್ತು ಜನಪ್ರಿಯತೆ ಗಳಿಸುವ ಆಕರ್ಷಣೆ ಹೆಚ್ಚುತ್ತಿದೆ. ಪರಿಶ್ರಮ, ತಾಳ್ಮೆ, ಶಿಸ್ತು ಮತ್ತು ಮೌಲ್ಯಾಧಾರಿತ ಬದುಕಿನ ಮಹತ್ವ ಕಡಿಮೆಯಾಗುತ್ತಿದೆ.

ಈ ಪರಿಸ್ಥಿತಿಯಲ್ಲಿ ಪೋಷಕರ ಜವಾಬ್ದಾರಿ ಅತ್ಯಂತ ದೊಡ್ಡದು. ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರಗಳನ್ನು ನೀಡುವುದು ಅವರ ಕರ್ತವ್ಯವಾಗಿದೆ. ಹಿರಿಯರಿಗೆ ಗೌರವ, ಸತ್ಯನಿಷ್ಠೆ, ಸಮಾಜದ ಬಗ್ಗೆ ಕಾಳಜಿ ಹಾಗೂ ಇತರರ ನೋವಿಗೆ ಸ್ಪಂದಿಸುವ ಮನೋಭಾವವನ್ನು ಬಾಲ್ಯದಲ್ಲಿಯೇ ಬೆಳೆಸಬೇಕು.

ಶಾಲೆಗಳೂ ಸಹ ಕೇವಲ ಪಠ್ಯಜ್ಞಾನ ನೀಡುವ ಕೇಂದ್ರಗಳಾಗದೆ, ಉತ್ತಮ ನಾಗರಿಕರನ್ನು ರೂಪಿಸುವ ಸಂಸ್ಥೆಗಳಾಗಬೇಕು. ಪಠ್ಯಕ್ರಮದ ಜೊತೆಗೆ ನೈತಿಕ ಶಿಕ್ಷಣ, ಜೀವನ ಕೌಶಲ್ಯಗಳು ಹಾಗೂ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು ಕಾಲದ ಅಗತ್ಯವಾಗಿದೆ.

ನಿಜವಾದ ಶಿಕ್ಷಣ ಎಂದರೆ ಕೇವಲ ಪದವಿ ಅಥವಾ ಅಂಕಗಳನ್ನು ಗಳಿಸುವುದಲ್ಲ. ಅದು ವ್ಯಕ್ತಿಯೊಳಗಿನ ಮಾನವೀಯತೆಯನ್ನು ಜಾಗೃತಗೊಳಿಸುವ ಪ್ರಕ್ರಿಯೆ. ಹಣ, ಅಧಿಕಾರ ಮತ್ತು ಖ್ಯಾತಿ ವ್ಯಕ್ತಿಯನ್ನು ದೊಡ್ಡವನನ್ನಾಗಿ ಮಾಡಬಹುದು; ಆದರೆ ಪ್ರಾಮಾಣಿಕತೆ, ಕರುಣೆ, ಗೌರವ ಮತ್ತು ಸಂಸ್ಕಾರ ಮಾತ್ರ ವ್ಯಕ್ತಿಯನ್ನು ಮಹಾನ್ ವ್ಯಕ್ತಿಯನ್ನಾಗಿ ಮಾಡುತ್ತವೆ.

ಆದ್ದರಿಂದ ಶಿಕ್ಷಣದ ಜೊತೆಗೆ ಸಂಸ್ಕಾರಗಳನ್ನೂ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಕುಟುಂಬ, ಶಾಲೆ ಮತ್ತು ಸಮಾಜ ಕೈಜೋಡಿಸಿ ಮೌಲ್ಯಯುತ ಪೀಳಿಗೆಯನ್ನು ರೂಪಿಸಬೇಕಾಗಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಜ್ಞಾನವಂತರು ಹೆಚ್ಚಾಗಬಹುದು, ಆದರೆ ಒಳ್ಳೆಯ ಮನುಷ್ಯರು ಕಡಿಮೆಯಾಗುವ ಅಪಾಯ ಎದುರಾಗಬಹುದು.

"ಶಿಕ್ಷಣ ಮನುಷ್ಯನ ಬುದ್ಧಿಯನ್ನು ಬೆಳೆಸುತ್ತದೆ; ಸಂಸ್ಕಾರ ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಇವೆರಡೂ ಒಂದಾಗಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ."

# ಮನದ ಶಾಂತಿಗೆ ಧ್ಯಾನ



ಸ್ನೇಹ ಲೋಕ



| ಸ್ನೇಹಾ ಆನಂದ್

ಮನಸಿಗೆ ಬಿದ್ದ ಪೆಟ್ಟನ್ನು ಸಹಿಸಿಕೊಂಡು, ಅದನ್ನು ಸರಿಪಡಿಸಿಕೊಳ್ಳುವುದು ತುಂಬಾ ಕಷ್ಟ ನಿಜ! ಆದರೆ #ಧ್ಯಾನ ಅದನ್ನು ಸರಿಪಡಿಸಿ ಮತ್ತೇ ಗಾಯವಾಗದಂತೆ ಪಟ್ಟಿ ಹಾಕುತ್ತದೆ, ಸೂದಿಂಗ್ ಮಾಡುತ್ತದೆ, ಆದರೆ ಅದಕ್ಕೆ ಸರಿಯಾದ ಸಮಯ, ಶಾಂತ ಸ್ಥಳ,ಏಕಾಂತ ಬೇಕಷ್ಟೇ!

ಮನಸ್ಸನ್ನು ನಿಯಂತ್ರಣದಲ್ಲಿಡುವುದು ಧ್ಯಾನ, ಯೋಗ ತನುವಿಗೆ, ಧ್ಯಾನ ಮನವಿಗೆ, ದೇಹಕ್ಕೆ ಚೇತನ ಬರಲು ಯೋಗ , ವ್ಯಾಯಾಮ, ವಾಯುವಿಹಾರ ಹೇಗೆ ಹೋಗುತ್ತೇವೆಯೋ ಹಾಗೆ ಧ್ಯಾನ ಮನಸ್ಸನ್ನು ಉಲ್ಲಸಿತಗೊಳಿಸಿ ಸಮಾಧಾನಿಸುತ್ತದೆ!

ಮನಸ್ಸು ಹಿಡಿತಕ್ಕೆ ಬರಬೇಕು ಎಂದರೆ ದಿನಕ್ಕೆ ಇಪ್ಪತ್ತು ನಿಮಿಷವಾದರೂ ಧ್ಯಾನದ ಅವಶ್ಯಕತೆ ಇದೆ, ಮನಸ್ಸನ್ನು ಶೂನ್ಯದತ್ತ ಕರೆದೊಯ್ಯುವ ಏಕೈಕ ಮಾರ್ಗ #ಧ್ಯಾನ, ನಿರಂತರವಾಗಿ ಮಾಡಲು ಆದರೆ ಮಾತ್ರ ಅದರ ಫಲ! ಧ್ಯಾನದಲ್ಲಿ ಎಷ್ಟೋ ವಿಧಗಳಿವೆ; ನಾನು ಒಂದಾನೊಂದು ಕಾಲದಲ್ಲಿ ಕಲಿತ ಒಂದಿಷ್ಟು ಧ್ಯಾನಗಳು ಇಲ್ಲಿವೆ!

ಮೊದಲನೆಯದು: ದೀರ್ಘ ಉಸಿರಾಟದ ಮೇಲೆಯೇ ನಿಗಾ ವಹಿಸಿ ಧ್ಯಾನದಲ್ಲಿ ಲೀನವಾಗುವುದು,ಇದು ಸಾಮಾನ್ಯವಾಗಿ ಎಲ್ಲರೂ ಹೇಳುವ ಧ್ಯಾನ! ಮನಸ್ಸು ಚಂಚಲವಾಗದೆ, ಏನನ್ನೂ ಯೋಚಿಸದೆ ಬರೀ ನಮ್ಮ ದೀರ್ಘ ಉಸಿರಾಟವನ್ನೇ ಗಮನಿಸುತ್ತಾ ಅದರಲ್ಲೇ ತಲ್ಲೀನವಾಗುವುದು,

**ಇದು ಮೊದಮೊದಲು ತುಂಬಾ ಕಷ್ಟ!**

ಎರಡನೆಯದು: ಧ್ಯಾನದ ಗುರುಗಳು ಹೇಳಿಕೊಡುವ ಮಂತ್ರದಿಂದ, ಅವರು ಹೇಳಿಕೊಡುವ ಮಂತ್ರವನ್ನು ಮನದಲ್ಲಿ ಹೇಳುತ್ತಾ ಅದರಲ್ಲೇ ಮನಸ್ಸನ್ನು ನೆಡುವುದು!

ಮೂರನೆಯದು: "ಓಂಕಾರದಿಂದ, ಇದು ತುಂಬಾ ಸುಂದರ ಧ್ಯಾನ, ಯಾವ ಕಡೆಗೂ ಮನಸ್ಸು ಹೋಗದಂತೆ ನಮ್ಮನ್ನು ತಡೆಯುವುದು ಈ ಓಂಕಾರದಲ್ಲಿ ಒಂದು ಅದ್ಭುತ ಶಕ್ತಿಯಿದೆ, ಓಂಕಾರ ನಾವು ಪ್ರಯತ್ನ ಪಡದೆ ಧ್ಯಾನದಲ್ಲಿ ನಮ್ಮನ್ನು ಲೀನವಾಗಿಸುತ್ತದೆ , ಮಾಡಿ ನೋಡಿ!

ನಾಲ್ಕನೆಯದು: ಕಣ್ಣು ಮುಚ್ಚಿ ಅಲ್ಲಿಯೇ ನಮ್ಮ ಮನವನ್ನು ಕೇಂದ್ರೀಕರಿಸಿ ಆ ಕತ್ತಲೆಯಲ್ಲಿ ಕಾಣುವ ಚಿತ್ರಣಗಳ ಮೇಲೆ ಮನಸ್ಸನ್ನು ಇಟ್ಟು ಹತೋಟಿಗೆ ತರುವುದು, ಕಣ್ಣು ಮುಚ್ಚಿದಾಗ ಕಣ್ಣು ಮುಂದೆ ಯಾವುದ್ಯಾವುದೋ ಬಣ್ಣಗಳು,ಚಿತ್ರಗಳು ಬರುತ್ತವೆ, ಅದರ ಕಡೆಗೆ ಗಮನ ಕೊಟ್ಟು ಧ್ಯಾನಕ್ಕೆ ಇಳಿಯುವುದು!

ಇನ್ನು_ಐದನೇಯ ಧ್ಯಾನ..... ನಮಗೆ ಬೇಕಾದ ಯಾವುದಾದರೂ ನಮಗಿಷ್ಟವಾದ ಸಂಗೀತದ ನಾದವನ್ನು ಹಾಕಿ ಅದರ ಮೇಲೆ ನಮ್ಮ ಮನಸ್ಸನ್ನು ಕೇಂದ್ರೀಕರಿಸುವುದು!

ಇದು ಮಾತ್ರ ಮನಸ್ಸನ್ನು ಒಂಥರಾ ಉಲ್ಲೇಖಿಸಿದಂತೆ ಗೊಳಿಸುತ್ತದೆ, ಕೃಷ್ಣನ ಮುರಳಿಯ ನಾದವನ್ನು ಹಾಕಿಕೊಂಡರೆ ನಮ್ಮ ಮನಸ್ಸು ಎಲ್ಲೋ ತೇಲಿ ಹೋಗುತ್ತದೆ! ಅಥವಾ ತುಂಬಾ ಸಂವೇದನೆ ಉಳ್ಳ ಒಂದು ನಾದದ ಮೇಲೆ ನಾವು ಮನಸ್ಸಿಟ್ಟರೆ ಧ್ಯಾನದಲ್ಲಿ ಎಲ್ಲೋ ತೇಲಿ ಹೋದಂತೆ ಭಾಸವಾಗುವುದು!


ಆರನೇಯದು: ಭಕ್ತಿ ಭಾವದಿಂದ ಮಂತ್ರವನ್ನು ಜಪಿಸುವುದು, ಇದು ತುಂಬಾ ಸುಲಭವಾದ ಆದರೆ ಅಷ್ಟೇ ಪ್ರಬಲವಾದ ಧ್ಯಾನ, ಉದಾಹರಣೆಗೆ: ಶ್ರೀ ರಾಘವೇಂದ್ರಾಯ ನಮಃ ಅಥವಾ ನಿಮ್ಮಿಷ್ಟದ ದೇವರನ್ನು ಸ್ಮರಿಸುವುದು, ಇದು ಕೂಡ ಹಿತ ನೀಡುವ ಧ್ಯಾನವೇ ನೂರಾ ಎಂಟು ಸಲ ಮತ್ತೇ ಮತ್ತೆ ಅದೇ ಮಂತ್ರವನ್ನು ಉದ್ಗರಿಸಿದರೆ ನಿಧಾನವಾಗಿ ಮನಸ್ಸು ನಿಯಂತ್ರಣಕ್ಕೆ ಬಂದು ಭಕ್ತಿಯಿಂದ ಧ್ಯಾನದಲ್ಲಿ ಲೀನವಾಗುತ್ತದೆ!

ಈ ಧ್ಯಾನ "ಸ್ವಾಮಿ ಕಾರ್ಯ ಸ್ವಕಾರ್ಯ" ಎರಡಕ್ಕೂ ಆದಂತೆ! ಈ ಧ್ಯಾನ ತುಂಬಾ ಪ್ರಭಲವಾದದ್ದು ಏಕೆಂದರೆ ಇಪ್ಪತ್ತು ನಿಮಿಷಗಳ ಕಾಲ ಸತತವಾಗಿ ದೇವರ ನಾಮವನ್ನು ಉಚ್ಚರಿಸುತ್ತೇವೆ, ಇದರಿಂದ ಧ್ಯಾನವೂ ಆಯಿತು ದೇವರು ಮಂತ್ರವೂ ಆಯಿತು, ಆದರೆ ಈ ಧ್ಯಾನ ಮಾಡುವಾಗ ಕಣ್ಣು ತೆಗೆದು ಮಂತ್ರ ಹೇಳಬಾರದು, ಅದು ಆಗ ಧ್ಯಾನವೆನಿಸುವುದಿಲ್ಲ ಮನಸ್ಸು ಒಂದೇ ಕಡೇ ಸ್ಥಿರವಾಗಿ ನಿಲ್ಲಬೇಕಾದರೆ ಕಣ್ಣು ಮುಚ್ಚಿ ಮಂತ್ರ ಹೇಳಿ ಧ್ಯಾನ ಮಾಡಬೇಕು ಆಗ ಅದು ಧ್ಯಾನವೆನಿಸುತ್ತದೆ!ಈ ಫೋಟೋ ಆರು ವರುಷಗಳ ಹಿಂದಿನದು, ನಾವು ಶಿರಿಸಿ, ಸಾಗರದ ಕಡೆ ಹೋದಾಗ ಒಂದು ಸುಂದರ ಹಳೆಯ ಗುಡಿ ಕಂಡಿತ್ತು, ಅಲ್ಲಿ ಆ ತಂಪಾದ ಪ್ರದೇಶದಲ್ಲಿ ಶಾಂತ ವಾತಾವರಣದಲ್ಲಿ ಅರ್ಧ ಗಂಟೆ ಧ್ಯಾನ ಮಾಡಿದ್ದೆ, ಮನಸ್ಸಿಗೆ ತುಂಬಾ ಹಿತ ನೀಡಿತ್ತು! ಅದೇ ರೀತಿ ನದಿ ತೀರದಲ್ಲೂ ಧ್ಯಾನ ತುಂಬಾ ಯೋಗ್ಯವೇ, ಅಲ್ಲಿಯ ನೀರಿನ ತರಂಗದಲ್ಲಿ ಮನಸ್ಸು ವಿಚಿತ್ರ ಶಾಂತತೆಯನ್ನು ಪಡೆಯುತ್ತದೆ! ಪ್ರಕೃತಿಯ ಸುಂದರತೆಯಲ್ಲೂ ಕೂಡ ಧ್ಯಾನ ಮನಸ್ಸಿಗೆ ಮುದವನ್ನು ನೀಡುತ್ತದೆ!

# ಏಕಾಂತವೇ ಶಾಶ್ವತ; ಮಿಕ್ಕದ್ದೆಲ್ಲ ನಾಟಕೀಯ



ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ
ಸಾಹಿತಿ



ಮಾನವ ಜೀವನದ ಅತ್ಯಂತ ದೊಡ್ಡ ವೈರುಧ್ಯವೇನೆಂದರೆ, ನಾವು ಜೀವನವಿಡೀ ಜನರ ಮಧ್ಯೆ ಬದುಕಲು ಪ್ರಯತ್ನಿಸುತ್ತೇವೆ; ಆದರೆ ಬದುಕಿನ ಆಳವಾದ ಸತ್ಯಗಳು ನಮ್ಮನ್ನು ಭೇಟಿಯಾಗುವುದು ಏಕಾಂತದಲ್ಲೇ. ಗದ್ದಲದಲ್ಲಿ ಕೇಳಿಸದ ಧ್ವನಿಯನ್ನು ಮೌನ ಕೇಳಿಸುತ್ತದೆ. ಜನರ ಹೊಗಳಿಕೆ ಹೇಳದ ಸತ್ಯವನ್ನು ಏಕಾಂತ ಹೇಳುತ್ತದೆ. ಬದುಕಿನ ನಿಜವಾದ ಮುಖ ಕನ್ನಡಿಯಲ್ಲಿ ಕಾಣಿಸುವುದಿಲ್ಲ; ಅದು ಏಕಾಂತದ ಕತ್ತಲೆಯಲ್ಲೇ ಸ್ಪಷ್ಟವಾಗಿ ಗೋಚರಿಸುತ್ತದೆ.

ಹುಟ್ಟುವಾಗ ಮನುಷ್ಯ ಒಬ್ಬನೇ ಬರುತ್ತಾನೆ. ಸಾಯುವಾಗಲೂ ಒಬ್ಬನೇ ಹೊರಟುಹೋಗುತ್ತಾನೆ. ಈ ಎರಡು ಸತ್ಯಗಳ ಮಧ್ಯೆ ನಾವು ಕಟ್ಟಿಕೊಳ್ಳುವ ಸಂಬಂಧಗಳು, ಸ್ನೇಹಗಳು, ಅಧಿಕಾರಗಳು, ಸಂಪತ್ತು, ಕೀರ್ತಿ, ಸ್ಥಾನಮಾನ ಇವೆಲ್ಲವೂ ಕಾಲದ ರಂಗಮಂಚದ ಮೇಲೆ ಕೆಲಕಾಲ ನಡೆಯುವ ನಾಟಕದ ಪಾತ್ರಗಳಂತೆಯೇ. ತೆರೆ ಬಿದ್ದ ನಂತರ ಯಾವ ಪಾತ್ರವೂ ನಮ್ಮೊಂದಿಗೆ ಉಳಿಯುವುದಿಲ್ಲ. ಉಳಿಯುವುದು ನಮ್ಮ ಅಂತರಂಗ ಮತ್ತು ನಮ್ಮ ಏಕಾಂತ ಮಾತ್ರ.

ಇಂದಿನ ಜಗತ್ತು ಜನರಿಂದ ತುಂಬಿದೆ; ಆದರೆ ಮನಸ್ಸುಗಳು ಖಾಲಿಯಾಗಿವೆ. ಸಾವಿರಾರು ಸಂಪರ್ಕಗಳಿವೆ; ಆದರೆ ಹೃದಯವನ್ನು ಅರ್ಥಮಾಡಿಕೊಳ್ಳುವ ಒಬ್ಬ ವ್ಯಕ್ತಿಯನ್ನು ಹುಡುಕುವುದು ಕಷ್ಟವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಾವಿರಾರು ಸ್ನೇಹಿತರಿದ್ದರೂ, ಮನಸ್ಸು ಮುರಿದಾಗ ಹೆಗಲಾಗಿ ನಿಲ್ಲುವವರು ಬೆರಳೆಣಿಕೆಯಷ್ಟು ಮಾತ್ರ. ಅದಕ್ಕಾಗಿಯೇ ಏಕಾಂತ ಶಾಪವಲ್ಲ; ಅದು ಸತ್ಯವನ್ನು ಪರಿಚಯಿಸುವ ಮೌನದ ಗುರು.

ನಾಟಕೀಯತೆ ಜೀವನದ ಎಲ್ಲ ಹಂತಗಳಲ್ಲೂ ಕಾಣಿಸುತ್ತದೆ. ಕೆಲವರು ಪ್ರೀತಿಯನ್ನು ಪ್ರದರ್ಶಿಸುತ್ತಾರೆ; ಆದರೆ ಪ್ರೀತಿಯ ಜವಾಬ್ದಾರಿಯನ್ನು ಹೊರುವುದಿಲ್ಲ. ಕೆಲವರು ಸ್ನೇಹದ ಹೆಸರಿನಲ್ಲಿ ಹತ್ತಿರ ಬರುತ್ತಾರೆ; ಆದರೆ ಅನುಕೂಲ ಮುಗಿದ ಕ್ಷಣದಲ್ಲೇ ದೂರವಾಗುತ್ತಾರೆ. ಕೆಲವರು ಗೌರವ ತೋರಿಸುತ್ತಾರೆ; ಆದರೆ ಅದು ವ್ಯಕ್ತಿತ್ವಕ್ಕೆ ಅಲ್ಲ, ಅಧಿಕಾರಕ್ಕೆ. ಇಂತಹ ಅನುಭವಗಳು ಹೆಚ್ಚಾದಂತೆ ಮನುಷ್ಯ ಅರಿಯುತ್ತಾನೆ ನಿಜವಾದ ಶಾಂತಿ ಹೊರಗಿನ ಜನಸಮೂಹದಲ್ಲಿ ಅಲ್ಲ, ಒಳಗಿನ ಏಕಾಂತದಲ್ಲಿದೆ.

ಏಕಾಂತ ಎಂದರೆ ಒಂಟಿತನವಲ್ಲ. ಒಂಟಿತನ ನೋವನ್ನು ಉಂಟುಮಾಡಬಹುದು; ಆದರೆ ಏಕಾಂತ ಜ್ಞಾನವನ್ನು ನೀಡುತ್ತದೆ. ಒಂಟಿತನದಲ್ಲಿ ನಾವು ಯಾರನ್ನೋ ಹುಡುಕುತ್ತೇವೆ. ಏಕಾಂತದಲ್ಲಿ ನಾವು ನಮ್ಮನ್ನೇ ಕಂಡುಕೊಳ್ಳುತ್ತೇವೆ. ಇದೇ ಎರಡರ ನಡುವಿನ ಮಹತ್ತರ ವ್ಯತ್ಯಾಸ.

ಬದುಕಿನಲ್ಲಿ ಸೋಲುಗಳು ಬಂದಾಗ ಜನರು ದೂರವಾಗಬಹುದು. ಹಣ ಕಳೆದುಹೋದಾಗ ಸಂಬಂಧಗಳ ಬಣ್ಣ ಬದಲಾಗಬಹುದು. ಆರೋಗ್ಯ ಕುಸಿದಾಗ ಅನೇಕರು ವಿಚಾರಿಸುವುದನ್ನೇ ಮರೆತುಬಿಡಬಹುದು. ಆದರೆ ಈ ಎಲ್ಲ ಸಂದರ್ಭಗಳಲ್ಲಿ ನಮ್ಮನ್ನು ಬಿಟ್ಟುಹೋಗದ ಸಂಗಾತಿ ಏಕಾಂತ. ಅದು ನಮ್ಮೊಂದಿಗೆ ಕುಳಿತು ನಮ್ಮ ನೋವನ್ನು ಕೇಳುತ್ತದೆ. ಮಾತಾಡದಿದ್ದರೂ ಅರ್ಥಮಾಡಿಕೊಳ್ಳುತ್ತದೆ. ತೀರ್ಪು ನೀಡುವುದಿಲ್ಲ; ಕೇವಲ ನಮ್ಮೊಳಗೆ ಬೆಳಕು ಹಚ್ಚುತ್ತದೆ.

ಇತಿಹಾಸದ ಅನೇಕ ಮಹಾನ್ ವ್ಯಕ್ತಿಗಳು ತಮ್ಮ ಜೀವನದ ಮಹತ್ವದ ನಿರ್ಧಾರಗಳನ್ನು ಗದ್ದಲದ ನಡುವೆ ತೆಗೆದುಕೊಂಡಿಲ್ಲ. ಮೌನದ ಕ್ಷಣಗಳಲ್ಲಿ, ಏಕಾಂತದ ಸಂವಾದದಲ್ಲಿ ತಮ್ಮ ದಾರಿಯನ್ನು ಕಂಡುಕೊಂಡರು. ದೊಡ್ಡ ಆಲೋಚನೆಗಳು, ಅಮೂಲ್ಯ ಕೃತಿಗಳು, ಹೊಸ ಸಂಶೋಧನೆಗಳು, ಆಳವಾದ ಕಾವ್ಯಗಳು?ಇವೆಲ್ಲವೂ ಬಹುಪಾಲು ಏಕಾಂತದ ಮಡಿಲಲ್ಲೇ ಹುಟ್ಟಿವೆ. ಏಕೆಂದರೆ ಮನಸ್ಸು ಹೊರಗಿನ ಶಬ್ದಗಳಿಂದ ಮುಕ್ತವಾದಾಗ ಮಾತ್ರ ಒಳಗಿನ ಧ್ವನಿ ಕೇಳಿಸುತ್ತದೆ.

ನಾವು ಕೆಲವೊಮ್ಮೆ ನಮ್ಮ ಜೀವನವನ್ನು ಇತರರ ಮೆಚ್ಚುಗೆಗಾಗಿ ಬದುಕುತ್ತೇವೆ. ಅವರು ಏನು ಹೇಳುತ್ತಾರೆ? ಅವರು ಏನು ಯೋಚಿಸುತ್ತಾರೆ? ಸಮಾಜ ಹೇಗೆ ನೋಡುತ್ತದೆ? ಎಂಬ ಪ್ರಶ್ನೆಗಳು ನಮ್ಮ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳುತ್ತವೆ. ಆದರೆ ಏಕಾಂತ ಒಂದು ಮಹತ್ವದ ಪಾಠ ಕಲಿಸುತ್ತದೆ ನಿನ್ನ ಬದುಕಿನ ಅರ್ಥವನ್ನು ನಿರ್ಧರಿಸುವ ಹಕ್ಕು ನಿನಗೇ ಸೇರಿದೆ ಎಂದು.

ಸಂಪತ್ತು, ಅಧಿಕಾರ, ಜನಪ್ರಿಯತೆ ಇವೆಲ್ಲವೂ ಶಾಶ್ವತವೆಂದು ಭಾಸವಾಗಬಹುದು. ಆದರೆ ಕಾಲದ ಮುಂದೆ ಇವುಗಳಿಗೂ ಮಿತಿಯಿದೆ. ಇಂದು ಹೊಗಳುವವರು ನಾಳೆ ಟೀಕಿಸಬಹುದು. ಇಂದು ಹತ್ತಿರವಿರುವವರು ನಾಳೆ ದೂರವಾಗಬಹುದು. ಇಂದು ತುಂಬಿರುವ ಮನೆ ನಾಳೆ ಖಾಲಿಯಾಗಬಹುದು. ಆದರೆ ತನ್ನೊಳಗೆ ಬದುಕಲು ಕಲಿತ ವ್ಯಕ್ತಿಗೆ ಈ ಬದಲಾವಣೆಗಳು ಭಯ ಹುಟ್ಟಿಸುವುದಿಲ್ಲ.

ಏಕಾಂತ ನಮ್ಮ ದೌರ್ಬಲ್ಯಗಳನ್ನು ತೋರಿಸುತ್ತದೆ. ಅದೇ ಸಮಯದಲ್ಲಿ ನಮ್ಮ ಸಾಮರ್ಥ್ಯವನ್ನೂ ಪರಿಚಯಿಸುತ್ತದೆ. ನಾವು ಎಷ್ಟು ಬಲಿಷ್ಠರು, ಎಷ್ಟು ಸಹನಶೀಲರು, ಎಷ್ಟು ಪ್ರಾಮಾಣಿಕರು ಎಂಬುದನ್ನು ತಿಳಿಯಲು ಹೊರಗಿನ ಪ್ರಶಂಸೆ ಅಗತ್ಯವಿಲ್ಲ. ಕೆಲವು ಮೌನದ ಕ್ಷಣಗಳೇ ಸಾಕು.

ಬದುಕಿನಲ್ಲಿ ಪ್ರತಿಯೊಬ್ಬರೂ ಒಂದಲ್ಲೊಂದು ದಿನ ತಮ್ಮ ನಾಟಕೀಯ ಮುಖವಾಡವನ್ನು ಕಳಚಲೇಬೇಕು. ನಗುವಿನ ಹಿಂದೆ ಅಡಗಿರುವ ನೋವು, ಯಶಸ್ಸಿನ ಹಿಂದೆ ಇರುವ ಹೋರಾಟ, ಆತ್ಮವಿಶ್ವಾಸದ ಹಿಂದೆ ಇರುವ ಭಯ ಇವೆಲ್ಲವೂ ಏಕಾಂತದ ಮುಂದೆ ಮರೆಯಾಗುವುದಿಲ್ಲ. ಅದಕ್ಕಾಗಿಯೇ ಏಕಾಂತ ಅತ್ಯಂತ ಪ್ರಾಮಾಣಿಕ ಕನ್ನಡಿ.

ಇಂದಿನ ವೇಗದ ಜೀವನದಲ್ಲಿ ಜನರು ತಮ್ಮೊಂದಿಗೆ ಮಾತನಾಡುವುದನ್ನೇ ಮರೆತಿದ್ದಾರೆ. ಬೆಳಗ್ಗೆಯಿಂದ ರಾತ್ರಿ ತನಕ ಕೆಲಸ, ಪರದೆ, ಸಂದೇಶಗಳು, ಸಭೆಗಳು ಇವೆಲ್ಲವೂ ಸಮಯವನ್ನು ಕಸಿದುಕೊಳ್ಳುತ್ತವೆ. ಆದರೆ ಕೆಲವೇ ನಿಮಿಷಗಳ ಏಕಾಂತ ಮನಸ್ಸಿಗೆ ಹೊಸ ಶಕ್ತಿ ನೀಡುತ್ತದೆ. ಅದು ಜೀವನವನ್ನು ಮತ್ತೆ ಸರಿಯಾದ ದೃಷ್ಟಿಯಿಂದ ನೋಡುವ ಅವಕಾಶ ನೀಡುತ್ತದೆ.

ಸಂಬಂಧಗಳು ಅಮೂಲ್ಯ. ಸ್ನೇಹವೂ ಅಗತ್ಯ. ಕುಟುಂಬವೂ ಬದುಕಿನ ಆಧಾರ. ಆದರೆ ಅವುಗಳ ನಡುವೆ ನಮ್ಮ ಸ್ವಂತ ಅಸ್ತಿತ್ವವನ್ನು ಕಳೆದುಕೊಳ್ಳಬಾರದು. ನಮ್ಮೊಳಗಿನ ಮೌನವನ್ನು ಕಾಪಾಡಿಕೊಳ್ಳಬೇಕು. ಏಕೆಂದರೆ ಹೊರಗಿನ ಎಲ್ಲ ಸಂಬಂಧಗಳು ಒಂದು ದಿನ ಬದಲಾಗಬಹುದು; ಆದರೆ ನಮ್ಮೊಂದಿಗೆ ಇರುವ ಸಂಬಂಧ ಮಾತ್ರ ಕೊನೆಯವರೆಗೂ ಉಳಿಯುತ್ತದೆ.

ಜೀವನವನ್ನು ಒಂದು ನಾಟಕವೆಂದು ಹೇಳುವುದರಲ್ಲಿ ತಪ್ಪಿಲ್ಲ. ಪ್ರತಿಯೊಬ್ಬರೂ ಒಂದೊಂದು ಪಾತ್ರವನ್ನು ನಿರ್ವಹಿಸುತ್ತಾರೆ. ಕೆಲವರು ನಾಯಕರು, ಕೆಲವರು ಸಹನಟರು, ಕೆಲವರು ಕೆಲವೇ ಕ್ಷಣಗಳಿಗೆ ಬಂದು ಹೋಗುವ ಪಾತ್ರಗಳು. ಆದರೆ ನಾಟಕ ಮುಗಿದ ನಂತರ ವೇದಿಕೆ ಖಾಲಿಯಾಗುತ್ತದೆ. ಆಗ ಉಳಿಯುವುದು ನಟನಲ್ಲ, ಪಾತ್ರವಲ್ಲ ಮನುಷ್ಯನ ಅಂತರಂಗ ಮಾತ್ರ.

ಆದ್ದರಿಂದ ಏಕಾಂತವನ್ನು ಭಯಪಡಬೇಡಿ. ಅದನ್ನು ಶಿಕ್ಷೆಯೆಂದು ಭಾವಿಸಬೇಡಿ. ಅದು ನಿಮ್ಮನ್ನು ನಿಮ್ಮತ್ತ ಕರೆದೊಯ್ಯುವ ಪವಿತ್ರ ದಾರಿ. ಅದು ನಿಮ್ಮ ತಪ್ಪುಗಳನ್ನು ಕ್ಷಮಿಸಲು, ನಿಮ್ಮ ಕನಸುಗಳನ್ನು ಮರುಹುಟ್ಟಿಸಲು, ನಿಮ್ಮ ಆತ್ಮವಿಶ್ವಾಸವನ್ನು ಮತ್ತೆ ಕಟ್ಟಿಕೊಳ್ಳಲು ಸಹಾಯ ಮಾಡುತ್ತದೆ. ಏಕಾಂತದಲ್ಲಿ ಕಳೆದುಹೋಗುವುದಿಲ್ಲ; ಸರಿಯಾದ ರೀತಿಯಲ್ಲಿ ಬದುಕಿದರೆ ಅಲ್ಲಿಯೇ ನಮ್ಮನ್ನು ನಾವು ಕಂಡುಕೊಳ್ಳುತ್ತೇವೆ.

ಕೊನೆಗೆ ಒಂದು ಸತ್ಯ ಮಾತ್ರ ಉಳಿಯುತ್ತದೆ. ಬದುಕಿನ ವೇದಿಕೆಯಲ್ಲಿ ತೆರೆ ಇಳಿದಾಗ, ಚಪ್ಪಾಳೆಗಳು ನಿಂತಾಗ, ಜನಸಮೂಹ ಚದುರಿದಾಗ, ಹೊಗಳಿಕೆಗಳು ಮೌನವಾದಾಗ, ಅಧಿಕಾರ ಮತ್ತು ಆಸ್ತಿ ಅರ್ಥ ಕಳೆದುಕೊಂಡಾಗ ನಮ್ಮೊಂದಿಗೆ ಉಳಿಯುವುದು ನಮ್ಮ ಮನಸ್ಸು, ನಮ್ಮ ನೆನಪುಗಳು ಮತ್ತು ನಮ್ಮ ಏಕಾಂತ ಮಾತ್ರ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,